ಸಂಪುಟ: 06 ಸಂಚಿಕೆ: 60 ಪುಟಗಳು: 08 ಗುರುವಾರ 14 ಮೇ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಿಮಗಾಗಿ ಏನನ್ನೂ ಬಯಸಬೇಡಿ, ಎಲ್ಲವನ್ನೂ ಇತರರಿಗಾಗಿ ಮಾಡಿ, ಭಗವಂತನಲ್ಲೇ ಇರುವುದು ಅವನಲ್ಲೇ ಬಾಳುವುದು, ಚಲಿಸುವುದು ಎಂದರೆ ಇದೇ.

# ರಾಜ್ಯ ಸರ್ಕಾರಕ್ಕೆ ತಲೆನೋವಾದ ಎಸ್ ಸಿ, ಎಸ್ ಟಿ ಮೀಸಲಾತಿ ಜಟಾಪಟಿ

## ● ಮೀಸಲಾತಿ ಕಡಿಮೆ ಮಾಡಲು ಮತ್ತು ಘನಂದಾರಿ ಕೆಲಸಕ್ಕೆ ಸಿದ್ದರಾಮಯ್ಯನವರ ಸರಕಾರವೇ ಬೇಕಿತ್ತೇ

• **ಉದಯವಾಹಿನಿ, ಬೆಂಗಳೂರು**

ದಲಿತರ ಪರ, ಸಂವಿಧಾನದ ಪರ ಮತ್ತು ಡಾ. ಅಂಬೇಡ್ಕರರ ಪರ ಎನ್ನುವ ಕಾಂಗ್ರೆಸ್ಸಿನವರು ಈಗ ಮೀಸಲಾತಿ ವಿಚಾರದಲ್ಲಿ ಈ ಮೂರಕ್ಕೂ ಎಳ್ಳುನೀರು ಬಿಟ್ಟಿದ್ದಾರೆ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆರೋಪಿಸಿದ್ದಾರೆ. ಹೆಚ್ಚುವರಿ ಮೀಸಲಾತಿ ಪ್ರಮಾಣವನ್ನು ಕಾಂಗ್ರೆಸ್ ಸರಕಾರ ತಡೆಹಿಡಿದಿದೆ. ಇದಕ್ಕೆ 9ನೇ ಶೆಡ್ಯೂಲ್ ಕಾರಣವಲ್ಲ; ಸರಿಯಾಗಿ ವಾದ ಮಂಡಿಸದೇ ಇದ್ದುದೇ ಇದಕ್ಕೆ ಕಾರಣ ಎಂದು ಟೀಕಿಸಿದ್ದಾರೆ.

ಕರ್ನಾಟಕ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಸವರಾಜ ಬೊಮ್ಮಾಯಿ ಅವರ ಬಿಜೆಪಿ ಸರಕಾರ ಇದ್ದಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಬಹುದಿನಗಳ ಹೋರಾಟಕ್ಕೆ ತೆರೆ ಎಳೆಯಲು ಎಸ್‌ಸಿ, ಎಸ್‌ಟಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿದ್ದರು ಎಂದು ತಿಳಿಸಿದರು. ಈ ಏರಿಕೆಯ ಬಳಿಕ ಸುಮಾರು ಮೂರೂವರೆ ವರ್ಷಗಳ ಕಾಲ ಯಾವ ತೊಂದರೆ, ತೊಡಕೂ ಇಲ್ಲದೇ ಎಲ್ಲಾ ರೀತಿಯ ಸವಲತ್ತುಗಳೂ ಈ ಜನಾಂಗಕ್ಕೆ ಲಭಿಸಿವೆ ಎಂದು ಹೇಳಿದರು.

ಮೀಸಲಾತಿ ಪ್ರಮಾಣವನ್ನು ಕೂಡಲೇ ಹೆಚ್ಚಿಸಬೇಕೆಂದು ಅವರು ಆಗ್ರಹಿಸಿದರು. ಇಲ್ಲವಾದರೆ ರಾಜ್ಯದಲ್ಲಿ ದೊಡ್ಡ ಆಂದೋಲನ




ಮಾಡಲಿದ್ದೇವೆ; ಯಾವುದೇ ಸಂಘಟನೆ ಹೋರಾಟಕ್ಕೆ ಇಳಿದರೆ ಅವರನ್ನು ಬೆಂಬಲಿಸುತ್ತೇವೆ ಎಂದು ಪ್ರಕಟಿಸಿದರು.

ಬೊಮ್ಮಾಯಿಯವರು ಮೀಸಲಾತಿ ಹೆಚ್ಚಿಸಿದಾಗ ಕಾಂಗ್ರೆಸ್ಸಿಗರು ಶೆಡ್ಯೂಲ್ 9ಕ್ಕೆ ಸೇರಿಸಬೇಕಿತ್ತು ಎಂದು ಅಪಸ್ವರ ತೆಗೆದಿದ್ದರು. ವಕೀಲರಾದ ಸಿದ್ದರಾಮಯ್ಯನವರ ಪ್ರಾಕ್ಟೀಸ್ ಕೇವಲ ಭಾನುವಾರ ಇತ್ತೇ ಅಥವಾ ಬೇರೆ ದಿನಗಳಲ್ಲೇ ಇತ್ತೇ ಎಂದು ಕೇಳಿದರು. ನೀವೇನು ಭಾನುವಾರದ ವಕೀಲರೇ ಎಂದು ಪ್ರಶ್ನಿಸಿದರು.

ಛತ್ತೀಸಗಡದಲ್ಲಿ ಒಟ್ಟು ಶೇ 58 ಮೀಸಲಾತಿ ಕೊಟ್ಟಿದ್ದಾರೆ. ಕೋರ್ಟ್ ಅದನ್ನು ಹೇಗೆ ಅನುಮತಿಸಿದೆ ಎಂದ ಅವರು, ಎಸ್‌ಸಿ, ಎಸ್‌ಟಿ ಮೀಸಲಾತಿ ಜನಸಂಖ್ಯಾ ಆಧರಿತ ಎಂದು ಗಮನ ಸೆಳೆದರು. ಇದು ಸಂವಿಧಾನದತ್ತ ಎಂದರು. ತಮಿಳುನಾಡಿನಲ್ಲಿ ಶೇ 69 ಮೀಸಲಾತಿ ತಂದಿದ್ದಾರೆ ಎಂದು ವಿವರಿಸಿದರು.

ಕಾಂಗ್ರೆಸ್ ಪಕ್ಷವು ನ್ಯಾ. ನಾಗಮೋಹನದಾಸ್ ಆಯೋಗದ ವರದಿಯನ್ನು ಕಡೆಗಣಿಸಿದೆ. ಅವರ ಶಿಫಾರಸನ್ನು ಒಪ್ಪಿ ನಾವು ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಿಸಿದ್ದೆವು ಎಂದು ತಿಳಿಸಿದರು. ಈಗ ನಿಮಗೆ ಕೊಡುವ ಇಚ್ಛೆ ಇಲ್ಲವೇ ಹಾಗಾಗಿಯೇ ನಿಮ್ಮ ವಕೀಲರು ಕೋರ್ಟಿಗೆ ಹಾಜರಾಗಿಲ್ಲ ಎಂದು ದೂರಿದರು.

ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಮಾತನಾಡಿ, 'ಮೀಸಲಾತಿ ಪ್ರಮಾಣ ಕಡಿತ ಮಾಡಿ ಎಸ್‌ಟಿಗಳಿಗೆ ಅವಮಾನ ಮಾಡಿದ್ದಾರೆ. ದಲಿತರ ಬೆನ್ನಿಗೆ ಇವರು ಚೂರಿ ಹಾಕಿದ್ದಾರೆ. ಇದು ಇವರ ದ್ವಂದ್ವ ನೀತಿ ಎಂದು ಆಕ್ಷೇಪಿಸಿದರು. ಇದನ್ನು ಕೂಡಲೇ ಸರಿಪಡಿಸಬೇಕು ಎಂದು ಆಗ್ರಹಿಸಿದರು. ಇದನ್ನು ಸರಿಪಡಿಸದೇ ಇದ್ದರೆ ಹೋರಾಟವು ದೊಡ್ಡ ಜ್ವಾಲೆಯಾಗಿ ರಾಜ್ಯ ಸರಕಾರವನ್ನು ಕಿತ್ತೆಸೆಯುವಂಥ ತೀರ್ಮಾನವನ್ನು ಆ ಸಮುದಾಯದವರು ಮಾಡಲಿದ್ದಾರೆ.

ನಾವು ಕೂಡ ಅವರ ಹೋರಾಟಕ್ಕೆ ಬೆಂಬಲ ಕೊಡುತ್ತೇವೆ' ಎಂದು ತಿಳಿಸಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ವಿಧಾನಪರಿಷತ್ತಿನ ವಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ರಾಜ್ಯ ಬಿಜೆಪಿ ಉಪಾಧ್ಯಕ್ಷ ರಾಜುಗೌಡ ನಾಯಕ್, ಎಸ್‌ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸದಾಸ ಕರಿಯಪ್ಪ ಅವರು ಭಾಗವಹಿಸಿದ್ದರು.

**ದಲಿತರ ಬೆನ್ನಿಗೆ ಇವರು ಚೂರಿ**

'ಮೀಸಲಾತಿ ಪ್ರಮಾಣ ಕಡಿತ ಮಾಡಿ ಎಸ್‌ಟಿಗಳಿಗೆ ಅವಮಾನ ಮಾಡಿದ್ದಾರೆ. ದಲಿತರ ಬೆನ್ನಿಗೆ ಇವರು ಚೂರಿ ಹಾಕಿದ್ದಾರೆ. ಇದು ಇವರ ದ್ವಂದ್ವ ನೀತಿ ಎಂದು ಆಕ್ಷೇಪಿಸಿದರು. ಇದನ್ನು ಕೂಡಲೇ ಸರಿಪಡಿಸಬೇಕು ಎಂದು ಆಗ್ರಹಿಸಿದರು. ಇದನ್ನು ಸರಿಪಡಿಸದೇ ಇದ್ದರೆ ಹೋರಾಟವು ದೊಡ್ಡ ಜ್ವಾಲೆಯಾಗಿ ರಾಜ್ಯ ಸರಕಾರವನ್ನು ಕಿತ್ತೆಸೆಯುವಂಥ ತೀರ್ಮಾನವನ್ನು ಆ ಸಮುದಾಯದವರು ಮಾಡಲಿದ್ದಾರೆ. ನಾವು ಕೂಡ ಅವರ ಹೋರಾಟಕ್ಕೆ ಬೆಂಬಲ ಕೊಡುತ್ತೇವೆ' ಎಂದು ವಿರೋಧ ಪಕ್ಷದ ನಾಯಕ ಆರ್ ಅಶೋಕ್ ತಿಳಿಸಿದರು.

## ನಿರೀಕ್ಷಣಾ ಜಾಮೀನು ಪಡೆದ ವಚನಾನಂದ ಸ್ವಾಮೀಜಿ

• **ಉದಯವಾಹಿನಿ, ದಾವಣಗೆರೆ**

ಮಕ್ಕಳ ಮೇಲೆ ದೌರ್ಜನ್ಯ ಹಾಗೂ ದುರ್ಬಳಕೆಯ ಆರೋಪ ಎದುರಾಗುತ್ತಿದ್ದಂತೆ ನ್ಯಾಯಾಲಯದ ಮೊರೆ ಹೋಗಿದ್ದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪದಚ್ಯುತ ಪೀಠಾಧಿಪತಿ ವಚನಾನಂದ ಸ್ವಾಮೀಜಿ ಅವರು ಮೇ 2ರಂದು ನಿರೀಕ್ಷಣಾ ಜಾಮೀನು ಪಡೆದಿದ್ದಾರೆ. ಇದರಿಂದ ಅವರ ಬಂಧನ ಸಾಧ್ಯತೆ ವಿರಳ ಎನ್ನಲಾಗುತ್ತಿದೆ. ವಚನಾನಂದ ಸ್ವಾಮೀಜಿ ಅವರು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಕಲಂ– 482ರ ಅಡಿ ನಿರೀಕ್ಷಣಾ ಜಾಮೀನು ಕೋರಿ ಏ.21ರಂದು ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಅವರಿಗೆ ಜಾಮೀನು ಮಂಜೂರು ಮಾಡಿತ್ತು ವಚನಾನಂದ ಶ್ರೀ ಅವರನ್ನು ಪೀಠದಿಂದ ಪದಚ್ಯುತಿಗೊಳಿಸುತ್ತಿದ್ದಂತೆ ಮಠವು ಸ್ವಾಮೀಜಿ ಪರ ಮತ್ತು ವಿರೋಧಿ ಬಣಗಳ ಚಟುವಟಿಕೆಯ ತಾಣವಾಗಿತ್ತು. ಸ್ವಾಮೀಜಿ ಹಾಗೂ ಟ್ರಸ್ಟ್ ಸದಸ್ಯರು ತಮ್ಮ ಶಕ್ತಿ ಪ್ರದರ್ಶನ ಮಾಡಿದ್ದರು. ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟಾಗುವುದನ್ನು ಅರಿತ ಜಿಲ್ಲಾಡಳಿತ, ಮೇ 4ರಿಂದ ಮಠದ ಆವರಣದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದೆ.

## ಪ್ರತಿಕೂಲ ಸಾಕ್ಷ್ಯ: ಪರಿಹಾರಕ್ಕೆ ಅವಕಾಶವಿಲ್ಲ; ಹೈಕೋರ್ಟ್

• **ಉದಯವಾಹಿನಿ, ಬೆಂಗಳೂರು**

'ಕ್ರಿಮಿನಲ್ ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್ ಪರವಾಗಿ ಸಾಕ್ಷ್ಯ ನುಡಿಯದೆ ಪ್ರತಿಕೂಲ ಸಾಕ್ಷ್ಯ ನುಡಿಯುವವರಿಗೆ ಸರ್ಕಾರದ ಸಂತ್ರಸ್ತರ ಪರಿಹಾರ ಯೋಜನೆ ಅಡಿಯಲ್ಲಿ ಪರಿಹಾರ ನೀಡುವುದಕ್ಕೆ ಅವಕಾಶವಿಲ್ಲ' ಎಂದು ಹೈಕೋರ್ಟ್ ತಿಳಿಸಿದೆ. ಪ್ರಕರಣವೊಂದರಲ್ಲಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿದ್ದ ಕ್ರಿಮಿನಲ್ ಮರು ಪರಿಶೀಲನಾ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. 'ಸಂತ್ರಸ್ತೆ ನೀಡಿದ ಪ್ರತಿಕೂಲ ಹೇಳಿಕೆಯ ಆಧಾರದಲ್ಲಿ ಆರೋಪಿ ಖುಲಾಸೆಗೊಂಡಿದ್ದಾನೆ. ಆದ್ದರಿಂದ, ಪ್ರತಿಕೂಲ ಹೇಳಿಕೆ ನೀಡಿದ ಸಂತ್ರಸ್ತೆಗೆ ಪರಿಹಾರ ನೀಡಲು ನಿರ್ದೇಶಿಸಿರುವ ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಲಾಗಿದೆ' ಎಂದು ನ್ಯಾಯಪೀಠ ತಿಳಿಸಿದೆ. ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಪರ ಎ.ಎಸ್.ವಿಶ್ವೇಶ್ ವಾದ ಮಂಡಿಸಿದ್ದರು.

**ಪ್ರಕರಣ:** ತುಮಕೂರು ಜಿಲ್ಲೆಯ ಹುಳಿಯಾರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅತ್ಯಾಚಾರ ಆರೋಪದ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು. ಪ್ರಕರಣದಲ್ಲಿ 21 ವರ್ಷದ ಸಂತ್ರಸ್ತೆ ತನಿಖಾಧಿಕಾರಿ ಮತ್ತು ಮ್ಯಾಜಿಸ್ಟ್ರೇಟ್ ಮುಂದೆ ತಮ್ಮ ಹೇಳಿಕೆ ದಾಖಲಿಸಿದ್ದರು.

## ನೀಟ್: ರಾಜ್ಯಕ್ಕೆ ಅಧಿಕಾರ ನೀಡಿ: ಎಂ.ಸಿ.ಸುಧಾಕರ್

• **ಉದಯವಾಹಿನಿ, ಬೆಂಗಳೂರು**

'ರಾಜ್ಯ ಕೋಟಾದ ವೈದ್ಯಕೀಯ ಸೀಟುಗಳನ್ನು ಭರ್ತಿ ಮಾಡಿಕೊಳ್ಳಲು ಆಯಾ ರಾಜ್ಯಗಳಿಗೇ ಅಧಿಕಾರ ನೀಡಬೇಕು. ಕರ್ನಾಟಕದಲ್ಲಿ ಪರೀಕ್ಷೆ ಆಯೋಜಿಸುವ ಸಾಮರ್ಥ್ಯ ಕೆಇಎಗೆ ಇದೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಅಖಿಲ ಭಾರತ ಕೋಟಾದ ಸೀಟುಗಳಿಗೆ ಮಾತ್ರ ನೀಟ್ ನಡೆಸಬೇಕು' ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಆಗ್ರಹಿಸಿದರು.

ಪ್ರಶ್ನೆಪತ್ರಿಕೆ ಸೋರಿಕೆ ಕಾರಣಕ್ಕೆ ನೀಟ್ ಪರೀಕ್ಷೆ ರದ್ದಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅವರು, 'ರಾಜ್ಯದಲ್ಲಿ 10 ಸಾವಿರಕ್ಕೂ ಹೆಚ್ಚು ವೈದ್ಯಕೀಯ ಸೀಟುಗಳು ಲಭ್ಯವಿದ್ದು, ಶೇ 15ರಷ್ಟು ಸೀಟುಗಳನ್ನು ಮಾತ್ರ ಅಖಿಲ ಭಾರತ ಕೋಟಾದಲ್ಲಿ ಭರ್ತಿ ಮಾಡಲಾಗುತ್ತದೆ. ಉಳಿದ ಶೇ 85ರಷ್ಟು ಸಿಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವೇ ಹಂಚಿಕೆ ಮಾಡುತ್ತದೆ.


ಹಾಗಾಗಿ, ರಾಜ್ಯ ಕೋಟಾದ ಸೀಟುಗಳಿಗೆ ಸಿಇಟಿ ಮಾದರಿಯಲ್ಲೇ ಪರೀಕ್ಷೆ ನಡೆಸಲು ಅನುಮತಿ ನೀಡಬೇಕು ಎನ್ನುವುದು ರಾಜ್ಯದ ಬೇಡಿಕೆ. ಇದರಿಂದ ಸಿಇಟಿ ಪ್ರಕ್ರಿಯೆಯಲ್ಲಿನ ವಿಳಂಬವನ್ನೂ ತಪ್ಪಿಸಬಹುದು' ಎಂದರು.

# ವಿಶ್ವಾಸ ಗೆದ್ದ ವಿಜಯ್

## 144 ಮತಗಳಿಂದ ವಿಶ್ವಾಸಗಳಿಸಿದ ದಳಪತಿ

### ಎಐಎಡಿಎಂಕೆ ಬಣದ ಶಾಸಕರಿಂದಲೂ ಬೆಂಬಲ

**ತಮಿಳುನಾಡು ವಿಧಾನಸಭೆಯಲ್ಲಿ ತಮಿಳಗ ವೆಟ್ರಿ ಕಳಗಂ ಸರ್ಕಾರ ವಿಶ್ವಾಸಮತ ಗೆದ್ದಿದೆ. ಮೂರನೇ ದಿನದ ಅಧಿವೇಶನದಲ್ಲಿ ಸಿಎಂ ವಿಜಯ್ ವಿಶ್ವಾಸಮತ ಯಾಚನೆ ಮಾಡಿದರು. ಸಿಎಂ ಮಂಡಿಸಿದ ವಿಶ್ವಾಸ ಮತಯಾಚನೆ ನಿರ್ಣಯವನ್ನು ಕಾಂಗ್ರೆಸ್, ಸಿಪಿಐ, ಸಿಪಿಐಎಂ, ವಿಸಿಕೆ ಸೇರಿ ಹಲವು ಪಕ್ಷಗಳು ವಿಶ್ವಾಸಮತ ಯಾಚನೆ ವೇಳೆ ತಮ್ಮ ಬೆಂಬಲ ಸೂಚಿಸಿದವು. ವಾಕ್ ಔಟ್ ಮಾಡಿದ ಡಿಎಂಕೆ, ವಿರೋಧ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್ ನೇತೃತ್ವದ ಡಿಎಂಕೆ ಸದಸ್ಯರು ವಾಕ್ ಔಟ್ ಮಾಡಿ ಮತದಾನದಿಂದ ದೂರ ಉಳಿದರು.**



**2006ರ ಇತಿಹಾಸ ಕೆದಕಿದ ಸಿಎಂ ವಿಜಯ್!**

• **ಉದಯವಾಹಿನಿ, ದೆಹಲಿ**

ವಿಜಯ್ ಬೆಂಬಲಿಸಿದ ಎಐಎಡಿಎಂಕೆ ಒಂದು ಬಣ, 233 ಸದಸ್ಯರ ವಿಧಾನಸಭೆಯಲ್ಲಿ, 144 ಸದಸ್ಯರು ವಿಶ್ವಾಸ ನಿರ್ಣಯದ ಪರವಾಗಿ ಮತ ಚಲಾಯಿಸಿದರೆ, 22 ಸದಸ್ಯರು ನಿರ್ಣಯವನ್ನು ವಿರೋಧಿಸಿದರು. ಐದು ಸದಸ್ಯರು ತಟಸ್ಥವಾಗಿ ಉಳಿದರು. ವಿಶೇಷ ಎಂದರೆ ನಿರ್ಣಯದ ಪರವಾಗಿ ಮತ ಚಲಾಯಿಸಿದವರಲ್ಲಿ ಎಐಎಡಿಎಂಕೆಯ 25 ಶಾಸಕರು ಕೂಡ ಸೇರಿದ್ದಾರೆ. ಹೀಗೆ ನಡೆಯಿತು ಮತದಾನ ಪ್ರಕ್ರಿಯೆ. ಮತದಾನ ಪ್ರಕ್ರಿಯೆಗಾಗಿ ಸದನವನ್ನು ಆರು ವಿಭಾಗಗಳಾಗಿ ವಿಂಗಡಿಸಲಾಯಿತು. ಸದಸ್ಯರು ನಿರ್ಣಯ ಬೆಂಬಲಿಸುತ್ತೀರಾ, ವಿರೋಧಿಸುತ್ತೀರಾ ಅಥವಾ ಗೈರು ಹಾಜರಾಗುತ್ತೀರಾ ಎಂದು ಸೂಚಿಸಲು ಕೇಳಲಾಯಿತು.

ಬಹುಮತಕ್ಕೆ 117 ಶಾಸಕರು ಅಗತ್ಯವಿದ್ದರೂ, ಟಿವಿಕೆ ಸರ್ಕಾರವು 144 ಶಾಸಕರ ಬೆಂಬಲವನ್ನು ಪಡೆದುಕೊಂಡಿತು. ಈ ಮೂಲಕ ಸುಲಭವಾಗಿ ಬಹುಮತಕ್ಕೆ ಅಗತ್ಯ ಇರುವ ಸಂಖ್ಯಾಬಲವನ್ನು ದಾಟಿತು.

ಈ ನಡುವೆ 22 ಎಐಎಡಿಎಂಕೆ ಶಾಸಕರು ನಿರ್ಣಯದ ವಿರುದ್ಧ ಮತ ಚಲಾಯಿಸಿದರೆ, ಪಿಎಂಕೆ ಮತ್ತು ಇತರ ಐದು ಸದಸ್ಯರು ತಟಸ್ಥರಾಗಿದ್ದರು. ಒಟ್ಟು 171 ಸದಸ್ಯರು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು. ಕೋರ್ಟ್ ಸೂಚನೆ ಹಿನ್ನೆಲೆ ವಿಶ್ವಾಸ ಮತಯಾಚನೆಯಲ್ಲಿ ಪಾಲ್ಗೊಳ್ಳದ ಟಿವಿಕೆ ಶಾಸಕ: ಮದ್ರಾಸ್ ಹೈಕೋರ್ಟ್ ವಿಧಿಸಿದ ಮಧ್ಯಂತರ ನಿರ್ಬಂಧದಿಂದಾಗಿ ತಿರುಪ್ಪತ್ತೂರಿನ ಟಿವಿಕೆ ಶಾಸಕ ಶ್ರೀನಿವಾಸ ಸೇತುಪತಿ ವಿಶ್ವಾಸ ಮತಯಾಚನೆಯಲ್ಲಿ ಭಾಗವಹಿಸಲಿಲ್ಲ. ಮತದಾನದ ನಂತರ, ಸ್ಪೀಕರ್ ಜೆ.ಸಿ.ಡಿ. ಪ್ರಭಾಕರ್, ವಿಜಯ್ ನೇತೃತ್ವದ ಟಿವಿಕೆ ಸರ್ಕಾರವು ವಿಶ್ವಾಸ ಮತಯಾಚನೆಯಲ್ಲಿ ಗೆದ್ದಿದೆ ಎಂದು ಅಧಿಕೃತವಾಗಿ ಘೋಷಿಸಿದರು.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ, 108 ಸ್ಥಾನಗಳನ್ನು ಗೆದ್ದು ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಟಿವಿಕೆ, ಸರ್ಕಾರ ರಚನೆಗೆ ಭಾರಿ ಕಸರತ್ತು ನಡೆಸಿತ್ತು.

ಈ ವೇಳೆ ಕಾಂಗ್ರೆಸ್ ಮೊದಲಿಗೆ ವಿಜಯ್ ಅವರಿಗೆ ಬೆಂಬಲ ಘೋಷಿಸಿತ್ತು. ಬಳಿಕ ಡಿಎಂಕೆ ಮಿತ್ರ ಪಕ್ಷಗಳಾದ ಎಡಪಕ್ಷಗಳು, ವಿಸಿಕೆ ಸೇರಿ ಹಲವು ಪಕ್ಷಗಳು ಬೆಂಬಲ ಘೋಷಿಸಿದ್ದವು.ಆರಂಭದಲ್ಲಿ ರಾಜ್ಯಪಾಲರು, ವಿಜಯ್ ಅವರನ್ನು ಸರ್ಕಾರ ರಚಿಸಲು ಆಹ್ವಾನಿಸುವ ಮೊದಲು ಬಹುಮತದ ಬೆಂಬಲ ಪಡೆಯುವಂತೆ ಒತ್ತಾಯಿಸಿದ್ದರು. ನಂತರ ಟಿವಿಕೆ ಪಕ್ಷ, ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷಗಳು, ವಿಸಿಕೆ ಮತ್ತು ಐಯುಎಂಎಲ್ ಪಕ್ಷಗಳಿಂದ ಬೆಂಬಲ ಪಡೆಯುವಲ್ಲಿ ಯಶಸ್ವಿಯಾಗಿತ್ತು. ಹಾಗಾಗಿ ವಿಜಯ್ ಮೇ 10ರಂದು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಕೂಡ ಸ್ವೀಕರಿಸಿದ್ದರು.

ವಿಜಯ್ ಸಿಎಂ ಆಗಿ ಪದಗ್ರಹಣ ಮಾಡಿದ ಮರು ದಿನ ಅಂದರೆ ಮೇ 11 ರಂದು ತಮಿಳುನಾಡಿನ 17ನೇ ವಿಧಾನಸಭೆಯ ಮೊದಲ ಅಧಿವೇಶನ ಕೂಡ ಆರಂಭವಾಗಿದೆ,ಅಧಿವೇಶನ ಆರಂಭವಾದ ಮೊದಲ ದಿನ ಹೊಸದಾಗಿ ಆಯ್ಕೆಯಾದ ಶಾಸಕರು ಪ್ರಮಾಣ ವಚನ ಸ್ವೀಕರಿಸಿದರು. ಎರಡನೇ ದಿನ, ಸ್ಪೀಕರ್ ಮತ್ತು ಉಪ ಸ್ಪೀಕರ್ ಆಯ್ಕೆಯೂ ನಡೆದಿತ್ತು. ಟಿವಿಕೆ ಸರ್ಕಾರ ವಿಶ್ವಾಸಮತ ಯಾಚನೆ ಇಂದಿನ ವಿಧಾನಸಭೆ ಕಲಾಪದ ಕೇಂದ್ರಬಿಂದುವಾಗಿತ್ತು. ವಿಶ್ವಾಸಮತ ಯಾಚನೆಗೂ ಮುನ್ನ ವಿಜಯ್ ನಿನ್ನೆ ಪನ್ಯೆಯೂರಿನಲ್ಲಿರುವ ಟಿವಿಕೆ ಪ್ರಧಾನ ಕಚೇರಿಯಲ್ಲಿ ಪಕ್ಷದ ಶಾಸಕರೊಂದಿಗೆ ಚರ್ಚೆ ನಡೆಸಿದರು. ಸಭೆಯಲ್ಲಿ ಸಚಿವ ಸಂಪುಟ ವಿಸ್ತರಣೆಯ ಬಗ್ಗೆಯೂ ಚರ್ಚಿಸಲಾಗಿದೆ ಎಂದು ವರದಿಗಳು ಹೇಳಿವೆ. ಈ ಮಧ್ಯೆ, ಚುನಾವಣಾ ಸೋಲಿನ ಬಳಿಕ ಆಂತರಿಕ ಸಂಘರ್ಷದಿಂದ ಎಐಎಡಿಎಂಕೆ ಪ್ರತಿಸ್ಪರ್ಧಿ ಬಣಗಳಾಗಿ ವಿಭಜನೆಯಾಗಿದೆ. ವಿಧಾನಸಭಾ ಅಧಿವೇಶನದ ಮೊದಲ ದಿನ ಇಪಿಎಸ್ ಬಣ ಮತ್ತು ಎಸ್‌ಪಿ ವೇಲುಮಣಿ ಬಣ ಪ್ರತ್ಯೇಕವಾಗಿ ಆಗಮಿಸಿತ್ತು. ಸಿವಿ ಷಣ್ಮುಗಂ ಮತ್ತು ಎಸ್‌ಪಿ ವೇಲುಮಣಿ ನೇತೃತ್ವದ 25 ಎಐಎಡಿಎಂಕೆ ಶಾಸಕರು ವಿಜಯ್ ಅವರ ಸರ್ಕಾರಕ್ಕೆ ಬೆಂಬಲ ಘೋಷಿಸಿದ್ದಾರೆ. ಆದರೆ, ಇಪಿಎಸ್ ನೇತೃತ್ವದ ಬಣ ವಿಶ್ವಾಸ ಮತಯಾಚನೆಯನ್ನು ಬೆಂಬಲಿಸುವುದಿಲ್ಲ ಎಂದು ದೃಢವಾಗಿ ಹೇಳಿತ್ತು. ಈ ನಡುವೆ ಪ್ರತಿಪಕ್ಷ ಡಿಎಂಕೆ ಸದನದಿಂದ ಹೊರ ನಡೆದಿದೆ.

**1** ವಿಜಯ್ ವಿಶೇಷ ಕರ್ತವ್ಯ ಅಧಿಕಾರಿ ಹುದ್ದೆಯಿಂದ ಜ್ಯೋತಿಷಿ ರಿಕ್ಕಿ ರಾಧನ್ ಪಂಡಿತ್ ಔಟ್.

**2** OSD ಆಗಿ ನೇಮಕಗೊಂಡ 24 ಗಂಟೆಗಳಲ್ಲಿ ಅಧಿಕಾರದಿಂದ ಕೆಳಗಿಳಿದ ರಿಕ್ಕಿ ರಾಧಾನ್ ಪಂಡಿತ್.

**3** ನೆಚ್ಚಿನ ಜ್ಯೋತಿಷಿ ರಿಕ್ಕಿ ರಾಧನ್ ಪಂಡಿತ್ ಅವರನ್ನು ವಿಜಯ್ ದೂರ ತಳ್ಳಲು ಕಾರಣವೇನು?

**ಪಳನಿಸ್ವಾಮಿ ಗಂಭೀರ ಆರೋಪ**



**ತಮಿಳುನಾಡು ಮುಖ್ಯಮಂತ್ರಿ ವಿಜಯ್ ರ ವಿಶ್ವಾಸ ಮತಯಾಚನೆಯ ವೇಳೆ ಕಲಾಪದಲ್ಲಿ ನಾಟಕೀಯ ಬೆಳವಣಿಗೆ ನಡೆದಿದ್ದು, ಎಐಎಡಿಎಂಕೆಯ ಒಂದು ಬಣ ಬಹಿರಂಗವಾಗಿ ಅವರಿಗೆ ಬೆಂಬಲ ಘೋಷಿಸಿತು. ಇದಕ್ಕೂ ಮುನ್ನ ಟಿವಿಕೆ ಮುಖ್ಯಸ್ಥ ವಿಜಯ್ ಪರವಾಗಿ ಮತ ಚಲಾಯಿಸಲು ನಮ್ಮ ಶಾಸಕರಿಗೆ ಹಣದ ಆಮಿಷವೊಡ್ಡಲಾಗಿದೆ ಎಂದು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಗಂಭೀರ ಆರೋಪ ಮಾಡಿದರು. ನಮ್ಮ ಪಕ್ಷದ 47 ಶಾಸಕರೂ ಟಿವಿಕೆಗೆ ಬೆಂಬಲಿಸುವುದನ್ನು ವಿರೋಧಿಸುತ್ತಾರೆ ಎಂದು ಘೋಷಿಸಿದರು. ಇದರ ಬೆನ್ನಿಗೇ, ಭಿನ್ನಮತೀಯರ ಬಣದ ನೇತೃತ್ವ ವಹಿಸಿದ್ದಾರೆ ಎಂದು ಹೇಳಲಾಗಿರುವ ವೇಲುಮಣಿ ಬಹಿರಂಗವಾಗಿ ವಿಜಯ್ ಗೆ ಬೆಂಬಲ ಘೋಷಿಸಿದರು.ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಎರಡು ದಿನಗಳ ಬಳಿಕ, ಮುಖ್ಯಮಂತ್ರಿ ವಿಜಯ್ ವಿಧಾನಸಭೆಯಲ್ಲಿ ವಿಶ್ವಾಂಸ ಮತ ಯಾಚಿಸಿದರು. ವಿಶ್ವಾಸ ಮತ ಯಾಚನೆಗೂ ಮುನ್ನ ಟಿವಿಕೆ ಬಳಿ ಎಐಎಡಿಎಂಕೆ ಬೆಂಬಲ ಹೊರತುಪಡಿಸಿ 119 ಶಾಸಕರ ಬೆಂಬಲವಿತ್ತು. ಆದರೆ, ಎಐಎಡಿಎಂಕೆಯ ಒಂದು ಬಣ ವಿಜಯ್ ಸರಕಾರಕ್ಕೆ ಬೆಂಬಲ ಘೋಷಿಸಿದ ಹಿನ್ನೆಲೆಯಲ್ಲಿ ವಿಜಯ್ ಅವರ ಸರಕಾರ 144 ಶಾಸಕರ ಬೆಂಬಲದೊಂದಿಗೆ ವಿಶ್ವಾಸ ಮತ ಯಾಚನೆಯಲ್ಲಿ ಗೆಲುವು ಸಾಧಿಸಿತು.**

**ವಿಶ್ವಾಸ ಮತಯಾಚನೆಯಲ್ಲಿ ಪಾಲ್ಗೊಳ್ಳದ ಟಿವಿಕೆ ಶಾಸಕ**

**ಮದ್ರಾಸ್ ಹೈಕೋರ್ಟ್ ವಿಧಿಸಿದ ಮಧ್ಯಂತರ ನಿರ್ಬಂಧದಿಂದಾಗಿ ತಿರುಪ್ಪತ್ತೂರಿನ ಟಿವಿಕೆ ಶಾಸಕ ಶ್ರೀನಿವಾಸ ಸೇತುಪತಿ, ನಡೆದ ವಿಶ್ವಾಸ ಮತಯಾಚನೆಯಲ್ಲಿ ಭಾಗವಹಿಸಲಿಲ್ಲ. ಆದರೆ ಸುಪ್ರೀಂಕೋರ್ಟ್ ಇದೇ ವೇಳೆ ಮದ್ರಾಸ್ ಹೈಕೋರ್ಟ್ ಆದೇಶಕ್ಕೆ ತಡೆ ನೀಡಿತ್ತು. ಅಷ್ಟೊತ್ತಿಗಾಗಲೇ ತಮಿಳುನಾಡು ವಿಧಾನಸಭೆಯಲ್ಲಿ ವಿಶ್ವಾಸಮತಯಾಚನೆ ಪ್ರಕ್ರಿಯೆಗಳು ಮುಗಿದಿದ್ದವು. ಮತದಾನದ ಬಳಿಕ, ಸ್ಪೀಕರ್ ಜೆ.ಸಿ.ಡಿ. ಪ್ರಭಾಕರ್, ವಿಜಯ್ ನೇತೃತ್ವದ ಟಿವಿಕೆ ಸರ್ಕಾರವು ವಿಶ್ವಾಸ ಮತಯಾಚನೆಯಲ್ಲಿ ಗೆದ್ದಿದೆ ಎಂದು ಅಧಿಕೃತವಾಗಿ ಘೋಷಿಸಿದರು.**

**ನಟಿ ತ್ರಿಶಾಗೆ ವಿಜಯ್ ಬಿಗ್ ಗಿಫ್ಟ್**

**ದಳಪತಿ ವಿಜಯ್ ಅವರು ತಮಿಳುನಾಡು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಕೇವಲ ಎರಡು ದಿನಗಳಲ್ಲೇ ತಮಿಳು ಚಲನಚಿತ್ರೋದ್ಯಮದ ಗಮನ ಸೆಳೆಯುವಂತಹ ಮಹತ್ವ ನಿರ್ಧಾರ ತೆಗೆದುಕೊಂಡಿದ್ದಾರೆ. ನಟಿ ತ್ರಿಶಾ ಮತ್ತು ಸೂರ್ಯ ಅಭಿನಯದ 'ಕರುಪ್ಪ್' ಚಿತ್ರದ ನಿರ್ಮಾಪಕರ ಬೆಂಬಲಕ್ಕೆ ಧಾವಿಸಿದ ಸಿಎಂ ವಿಜಯ್ ಅವರು, ಬೆಳಗ್ಗೆ 9 ಗಂಟೆಯ ಫಸ್ಟ್ ಶೋಗೆ ವಿಶೇಷ ಅನುಮತಿ ನೀಡಿದ್ದಾರೆ. ಆರ್ ಜೆ ಬಾಲಾಜಿ ನಿರ್ದೇಶನದ ಆಕ್ಷನ್ ಸಿನಿಮಾ ಕರುಪ್ಪ್ ಮೇ 14 ರಂದು ವಿಶ್ವಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ವಿಜಯ್ ಅವರ ಈ ನಡೆ ತಮಿಳು ಚಲನಚಿತ್ರೋದ್ಯಮದ ಗಮನ ಸೆಳೆದಿದೆ. ಕರುಪ್ಪ್ ಸಿನಿಮಾಗೆ ಸಿಎಂ ವಿಜಯ್ ಅವರು ದಿನಕ್ಕೆ 5 ಶೋಗಳಿಗೆ ಅನುಮತಿ ನೀಡಿದ್ದಾರೆ. ಜೊತೆಗೆ ಶೋ ಸಮಯದಲ್ಲಿ ಚಿತ್ರಮಂದಿರದ ಮಾಲೀಕರು ಜನದಟ್ಟಣೆಯನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. ವಿಶೇಷ ಅನುಮತಿ ನೀಡಿದ್ದಕ್ಕೆ ಕರುಪ್ಪ್ ಸಿನಿಮಾ ನಿರ್ಮಾಪಕರು ಸಿಎಂ ವಿಜಯ್ ಅವರಿಗೆ ಧನ್ಯವಾದ ಹೇಳಿದ್ದಾರೆ. ತಮಿಳುನಾಡಿನಲ್ಲಿ ಬೆಳಗ್ಗೆ 9 ಗಂಟೆಗಿಂತ ಮುಂಚೆ ಥಿಯೇಟರ್‌ಗಳಲ್ಲಿ ಸಿನಿಮಾ ಶೋಗೆ ಅವಕಾಶವಿಲ್ಲ. ಸಿನಿಮಾ ರಿಲೀಸ್ ಆದ ಮೊದಲ ದಿನ ಫಸ್ಟ್ ಶೋ ವೇಳೆ ಅಭಿಮಾನಿಗಳ ಅತಿರೇಕದ ವರ್ತನೆ, ಟ್ರಾಫಿಕ್ ಸಮಸ್ಯೆ, ಅನಾಹುತಗಳನ್ನು ತಪ್ಪಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿದ್ದಾರೆ. ಸಾಮಾನ್ಯವಾಗಿ ಬೆಳಿಗ್ಗೆ 11 ಅಥವಾ 12 ಗಂಟೆಗೆ ಮೊದಲ ಶೋ ಆರಂಭವಾಗುತ್ತದೆ. ಒಂದು ವೇಳೆ ಅದಕ್ಕೂ ಮುಂಚೆ ಶೋ ನಿಗದಿಪಡಿಸಬೇಕೆಂದರೆ ಸರ್ಕಾರದಿಂದ ಅನುಮತಿ ಪಡೆಯಬೇಕು.**

# ರಾಜ್ಯದ ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅನುಮತಿ

## ■ ಇತರೆ ಧಾರ್ಮಿಕ ವಸ್ತ್ರ ಧರಿಸಿ ಬರಲು ಅವಕಾಶ: ಸಚಿವ ಮಧು ಬಂಗಾರಪ್ಪ ಘೋಷಣೆ



• **ಉದಯವಾಹಿನಿ, ಬೆಂಗಳೂರು**

ಕರ್ನಾಟಕದ ಶಾಲಾ ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಲು ಅನುಮತಿ ನೀಡಲಾಗಿದೆ. ಜತೆಗೆ ಹಿಂದೂ ಧರ್ಮದ ಪವಿತ್ರ ದಾರ, ಪೇಟ, ರುದ್ರಾಕ್ಷಿ, ಜನಿವಾರ ಸೇರಿ ಎಲ್ಲಾ ಧರ್ಮಗಳ ಧಾರ್ಮಿಕ ವಸ್ತುಗಳಿಗೂ ಅವಕಾಶವಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸಚಿವ ಮಧು ಬಂಗಾರಪ್ಪ ಮಹತ್ವದ ಮಾಹಿತಿ ಹಂಚಿಕೊಂಡಿದ್ದಾರೆ. ಈ ಹಿಂದಿನ ಸರ್ಕಾರವು ಜಾರಿಗೊಳಿಸಿದ್ದ ಶಾಲಾ ಕಾಲೇಜುಗಳಲ್ಲಿ ಹಿಬಾಜ್ ನಿಷೇಧ ಆದೇಶವನ್ನು ಮುಂದಿನ ಶೈಕ್ಷಣಿಕ



ವರ್ಷದಿಂದಲೇ ತೆರವು ಮಾಡಲಾಗವುದು. ಮುಸ್ಲಿಂ ಸಮುದಾಯದ ಬೇಡಿಕೆಯಂತೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸಚಿವರು ಹೇಳಿದ್ದಾರೆ.

**ಹಿಜಾಬ್ ರದ್ದು ಮಾಡಿ 2022 ರಲ್ಲಿ ಬಿಜೆಪಿ ಆದೇಶ:** 2022ರ ಆರಂಭದಲ್ಲಿ ಉಡುಪಿಯ ಸರ್ಕಾರಿ ಪದವಿ



ಪೂರ್ವ ಕಾಲೇಜಿನಲ್ಲಿ ಹಿಜಾಬ್ ವಿವಾದ ಭುಗಿಲೆದ್ದಿತು. ಇದರ ಬೆನ್ನಲ್ಲೇ, ಫೆಬ್ರವರಿ 5, 2022 ರಂದು ಅಂದಿನ ಬಿಜೆಪಿ ಸರ್ಕಾರ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಅಡಿಯಲ್ಲಿ ಆದೇಶವೊಂದನ್ನು ಹೊರಡಿಸಿತು.

ಶಾಲಾ-ಕಾಲೇಜುಗಳಲ್ಲಿ ಆಡಳಿತ ಮಂಡಳಿಗಳು ನಿಗದಿಪಡಿಸಿದ 'ಸಮವಸ್ತ್ರ'ವನ್ನು ಕಡ್ಡಾಯವಾಗಿ ಧರಿಸಬೇಕು ಮತ್ತು ಸಮಾನತೆ, ಸಮಗ್ರತೆ ಹಾಗೂ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತರುವಂತಹ ಯಾವುದೇ ಧಾರ್ಮಿಕ ಉಡುಪುಗಳನ್ನು (ಹಿಜಾಬ್ ಅಥವಾ ಕೇಸರಿ ಶಾಲು) ಧರಿಸಿ ತರಗತಿಯೊಳಗೆ ಬರುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿತ್ತು.

ಸರ್ಕಾರದ ಈ ಆದೇಶವನ್ನು ಪ್ರಶ್ನಿಸಿ ವಿದ್ಯಾರ್ಥಿನಿಯರು ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದರು. ವಿಚಾರಣೆ ನಡೆಸಿದ ಹೈಕೋರ್ಟ್‌ನ ತ್ರಿಸದಸ್ಯ ಪೀಠವು, ಹಿಜಾಬ್ ಧರಿಸುವುದು ಇಸ್ಲಾಂ ಧರ್ಮದ ಅತ್ಯಗತ್ಯ ಆಚರಣೆಯಲ್ಲ ಎಂದು ಅಭಿಪ್ರಾಯಪಟ್ಟು, ಸರ್ಕಾರದ ಸಮವಸ್ತ್ರ ಕಡ್ಡಾಯ ಆದೇಶವನ್ನು ಎತ್ತಿಹಿಡಿಯಿತು. ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಯಿತು.

ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು 'ವಿಭಜಿತ ತೀರ್ಪು ನೀಡಿತು. ಒಬ್ಬ ನ್ಯಾಯಮೂರ್ತಿಗಳು ಹೈಕೋರ್ಟ್ ತೀರ್ಪನ್ನು ಬೆಂಬಲಿಸಿದರೆ, ಮತ್ತೊಬ್ಬರು ಹಿಜಾಬ್ ನಿಷೇಧವನ್ನು ರದ್ದುಪಡಿಸಿದರು.

ಇದರಿಂದಾಗಿ ಅಂತಿಮ ತೀರ್ಪಿಗಾಗಿ ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಲಾಗಿತ್ತು.

**ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಭರವಸೆ**

**2023ರ ಮೇ ತಿಂಗಳಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿತು. ಡಿಸೆಂಬರ್ 2023 ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ, ಹಿಜಾಬ್ ನಿಷೇಧದ ಆದೇಶವನ್ನು ಹಿಂಪಡೆಯಲು ಸೂಚಿಸಿದ್ದೇನೆ, ಯಾರು ಯಾವ ಬಟ್ಟೆ ಬೇಕಾದರೂ ಧರಿಸಬಹುದು ಎಂದು ಹೇಳಿಕೆ ನೀಡಿದ್ದರು. ಸದ್ಯ ಜಾರಿಗೆ ನಿರ್ಧರಿಸಲಾಗಿದೆ.**

**ಈ ದಿನದ ದರ** | ಪೆಟ್ರೋಲ್: 102.99 ₹/L | ಡೀಸೆಲ್ : 91.37 ₹/L | ಬಂಗಾರ: ₹16,200/Gram24ct ₹14,850/Gram22ct | ಬೆಳ್ಳಿ: ₹310.00/Gram

## ಧಾರ್ಮಿಕ ಪ್ರವಚನ



• **ಉದಯವಾಹಿನಿ, ಬೆಂಗಳೂರು**

ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಮೇ 14 ರಿಂದ 18ರವರೆಗೆ ಪ್ರತಿದಿನ ಸಂಜೆ 7-00ಕ್ಕೆ ಶ್ರೀ ರಘೋತ್ತಮಾಚಾರ್ಯರಿಂದ ಶ್ರೀ ಜಗನ್ನಾಥದಾಸರ ವಿರಚಿತ ಫಲವಿದು ಬಾಳ್ದುದಕೆ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ. ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಬೆಂಗಳೂರು-560003.

## ಮಕ್ಕಳ ಸೇವೆಯಲ್ಲಿ ದೇವರನ್ನು ಕಾಣಬಹುದು




• **ಉದಯವಾಹಿನಿ, ಕೆ.ಆರ್.ಪುರ**

ಮಕ್ಕಳ ಸೇವೆಯಲ್ಲಿ ದೇವರನ್ನು ಕಾಣಬಹುದು ಎಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಾಜಿ ನಿರ್ದೇಶಕ, ಬೆಂ.ನಗರ ಕಾಂಗ್ರೆಸ್ ಎಸ್ಸಿ ಘಟಕ ಉಪಾಧ್ಯಕ್ಷ ಹಾಗೂ ಪಣತೂರು ವಾರ್ಡ್ ಜಿಬಿಎ ಆಂಕಾಕ್ಷಿ ಎನ್. ಮುನಿರಾಜು (ಮೈಕಲ್) ತಿಳಿಸಿದರು. ಮಹದೇವಪುರ ಕ್ಷೇತ್ರದ ದೊಡ್ಡಕನ್ನಲ್ಲಿಯ ಗೆರಿಜಿಮ್ ಬುದ್ಧಿ ಮಾಂದ್ಯ ಮಕ್ಕಳ ಆಶ್ರಮದಲ್ಲಿ ಸೇವಾ ಕಾರ್ಯಗಳನ್ನು ಹಮ್ಮಿಕೊಂಡು ನಂತರ ಮಾತನಾಡಿದ ಅವರು. ಬೌದ್ಧಿಕ ಅಪಸಾಮಾನ್ಯ ಕ್ರಿಯೆ ಹೊಂದಿರುವ ಮಕ್ಕಳಿಗೆ ವಿಶೇಷ ಕಾಳಜಿ, ಪ್ರೀತಿ ಮತ್ತು ಶಿಕ್ಷಣದ ಅಗತ್ಯವಿದೆ. ದೈನಂದಿನ ಚಟುವಟಿಕೆಗಳಲ್ಲಿ ಅವರಿಗೆ ಬೆಂಬಲದ ಅವಶ್ಯಕತೆ ಇರುವ ಕಾರಣ ಇಂತಹ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದರು.

ಇದೇವೇಳೆ ನೂರಾರು ಮಕ್ಕಳೊಂದಿಗೆ ಕೇಕ್ ಕತ್ತರಿಸಿ, ಊಟದ ವ್ಯವಸ್ಥೆ ಸಹ ಏರ್ಪಡಿಸಲಾಗಿತ್ತು. ಕ್ಷೇತ್ರ ಗ್ಯಾರಂಟಿ ಅಧ್ಯಕ್ಷ ವರ್ತೂರು ಸುರೇಶ್, ಕ್ಷೇತ್ರ ಪ್ರದಾನ ಕಾರ್ಯ ಆರ್. ಮುನಿರಾಜ್, ಮಾಜಿ ಬ್ಲಾಕ್ ಅಧ್ಯಕ್ಷ ಬಾಬುಗೌಡ, ಮುಖಂಡರಾದ ಕಸವನಹಳ್ಳಿ, ರಾಜಶೇಖರ್ ರೆಡ್ಡಿ, ರಿಪಬ್ಲಿಕನ್ ಸೇನಾ ಆರೋಗ್ಯ ಘಟಕದ ರಾಜ್ಯಾಧ್ಯಕ್ಷರಾ ಜಿ.ವೈ ಮುನಿರಾಜು, ಪ್ರಸನ್ನ ದುನ್ನಸಂದ್ರ, ಶಿವಕುಮಾರ್, ಅಂಬರೀಶ್ ಗುಣ, ದೇವರಬಿಸನಹಳ್ಳಿ ವಿಜಯ್ ಸೇರಿದಂತೆ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನವೀಕರಣಗೊಂಡ ಉದ್ಯಾನ ಉದ್ಘಾಟನೆ

• **ಉದಯವಾಹಿನಿ, ಬೆಂಗಳೂರು**

ಹೆಬ್ಬಾಳ ವಿಧಾನ ಸಭಾ ಕ್ಷೇತ್ರದಲ್ಲಿ ನವೀಕರಣಗೊಳಿಸಿರುವ ಭೂಪಸಂದ್ರದ ಗೆದ್ದಲಹಳ್ಳಿ, ಕೆಇಬಿ, ಎಸಿಎಸ್ ಬಡಾವಣೆ, ಪೋಸ್ಟಲ್ ಕಾಲೋನಿ, ನಾಗಶೆಟ್ಟಿಹಳ್ಳಿಯ ಎನ್‌ಜಿಇಎಫ್ ಬಡಾವಣೆಯ ಉದ್ಯಾನಗಳನ್ನು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ರಾಜ್ಯ ಸರ್ಕಾರದ 30 ಕೋಟಿ ವಿಶೇಷ ಅನುದಾನದ ಅಡಿಯಲ್ಲಿ ಈ ಉದ್ಯಾನಗಳನ್ನು ನವೀಕರಣ ಮಾಡಲಾಗುತ್ತಿದೆ. ಇದೀಗ ಐದು ಉದ್ಯಾನಗಳನ್ನು ಅಭಿವೃದ್ಧಿಪಡಿಸಿ, ಉದ್ಘಾಟಿಸಲಾಗಿದೆ. ಇನ್ನುಳಿದ ಉದ್ಯಾನಗಳ ನವೀಕರಣ ಕಾಮಗಾರಿಗಳು ಪ್ರಗತಿ ಅಲ್ಲಿದ್ದು, ಹಂತಹಂತವಾಗಿ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ನೀಡಲಾಗುವುದು ಎಂದು ಭರವಸೆ ನೀಡಿದರು. ಉದ್ಯಾನಗಳಲ್ಲಿ ವಾಯು ವಿಹಾರಿಗಳಿಗೆ ಅನುಕೂಲವಾಗುವಂತೆ ಪಾದಚಾರಿ ಮಾರ್ಗ, ವಿದ್ಯುತ್ ದೀಪಗಳ ಸೌಲಭ್ಯ, ಕುಡಿಯುವ ನೀರಿನ ವ್ಯವಸ್ಥೆ, ವ್ಯಾಯಾಮ ಮಾಡುವ ಸಲಕರಣೆಗಳನ್ನು ಅಳವಡಿಸಲಾಗಿದೆ. ಇದಲ್ಲದೇ, ಸದಾ ಹಸಿರಿನಿಂದ ಕಂಗೊಳಿಸುವಂತೆ ಮಾಡಲು ನಿರಂತರವಾಗಿ ಗಿಡ-ಮರಗಳಿಗೆ ನೀರು ಪೂರೈಕೆ ವ್ಯವಸ್ಥೆ ಇದ್ದು, ನೀರಿನ ಕೊರತೆ ಎದುರಾದರೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು. ಮೊದಲ ಹಂತದಲ್ಲಿ 50 ಉದ್ಯಾನಗಳ ನವೀಕರಣ ಕಾಮಗಾರಿ ಕೈಗೊಂಡಿದ್ದು, ಇನ್ನೊಂದು ತಿಂಗಳಲ್ಲಿ ಪೂರ್ಣವಾಗಲಿದೆ. ಎರಡನೇ ಹಂತದಲ್ಲಿ ಉಳಿದ ಉದ್ಯಾನಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿದರು.

## ಜಿಂಕೆ ಕೊಂಬು ವಶ: ಮೂವರ ಸೆರೆ

• **ಉದಯವಾಹಿನಿ, ಬೆಂಗಳೂರು**

ತಮಿಳುನಾಡಿನ ಕೃಷ್ಣಗಿರಿಯಿಂದ ನಗರಕ್ಕೆ ಜಿಂಕೆ ಕೊಂಬು ತಂದು ಮಾರಾಟ ಮಾಡುತ್ತಿದ್ದ ಮೂವರನ್ನು ಸಿಸಿಬಿಯ ಅಸಂಘಟಿತ ಅಪರಾಧ ದಳ (ಪೂರ್ವ) ಅಧಿಕಾರಿಗಳು ಬಂಧಿಸಿದ್ದಾರೆ.

ಸಂಜೀವಿನಿ ನಗರದ ಮುರುಳಿ (29), ಮಾರೇನಹಳ್ಳಿಯ ಮಂಜುನಾಥ (39), ಹನುಮಂತೇಗೌಡ ಲೇಔಟ್‌ನ ಕಾರ್ಯಪ್ಪ (53) ಬಂಧಿತರು. ಸುಮಾರು 10 ಲಕ್ಷ ಮೌಲ್ಯದ ಜಿಂಕೆ ಕೊಂಬನ್ನು ನಗರದ ಚಿಕ್ಕಬಾಣಾವರ ಕಾಲೇಜುವೊಂದರ ಬಳಿ ಮಾರಾಟ ಮಾಡಲು ಮುಂದಾಗಿದ್ದರು. ಖಚಿತ ಮಾಹಿತಿ ಮೇರೆಗೆ ಸಿಸಿಬಿ ಪೊಲೀಸ್ ಇನ್ಸ್‌ಪೆಕ್ಟರ್ ಪಿ.ಸುರೇಶ ನೇತೃತ್ವದಲ್ಲಿ ದಾಳಿ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಕಾಡು ಪ್ರಾಣಿಗಳನ್ನು ಹತ್ಯೆಗೈದು ಈ ಕೃತ್ಯ ಮಾಡುತ್ತಿದ್ದಾರೆಯೋ ಅಥವಾ ಮೃತ ಪ್ರಾಣಿಗಳ ಕೊಂಬನ್ನು ಮಾರಾಟಕ್ಕೆ ಯತ್ನ ನಡೆಸುತ್ತಿದ್ದರೋ ಎಂಬ ಬಗ್ಗೆ ತನಿಖೆ ನಡೆಸುತ್ತಿರುವ ಪೊಲೀಸರು, ಈ ಕೃತ್ಯದ ಹಿಂದಿರುವವರ ಪತ್ತೆಗೆ ಮುಂದಾಗಿದ್ದಾರೆ. ಕೆಲ ಪ್ರಾಣಿಗಳ ಕೊಂಬು ಹಾಗೂ ಚರ್ಮ ಹೆಚ್ಚಿನ ಬೆಲೆಗೆ ಮಾರಾಟ ಹಾಗೂ ವಿದೇಶಗಳಿಗೂ ಸಾಗಣೆ ಮಾಡುತ್ತಿರುವ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದಾರೆ. ಸದ್ಯ ಬಂಧಿತರ ಬಗ್ಗೆ ಹಿಂದೆ ಯಾವುದೇ ಪ್ರಕರಣಗಳು ಕಂಡು ಬಂದಿಲ್ಲ ಎಂದು ಪೊಲೀಸರು ತಿಳಿದ್ದಾರೆ. ಚಿಕ್ಕಬಾಣಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಿದ್ದರಾಮಯ್ಯಗೆ ಒಬಿಸಿ ರಕ್ಷಾ ಕವಚ

## ರಾಜ್ಯ ನಾಯಕತ್ವ ಬದಲಾವಣೆ ಚರ್ಚೆ, ಹೈಕಮಾಂಡ್ ಹಿಂಜರಿಯಲು ಇದೊಂದು ಕಾರಣ

• **ಉದಯವಾಹಿನಿ, ಬೆಂಗಳೂರು**

ಪಂಚ ರಾಜ್ಯಗಳ ಚುನಾವಣೆಯ ಮುಕ್ತಾಯಗೊಂಡ ಬೆನ್ನಲ್ಲೇ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಚರ್ಚೆ ತೀವ್ರಗೊಂಡಿದೆ. ಸಿಎಂ ಬದಲಾವಣೆ ಮಾಡಲೇಬೇಕು ಎಂದು ಒಂದು ಬಣ ಪಟ್ಟು ಹಿಡಿದಿದೆ. ಆದರೆ, ಸದ್ಯದ ರಾಜಕೀಯ ಸನ್ನಿವೇಶದಲ್ಲಿ ನಾಯಕತ್ವ ಬದಲಾವಣೆ ಬೇಡ ಎಂಬುವುದು ಮತ್ತೊಂದು ಬಣದ ನಿಲುವಾಗಿದೆ. ಈ ನಡುವೆ ಸಿದ್ದರಾಮಯ್ಯ ಅವರಿಗೆ ಹಿಂದುಳಿದ ವರ್ಗದ ಬೆಂಬಲ ರಕ್ಷಾ ಕವಚದಂತಿದೆ. ಇದು ಹೈಕಮಾಂಡ್‌ಗೂ ನಿರ್ಧಾರ ಕೈಗೊಳ್ಳಲು ಹಿಂಜರಿಯುವಂತೆ ಮಾಡಿದೆ.

**ಸಿದ್ದರಾಮಯ್ಯಗೆ ಹಿಂದುಳಿದ ವರ್ಗಗಳ ಬಲ:** ಜಾತಿ, ವರ್ಗಗಳ ಲೆಕ್ಕಾಚಾರದಲ್ಲಿ ಸಿದ್ದರಾಮಯ್ಯಗೆ ಹಿಂದುಳಿದ ವರ್ಗಗಳ ಬಲ ಬೆನ್ನಿಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಹಿಂದುಳಿದ ವರ್ಗಗಳನ್ನು ಸೆಳೆಯುವ ನಿಟ್ಟಿನಲ್ಲಿ ಕಾಂಗ್ರೆಸ್ ರಾಜಕಾರಣ ಮಾಡುತ್ತಿದೆ. ಆದರೆ, ಕಾಂಗ್ರೆಸ್ ಅಧಿಕಾರದಲ್ಲಿ ಇರುವ ರಾಜ್ಯಗಳ ಪೈಕಿ ಮೂರು ರಾಜ್ಯಗಳಲ್ಲಿ ಮೇಲರ್ಗದ ಮುಖ್ಯಮಂತ್ರಿಗಳು ಇದ್ದಾರೆ. ನೆರೆ ರಾಜ್ಯ ಕೇರಳದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕಾಗಿ ಕೆ.ಸಿ ವೇಣುಗೋಪಾಲ್, ರಮೇಶ್ ಚೆನ್ನಿತ್ತಲ್, ಸತೀಶನ್ ನಡುವೆ ನೇರ ಪೈಪೋಟಿ ಇದೆ. ವಿಶೇಷ ಏನೆಂದರೆ ಈ ಮೂವರು ಕೂಡಾ ನಾಯರ್ ಸಮುದಾಯಕ್ಕೆ ಸೇರಿರುವವರಾಗಿದ್ದಾರೆ.

ಕೇರಳದಲ್ಲೂ ಮೂವರಲ್ಲಿ ಯಾರಿಗೇ ಪಟ್ಟಕಟ್ಟಿದರೂ ಆಗಲಿರುವ ಮೇಲ್ವರ್ಗದ ಮುಖ್ಯಮಂತ್ರಿಗೆ ಪಟ್ಟಸಿಕ್ಕಂತಾಗುತ್ತದೆ. ಈಗಾಗಲೇ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುವ ಹಿಮಾಚಲ, ತೆಲಂಗಾಣದಲ್ಲಿ ಮೇಲ್ವರ್ಗಕ್ಕೆ ಸೇರಿದವರು ಸಿಎಂ ಸ್ಥಾನವನ್ನು ಅಲಂಕರಿಸಿದ್ದಾರೆ. ಆದರೆ, ಕೇವಲ ಕರ್ನಾಟಕದಲ್ಲಿ ಮಾತ್ರ ಹಿಂದುಳಿದ ವರ್ಗದ ಮುಖ್ಯಮಂತ್ರಿ ಅಧಿಕಾರದಲ್ಲಿದ್ದಾರೆ. ಇದೆಲ್ಲವೂ ಸಿಎಂ ಸಿದ್ದರಾಮಯ್ಯ ಅವರಿಗೆ ಅನುಕೂಲಕರ ವಾತಾವರಣ ನಿರ್ಮಾಣ ಮಾಡಿದೆ. ಹಾಗಾಗಿ ಸದ್ಯದ ಪರಿಸ್ಥಿತಿಯಲ್ಲಿ ಒಬಿಸಿ ಸಿಎಂ ಸಿದ್ದರಾಮಯ್ಯ ವಿಚಾರದಲ್ಲಿ ತರಾತುರಿಯಲ್ಲಿ ತೀರ್ಮಾನ ಮಾಡಲು ಹೈಕಮಾಂಡ್ ಹಿಂದೇಟು ಹಾಕುತ್ತಿದೆ ಎಂಬ ಮಾಹಿತಿಗಳು ಕಾಂಗ್ರೆಸ್ ಮೂಲದಿಂದ ಸಿಗುತ್ತಿದೆ. ಹಿಂದುಳಿದ ವರ್ಗಗಳ ಪರವಾಗಿ ಕಾಂಗ್ರೆಸ್ ರಾಷ್ಟ್ರೀಯ ಮಟ್ಟದಲ್ಲಿ ನಿಲುವು ಪ್ರದರ್ಶನ ಮಾಡುತ್ತಾ ಬಂದಿದೆ. ಜಾತಿ ಗಣತಿ ವರದಿ ವಿಚಾರವಾಗಿಯೂ ಇದೇ ದೃಷ್ಟಿಯಿಂದ ರಾಹುಲ್ ಗಾಂಧಿ ಬಹಿರಂಗವಾಗಿ ತಮ್ಮ ಅಭಿಪ್ರಾಯ ಹೊರಹಾಕಿದ್ದರು. ಬಿಹಾರ ಚುನಾವಣೆಯ ಸಂದರ್ಭದಲ್ಲಿ ಇದು ಕ್ಯಾಂಪೇನ್ ಮಾದರಿಯಲ್ಲಿ ಚರ್ಚೆಗೆ ಒಳಗಾಗಿತ್ತು.



ಈ ಎಲ್ಲಾ ಹಿನ್ನೆಲೆಯಲ್ಲಿ ಹೈಕಮಾಂಡ್ ಲೆಕ್ಕಾಚಾರ ಹಾಕುತ್ತಿದೆ. ಕರ್ನಾಟಕದಲ್ಲಿ ಹಿಂದುಳಿದ ವರ್ಗ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲವಾಗಿ ನಿಂತಿದೆ. ಹೀಗಾಗಿ ಹಿಂದುಳಿದ ವರ್ಗಗಳ ಮತಗಳು ಚದುರದಂತೆ ನೋಡಿಕೊಳ್ಳುವುದು ಸವಾಲಾಗಿದೆ. ಒಂದು ವೇಳೆ ಸಿಎಂ ಬದಲಾವಣೆ ಮಾಡಿದರೆ ಅದು ಕಾಂಗ್ರೆಸ್‌ಗೆ ಮುಂದಿನ ಚುನಾವಣೆಯಲ್ಲಿ ಹಿನ್ನಡೆ ಉಂಟು ಮಾಡಲಿದೆ ಎಂಬ ಆತಂಕವೂ ಇದೆ. ಹೀಗಾಗಿ ಸದ್ಯ ನಾಯಕತ್ವ ಬದಲಾವಣೆ ವಿಚಾರವಾಗಿ ಹೈಕಮಾಂಡ್ ಯಾವುದೇ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಕಡಿಮೆ ಎನ್ನುತ್ತಿವೆ ಕಾಂಗ್ರೆಸ್ ಮೂಲಗಳು.

ಪರಿಷತ್ ಸದಸ್ಯರಾದ ಜಕ್ಕಪ್ಪನವರ್, ಮಧು ಮಾದೇಗೌಡ, ಪುಟ್ಟಣ್ಣ, ಟಿ.ಡಿ ಶ್ರೀನಿವಾಸ್, ರಾಮೋಜಿಗೌಡ ಸೇರಿ ಹಲವು ನಾಯಕರಿಂದ ಮನವಿ ಸಲ್ಲಿಸಲಾಗಿದೆ. ನಾಯಕತ್ವ ಹಂಚಿಕೆ ವಿಚಾರವಾಗಿ ಗೊಂದಲ ಪರಿಹರಿಸುವಂತೆ ಸುರ್ಜೇವಾಲಾಗೆ ಮನವಿ ಮಾಡುವುದರ ಜೊತೆಗೆ ಕಾರ್ಯಕರ್ತರಿಗೆ, ಪರಿಷತ್ ಸದಸ್ಯರಿಗೆ ಸಿಗಬೇಕಾದ ಸೂಕ್ತ ಸ್ಥಾನಮಾನ ನೀಡುವಂತೆಯೂ ಕೇಳಿಕೊಂಡಿದ್ದಾರೆ. ಸಂಪುಟದಲ್ಲಿ 5-6 ಪರಿಷತ್ ಸದಸ್ಯರಿಗೂ ಅವಕಾಶ ನೀಡುವಂತೆ ಬೇಡಿಕೆ ಇಡಲಾಗಿದೆ.


### ಸುರ್ಜೇವಾಲಗೆ ಪರಿಷತ್ ಸದಸ್ಯರ ಮನವಿ

**ನಾಯಕತ್ವ ಗೊಂದಲ ಇತ್ಯರ್ಥಕ್ಕೆ ವಿಧಾನ ಪರಿಷತ್ ಸದ್ಯಸರು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ. ದೆಹಲಿಯಲ್ಲಿ ಸುರ್ಜೇವಾಲಾರನ್ನ ಭೇಟಿಯಾದ ಪರಿಷತ್ ಸದಸ್ಯರು ನಿಯೋಗ ಈ ಸಂಬಂಧಿಸಿದಂತೆ ಮನವಿ ಸಲ್ಲಿಸಿದೆ.**

### ಹೈಕಮಾಂಡ್‌ಗೆ ಆತಂಕ

**ಒಂದು ವೇಳೆ ಸಿದ್ದರಾಮಯ್ಯ ಅವರನ್ನು ಬದಲಾಯಿಸಿ ಡಿಕೆ ಶಿವಕುಮಾರ್ ಅವರಿಗೆ ಪಟ್ಟ ಕಟ್ಟಿದರೆ ನಾಲ್ಕು ರಾಜ್ಯಗಳಲ್ಲೂ ಮೇಲ್ವರ್ಗದವರಿಗೆ ಅವಕಾಶ ನೀಡಿದಂತಾಗುತ್ತದೆ. ಕೈ ಅಧಿಕಾರದಲ್ಲಿರುವ ನಾಲ್ಕು ರಾಜ್ಯಗಳ ಪೈಕಿ ಕರ್ನಾಟಕದ ಸಿಎಂ ಮಾತ್ರ ಒಬಿಸಿ, ಉಳಿದಂತೆ ಮೇಲ್ವರ್ಗದ ಮುಖ್ಯಮಂತ್ರಿ ಇರುವುದು ಸಿದ್ದರಾಮಯ್ಯ ಅವರಿಗೆ ಒಂದು ರೀತಿಯಲ್ಲಿ ರಕ್ಷಾ ಕವಚದಂತಾಗಿದೆ. ಸಿಎಂ ಬದಲಿಸಿ ಮೇಲ್ವರ್ಗಕ್ಕೆ ಅಧಿಕಾರ ನೀಡಿದರೆ ರಾಷ್ಟ್ರೀಯಮಟ್ಟದಲ್ಲಿ ಪಕ್ಷದ ನಿಲುವನ್ನು ಸಮರ್ಥಿಸಿಕೊಳ್ಳಲಾಗದೆಂಬ ಆತಂಕವೂ ಇದೆ. ಸಿದ್ದರಾಮಯ್ಯರನ್ನ ಬದಲಿಸಿ ಮೇಲ್ವರ್ಗಕ್ಕೆ ನೀಡಿದರೆ ತಪ್ಪು ಸಂದೇಶ ರವಾನೆ ಆಗುವ ಆತಂಕ ಹೈಕಮಾಂಡ್‌ಗೆ ಇದೆ.**

## ಈ ಬಾರಿ ಸಾಯಿ ಬಡಾವಣೆಗೆ ನೆರೆ ಭೀತಿ




• **ಉದಯವಾಹಿನಿ, ಬೆಂಗಳೂರು**

ಹೊರಮಾವು ಸಮೀಪದ ಸಾಯಿ ಬಡಾವಣೆ ಸಮೀಪದ ರೈಲ್ವೆ ವೆಂಟ್ ವಿಸ್ತರಣೆ ಕಾಮಗಾರಿ ಪೂರ್ಣಗೊಳ್ಳದ ಹಿನ್ನಲೆಯಲ್ಲಿ ಬಡಾವಣೆ ಮತ್ತೆ ಜಲಾವೃತಗೊಳ್ಳುವ ಆತಂಕವಿದೆ. ಬಡಾವಣೆ ಪ್ರತಿ ವರ್ಷ ಮಳೆಗಾಲದಲ್ಲೂ ನಾಲ್ಕೈದು ಬಾರಿ ದ್ವೀಪದಂತಾಗುವುದು ಸಾಮಾನ್ಯವಾಗಿದೆ. ಬಡಾವಣೆಯ ಮೂಲಕ ಸಾಗುವ ರಾಜಕಾಲುವೆ ಗೆದ್ದಲಹಳ್ಳಿ ರೈಲ್ವೆ ಕಂಬಿ ಬಳಿ ಕಿರಿದಾಗುತ್ತಿದೆ. ಹಳೆಯದಾದ ರೈಲ್ವೆ ವೆಂಟ್ ಮೂಲಕ ಸಾಕಷ್ಟು ಪ್ರಮಾಣದ ನೀರು ಹರಿದು ಹೋಗದು. ಹೀಗಾಗಿ ರೈಲ್ವೆ ವೆಂಟ್ ವಿಸ್ತರಣೆ ಕಾಮಗಾರಿಗೆ 4 ವರ್ಷಗಳ ಹಿಂದೆಯೇ ಚಾಲನೆ ನೀಡಲಾಗಿದೆ.

**ರೈಲ್ವೆ ವೆಂಟ್ ವಿಸ್ತರಣೆ ಕಾಮಗಾರಿ:** ಬಿಬಿಎಂಪಿ 15 ಕೋಟಿ ರೂ. ಹಾಗೂ ಬಿಡಿಎ 10 ಕೋಟಿ ರೂ. ಅನುದಾನ ಬಿಡುಗಡೆ ಮಾಡಿವೆ. ರೈಲ್ವೆ ಇಲಾಖೆ ಸಹಯೋಗದಲ್ಲಿ ಕಾಮಗಾರಿ ನಡೆಯುತ್ತಿದ್ದು, ಒಂದು ರೈಲ್ವೆ ವೆಂಟ್ ಕಾಮಗಾರಿ ಮುಗಿದಿದೆ. ಇನ್ನೊಂದು ರೈಲ್ವೆ ವೆಂಟ್ ವಿಸ್ತರಣೆ ಕಾಮಗಾರಿ ಶೇ.80 ರಷ್ಟು ಮುಕ್ತಾಯವಾಗಿದೆ. ಸದ್ಯಕ್ಕೆ ಪೂರ್ಣಗೊಳ್ಳುವ ಲಕ್ಷಣ ಕಂಡು ಬರುತ್ತಿಲ್ಲ.

> **ಒಂದು ರೈಲ್ವೆ ವೆಂಟ್ ಕಾಮಗಾರಿ ಮುಗಿದಿದೆ. ಮತ್ತೊಂದು ವೆಂಟ್ ಕಾಮಗಾರಿ ಮೇ 30 ರೊಳಗೆ ಮುಗಿಸಲು ಸೂಚಿಸಿದ್ದೇನೆ. ಕಾಮಗಾರಿ ಮುಗಿದರೆ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ.**
>
> **-ಡಿ.ಎಸ್. ರಮೇಶ್, ಬೆಂ. ಪೂರ್ವ ನಗರ ಪಾಲಿಕೆ ಆಯುಕ್ತ**

ಮಳೆಯಿಂದ ನೀರು ನಿಲ್ಲುವ ಸಮಸ್ಯೆ ಪರಿಹಾರಕ್ಕಾಗಿ ಗೆದ್ದಲಹಳ್ಳಿ ಮುಖ್ಯರಸ್ತೆಯಿಂದ ರೈಲ್ವೆ ವೆಂಟ್‌ಗೆ ಸಂಪರ್ಕ ಕಲ್ಪಿಸುವಂತೆ ಒಂದು ಹಾಗೂ ಸಾಯಿಬಡಾವಣೆಯ ಮಧ್ಯಭಾಗದಲ್ಲಿ ಎರಡು ರಾಜಕಾಲುವೆ ನಿರ್ಮಾಣ ಮಾಡಲಾಗಿದೆ. ಇವುಗಳಲ್ಲಿ ನೀರು ಹರಿದು ಹೋದರೂ ರೈಲ್ವೆ ವೆಂಟ್ ಬಳಿ ನೀರು ನಿಲ್ಲಲಿದೆ. ಜಿಬಿಎ ಅಧಿಕಾರಿಗಳು ಮಳೆಗಾಲಕ್ಕೆ ಸಂಪೂರ್ಣ ರೀತಿಯಲ್ಲಿ ಸಜ್ಜಾದಂತೆ ಕಾಣುತ್ತಿಲ್ಲ. ಕಳೆದ ವಾರ ಸುರಿದ ಮಳೆಗೆ ಅಂಡರ್ ಪಾಸ್‌ಗಳು ತುಂಬಿದ್ದವು. ಜತೆಗೆ ಚರಂಡಿಯಲ್ಲಿ ಹರಿಯಬೇಕಾದ ನೀರು ರಸ್ತೆಗಳಲ್ಲಿ ಹರಿದು ಸಂಚಾರಕ್ಕೆ ತೊಡಕಾಗಿತ್ತು.

## ಗೇಮ್ಸ್‌ಕ್ರಾಫ್ಟ್ ನಿರ್ದೇಶಕರ ಅರ್ಜಿ: ಹೈಕೋರ್ಟ್ ನೋಟಿಸ್

• **ಉದಯವಾಹಿನಿ, ಬೆಂಗಳೂರು**




ಹಣ ಅಕ್ರಮ ವರ್ಗಾವಣೆ ಆರೋಪ ಪ್ರಕರಣದಲ್ಲಿ ಬಂಧಿತರಾಗಿರುವ 'ಗೇಮ್ಸ್ ಕ್ರಾಫ್ಟ್' ಕಂಪನಿ ನಿರ್ದೇಶಕರಾದ ದೀಪಕ್ ಸಿಂಗ್ ಅಹ್ಲಾವತ್, ಪೃಥ್ವಿರಾಜ್ ಸಿಂಗ್ ಮತ್ತು ವಿಕಾಸ್ ತನೇಜಾ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ. ತಮ್ಮ ಬಂಧನವನ್ನು ಅಕ್ರಮ ಎಂದು ಘೋಷಿಸುವಂತೆ ಕೋರಿ ಗುರುಗ್ರಾಮದ ದೀಪಕ್ ಸಿಂಗ್ (40) ಮತ್ತು ಇತರರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ಜಿ.ಎಸ್ ಕಮಲ್ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ದೀಪಕ್ ಸಿಂಗ್ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಎಸ್.ಮುರಳೀಧರ್, 'ಗೇಮ್ಸ್ ಕ್ರಾಫ್ಟ್ ವಿರುದ್ಧ 2026ರ ಜನವರಿಯಲ್ಲಿ ಇ.ಡಿ ಜಾರಿ ಮಾಡಿದ್ದ ಎಫ್‌ಐಆರ್‌ಗೆ ಹೈಕೋರ್ಟ್‌ನ ಸಮನ್ವಯ ನ್ಯಾಯಪೀಠ ಈಗಾಗಲೇ ತಡೆ ನೀಡಿದೆ. ಆನ್‌ಲೈನ್ ಗೇಮಿಂಗ್ ಪ್ರಚಾರ, ನಿಯಂತ್ರಣ ಕಾಯ್ದೆ-2025 ಅನ್ನು ಜಾರಿಗೆ ತಂದ ದಿನದಿಂದಲೂ ಗೇಮ್ಸ್ ಕ್ರಾಫ್ಟ್ ತನ್ನ ಕಾರ್ಯಚಟುವಟಿಕೆ ನಿಲ್ಲಿಸಿದೆ' ಎಂದರು. 'ತೆಲಂಗಾಣದಲ್ಲಿ ದಾಖಲಾಗಿರುವ ಎಫ್‌ಐಆರ್ ಆಧರಿಸಿ ಬೆಂಗಳೂರಿನ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದೀಪಕ್ ಮತ್ತು ಪೃಥ್ವಿರಾಜ್ ಅವರನ್ನು ಮೇ 8 ರಂದು ಗುರುಗ್ರಾಮದಲ್ಲಿ ಬಂಧಿಸಿದ್ದಾರೆ.

ಟ್ರಾನ್ಸಿಟ್ ರಿಮ್ಯಾಂಡ್ ಪಡೆದು ಬೆಂಗಳೂರಿಗೆ ಕರೆತಂದು ಬಂಧಿಸಿಡಲಾಗಿದೆ. ಇದು ಸಂಪೂರ್ಣವಾಗಿ ಅಕ್ರಮ ಬಂಧನ' ಎಂದರು. ಪೃಥ್ವಿರಾಜ್ ಸಿಂಗ್ ಮತ್ತು ವಿಕಾಸ್ ತನೇಜಾ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಸಜನ್ ಪೂವಯ್ಯ ಅವರು, 'ನಮ್ಮ ಅರ್ಜಿಗಳಲ್ಲೂ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೆ ಆದೇಶಿಸಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಮೂರೂ ಅರ್ಜಿಗಳಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಿತು.

## ಸರ್ಕಾರಕ್ಕೆ 3 ವರ್ಷ: ಕಮಲ ಪಡೆ ಅಲರ್ಟ್, ನಿತಿನ್ ಎಂಟ್ರಿ

• **ಉದಯವಾಹಿನಿ, ಬೆಂಗಳೂರು**

ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಮೇ 20 ಕ್ಕೆ ಮೂರು ವರ್ಷ ತುಂಬುತ್ತಿದೆ. ಸಾಕಷ್ಟು ಭಿನ್ನಮತ ಹಾಗೂ ಆಡಳಿತ ವಿರೋಧಿ ಅಲೆಯ ನಡುವೆ ಮುಂದಿನ ಎರಡು ವರ್ಷಗಳಲ್ಲಿ ಉತ್ತಮ ಆಡಳಿತ ನೀಡಲು ಸರ್ಕಾರ ಮುಂದಾಗಿದೆ. ಆದರೆ ಸರ್ಕಾರದ ವೈಫಲ್ಯಗಳನ್ನು ಮುಂದಿಟ್ಟುಕೊಂಡು ಜನಾಭಿಪ್ರಾಯ ರೂಪಿಸಲು ಬಿಜೆಪಿ ಪ್ಲ್ಯಾನ್ ಮಾಡಿಕೊಳ್ಳುತ್ತಿದೆ.

**ನಿತಿನ್ ನಬಿನ್ ಎಂಟ್ರಿ:** ಮೇ 24 ರಂದು ರಾಜ್ಯಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಭೇಟಿ ನೀಡಲಿದ್ದಾರೆ. ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ ಮೊದಲ ಬಾರಿಗೆ ಕರ್ನಾಟಕಕ್ಕೆ ನಬಿನ್ ಭೇಟಿ ನೀಡುತ್ತಿದ್ದಾರೆ. ನಿತಿನ್ ನಬಿನ್ ನೇತೃತ್ವದಲ್ಲಿ ಬಿಜೆಪಿ ಸಂಸದರು, ಶಾಸಕರು, ರಾಜ್ಯ ಪದಾಧಿಕಾರಿಗಳು ಮತ್ತು ಜಿಲ್ಲಾಧ್ಯಕ್ಷರ ಜೊತೆಗೆ ಸಭೆ ನಡೆಸಲಿದ್ದಾರೆ. ಮೇ 24 ರಂದು ಮಧ್ಯಾಹ್ನ ನಬಿನ್ ನೇತೃತ್ವದಲ್ಲಿ ಬಿಜೆಪಿ ರಾಜ್ಯ ಕೋರ್ ಕಮಿಟಿ ಸಭೆ ನಡೆಯಲಿದೆ. ಬೆಂಗಳೂರಿನ ಮಲ್ಲೇಶ್ವರಂನ ಬಿಜೆಪಿ ರಾಜ್ಯ ಕಚೇರಿಯಲ್ಲಿ ಸಭೆಗಳು ನಡೆಯಲಿವೆ. ಇದಷ್ಟೇ ಅಲ್ಲದೆ, ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾ ಪ್ರಶಿಕ್ಷಣ ಶಿಬಿರದ ಸಮಾರೋಪದಲ್ಲೂ ನಿತಿನ್ ನಬಿನ್ ಭಾಗವಹಿಸಲಿದ್ದಾರೆ. ಯಲಹಂಕದ ಖಾಸಗಿ ರೆಸಾರ್ಟ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ.



**ಭಿನ್ನಮತ ಸವಾಲು:** ರಾಜ್ಯ ಬಿಜೆಪಿಯಲ್ಲಿ ಭಿನ್ನಮತ ಬಹುದೊಡ್ಡ ಸವಾಲಾಗಿದೆ. ಸರ್ಕಾರದ ವೈಫಲ್ಯಗಳ ಬಗ್ಗೆ ಹೋರಾಟ ನಡೆಸಲು ಇದುವೇ ಬಹುದೊಡ್ಡ ಅಡ್ಡಿಯಾಗಿದೆ. ಇದನ್ನು ನಿಭಾಯಿಸುವುದು ಬಿಜೆಪಿ ನಾಯಕರ ಪಾಲಿಗೂ ಬಹುದೊಡ್ಡ ಸವಾಲಾಗಿದೆ. ಮುಂತಾದ ವಿಚಾರಗಳನ್ನು ಮುಂದಿಟ್ಟುಕೊಂಡು ಹೋರಾಟ ರೂಪಿಸುವುದು ತಂತ್ರಗಾರಿಕೆಯಾಗಿದೆ. ಈ ನಿಟ್ಟಿನಲ್ಲಿ ಯಾವ ರೀತಿಯಲ್ಲಿ ಒಗ್ಗಟ್ಟು ಪ್ರದರ್ಶನ ಮಾಡಬೇಕು ಎಂಬ ವಿಚಾರವಾಗಿ ರಾಷ್ಟ್ರೀಯ ಅಧ್ಯಕ್ಷರು ಸಭೆಯಲ್ಲಿ ಸೂಚನೆ ನೀಡಲಿದ್ದಾರೆ. ಗ್ಯಾರಂಟಿ ಯೋಜನೆ, ಭ್ರಷ್ಟಾಚಾರ, ಸರ್ಕಾರದ ಆಡಳಿತ ವೈಫಲ್ಯ , ಸಚಿವರ ಕಾರ್ಯವೈಖರಿ, ಅನುದಾನ ಕೊರತೆ ವಿಚಾರಗಳನ್ನು ಮುಂದಿಟ್ಟುಕೊಂಡು ಹೋರಾಟ ರೂಪಿಸುವುದು ತಂತ್ರಗಾರಿಕೆಯಾಗಿದೆ.

ಈ ನಿಟ್ಟಿನಲ್ಲಿ ಯಾವ ರೀತಿಯಲ್ಲಿ ಒಗ್ಗಟ್ಟು ಪ್ರದರ್ಶನ ಮಾಡಬೇಕು ಎಂಬ ವಿಚಾರವಾಗಿ ರಾಷ್ಟ್ರೀಯ ಅಧ್ಯಕ್ಷರು ಸಭೆಯಲ್ಲಿ ಸೂಚನೆ ನೀಡಲಿದ್ದಾರೆ.

### 2 ವರ್ಷಕ್ಕೆ ಆಕ್ಷನ್ ಪ್ಲ್ಯಾನ್!

**ರಾಜ್ಯದಲ್ಲಿ ವಿರೋಧ ಪಕ್ಷಕ್ಕೆ ಮುಂದಿನ ಎರಡು ವರ್ಷಗಳ ಕಾಲ ಸವಾಲಿನ ಸಂಗತಿಯಾಗಿದೆ. ಸರ್ಕಾರದ ವಿರುದ್ಧ ಹೋರಾಟಕ್ಕೆ ಬಿಜೆಪಿ ಪ್ಲ್ಯಾನ್ ಮಾಡುತ್ತಿದೆ. ಯಾವ ವಿಚಾರಗಳನ್ನು ಮುಂದಿಟ್ಟುಕೊಂಡು ಹೋರಾಟ ಮಾಡಬೇಕು ಎಂಬ ಬಗ್ಗೆ ರಾಷ್ಟ್ರೀಯ ಅಧ್ಯಕ್ಷರು ಕೆಲವೊಂದು ಸಲಹೆ ಸೂಚನೆಗಳನ್ನು ನೀಡುವ ಸಾಧ್ಯತೆ ಇದೆ.**

# ಮುಸ್ಲಿಂ ಹುಡುಗಿಯರು ಡೇಂಜರ್: ಸೂಲಿಬೆಲೆ

## ಎಫ್‌ಐಆರ್‌ಗೆ ಕರ್ನಾಟಕ ಹೈಕೋರ್ಟ್‌ನ ಧಾರವಾಡ ಪೀಠವು ತಡೆ

• **ಉದಯವಾಹಿನಿ, ಧಾರವಾಡ**

ಮುಸ್ಲಿಂ ಯುವತಿಯರ ಕುರಿತು ಪ್ರಚೋದನಾಕಾರಿ ಭಾಷಣ ಮಾಡಿದ ಆರೋಪದ ಮೇಲೆ ಚಕ್ರವರ್ತಿ ಸೂಲಿಬೆಲೆ ಅಲಿಯಾಸ್ ಮಿಥುನ್ ಚಕ್ರವರ್ತಿ ದೇವಿದಾಸ್ ಶೇಟ್ ವಿರುದ್ಧ ದಾಖಲಾಗಿದ್ದ ಪ್ರಕರಣಕ್ಕೆ ಕರ್ನಾಟಕ ಹೈಕೋರ್ಟ್‌ನ ಧಾರವಾಡ ಪೀಠವು ತಡೆ ನೀಡಿದೆ. ಧಾರವಾಡ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಈ ಎಫ್‌ಐಆರ್ ಅನ್ನು ರದ್ದುಗೊಳಿಸುವಂತೆ ಕೋರಿ ಸೂಲಿಬೆಲೆ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಂಜೀವ್‌ಕುಮಾರ್ ಹಂಚಾಟೆ ಅವರ ನೇತೃತ್ವದ ರಜಾಕಾಲೀನ ಏಕಸದಸ್ಯ ಪೀಠವು ಈ ಆದೇಶ ಹೊರಡಿಸಿದೆ.

**ನ್ಯಾಯಾಲಯದ ಅಭಿಪ್ರಾಯ ಏನು?**

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ, ಈ ಪ್ರಕರಣವನ್ನು ವಿಸ್ತೃತವಾಗಿ ಪರಿಗಣಿಸುವ ಅಗತ್ಯವಿದೆ. ಮೇಲ್ನೋಟಕ್ಕೆ ಇದು ತಡೆ ನೀಡಲು ಅರ್ಹವಾದ ಪ್ರಕರಣವಾಗಿರುವುದರಿಂದ ಮುಂದಿನ ಕ್ರಮಗಳಿಗೆ ತಡೆ ನೀಡಲಾಗಿದೆ ಎಂದು ತಿಳಿಸಿತು.



**ವಕೀಲರ ವಾದವೇನು?:** ಚಕ್ರವರ್ತಿ ಸೂಲಿಬೆಲೆ ಪರ ವಾದ ಮಂಡಿಸಿದ ಹಿರಿಯ ವಕೀಲ ಎಂ. ಅರುಣ್ ಶ್ಯಾಮ್ ಅವರು, ಈ ಪ್ರಕರಣದಲ್ಲಿ ದೂರು ನೀಡಿದ ಪೊಲೀಸ್ ಪೇದೆಯು ಸಂತ್ರಸ್ತರಲ್ಲ. ಹಾಗಾಗಿ ಅವರಿಗೆ ದೂರು ನೀಡುವ ಯಾವುದೇ ಕಾನೂನಾತ್ಮಕ ಹಕ್ಕಿಲ್ಲ. ಸೂಲಿಬೆಲೆ ಅವರು ಕೇವಲ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ಅದು ಸಂವಿಧಾನದ 19ನೇ ವಿಧಿಯಡಿ ಬರುವ ಅಭಿವ್ಯಕ್ತಿ ಸ್ವಾತಂತ್ರ್ಯದ ವ್ಯಾಪ್ತಿಗೆ ಸೇರುತ್ತದೆ. ಅಲ್ಲದೆ, ಈ ಪ್ರಕರಣಕ್ಕೆ ಬಿಎನ್‌ಎಸ್ ಸೆಕ್ಷನ್ 196 ಅನ್ವಯಿಸುವುದಿಲ್ಲ ಎಂದು ವಾದಿಸಿದರು. ಈ ಭಾಷಣವು ಸಮಾಜದಲ್ಲಿ ಪ್ರಚೋದನೆ ನೀಡುವಂತಿದೆ ಎಂದು ಆರೋಪಿಸಿ ಧಾರವಾಡ ನಗರ ಪೊಲೀಸರು ಸ್ವಯಂಪ್ರೇರಿತವಾಗಿ ಬಿಎನ್‌ಎಸ್‌ಸೆಕ್ಷನ್ 196(1) ಅಡಿ ಪ್ರಕರಣ ದಾಖಲಿಸಿಕೊಂಡಿದ್ದರು.

### ಪ್ರಕರಣದ ಹಿನ್ನೆಲೆ ಏನು?

**ಮುಸಲ್ಮಾನ್ ಹುಡುಗಿಯರು ಗಂಡಸರಿಗಿಂತ ಡೇಂಜರ್. ಮುಸ್ಲಿಂ ಹುಡುಗರ ಸ್ನೇಹ ಮಾಡಿದರೂ ಪರವಾಗಿಲ್ಲ, ಆದರೆ ಮುಸ್ಲಿಂ ಹೆಣ್ಣು ಮಕ್ಕಳ ಸ್ನೇಹ ಮಾಡಬೇಡಿ ಎಂದು ನಮ್ಮ ಹೆಣ್ಣು ಮಕ್ಕಳಿಗೆ ತಿಳಿಸಿಕೊಡಿ. ಮುಸ್ಲಿಂ ಸ್ನೇಹಿತೆಯರು ಮನೆಗೆ ಕರೆದಾಗ ಹೋದರೆ, ಅಲ್ಲಿ ಕುಡಿಯುವ ನೀರಿಗೆ ಅಮಲು ಬರುವ ಪದಾರ್ಥ ಬೆರೆಸಿ, ನಂತರ ತಮ್ಮ ಅಣ್ಣ-ತಮ್ಮಂದಿರ ಮೂಲಕ ವಿಡಿಯೋ ಮಾಡಿಸಿ ಹೆಣ್ಣು ಮಕ್ಕಳ ಜೀವನ ಹಾಳು ಮಾಡುತ್ತಾರೆ ಎಂಬರ್ಥದಲ್ಲಿ ಹೇಳಿದ್ದರು.**

ಈಗ ಹೈಕೋರ್ಟ್ ಈ ಪ್ರಕರಣದ ಮುಂದಿನ ತನಿಖೆಗೆ ತಡೆಯಾಜ್ಞೆ ನೀಡಿದೆ ಎಂದು ಬಾರ್ ಅಂಡ್ ಬೆಂಚ್ ವರದಿ ಮಾಡಿದೆ.

## ಎಲೆಕ್ಟ್ರಿಕಲ್ ಬೈಕ್‌ನ ಬ್ಯಾಟರಿ ಸ್ಫೋಟ ಚಾಲಕ ಸಾವು

• **ಉದಯವಾಹಿನಿ, ಬೆಂಗಳೂರು**

ಮನೆಯೊಳಗೆ ಚಾರ್ಜ್‌ಗೆ ಹಾಕಿದ್ದ ಎಲೆಕ್ಟ್ರಿಕಲ್ ಬೈಕ್‌ನ ಬ್ಯಾಟರಿ ಮಧ್ಯರಾತ್ರಿ ಸ್ಫೋಟಗೊಂಡ ಪರಿಣಾಮ, ವೃದ್ಧರೊಬ್ಬರು ಮೃತಪಟ್ಟಿರುವ ಘಟನೆ ಹಲಸೂರಿನ ಮರ್ಫಿಟೌನ್‌ನಲ್ಲಿ ನಡೆದಿದೆ.




ಆಟೋ ಚಾಲಕ ಲೂರ್ದ್ ನಾದನ್ (65) ಮೃತ ವ್ಯಕ್ತಿ. ರಾತ್ರಿ 11ರ ವೇಳೆಗೆ ತಮ್ಮ ಎಲೆಕ್ಟ್ರಿಕ್ ವಾಹನವನ್ನು ಚಾರ್ಜ್‌ಗೆ ಹಾಕಿ ಮಲಗಿದ್ದರು. ಬೆಳಗಿನ ಜಾವ 3 ಗಂಟೆ ವೇಳೆಗೆ ವಾಹನದ ಬ್ಯಾಟರಿ ಸ್ಫೋಟಗೊಂಡಿದೆ. ಸ್ಫೋಟದ ತೀವ್ರತೆಗೆ ಮನೆಗೆ ಬೆಂಕಿ ವ್ಯಾಪಿಸಿದ್ದು, ನಿದ್ರೆಯಲ್ಲಿದ್ದ ಲೂರ್ದ್ ನಾದನ್ ಅವರಿಗೆ ತೀವ್ರ ಸುಟ್ಟಗಾಯಗಳಾಗಿತ್ತು. ತಕ್ಷಣವೇ ಅವರನ್ನು ಚಿಕಿತ್ಸೆಗಾಗಿ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಪರೀಕ್ಷಿಸಿದ ವೈದ್ಯರು ಮೃತಪಟ್ಟಿದ್ದಾರೆ ಎಂದು ತಿಳಿಸಿದರು.

ಮೃತರ ಪುತ್ರ ಫ್ರಾಂಕ್ ಆಂತೋನಿ ನೀಡಿದ ದೂರಿನ ಮೇರೆಗೆ ಹಲಸೂರು ಪೊಲೀಸ್ ಠಾಣೆಯಲ್ಲಿ ಯುಡಿಆರ್ ಪ್ರಕರಣ ದಾಖಲಾಗಿದೆ. ಈ ಅವಘಡಕ್ಕೆ ವಾಹನದ ತಾಂತ್ರಿಕ ದೋಷ ಅಥವಾ ಶಾರ್ಟ್ ಸರ್ಕಿಟ್ ಕಾರಣವಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದು, ತನಿಖೆ ಮುಂದುವರಿಸಿದ್ದಾರೆ.

# ಮೆಟ್ರೋದಲ್ಲಿ ಒಂದೆರಡು ದಿನ ಓಡಾಟ ಮಾಡಲು ತೀರ್ಮಾನ

• **ಉದಯವಾಹಿನಿ, ಬೆಂಗಳೂರು**



ಅಮೆರಿಕಾ ಮತ್ತು ಇರಾನ್ ನಡುವಿನ ಯುದ್ಧದ ಹಿನ್ನೆಲೆಯಲ್ಲಿ ಕಚ್ಚಾ ತೈಲದ ಕೊರತೆ ಉಂಟಾಗಿದೆ. ಹೊರ್ಮುಜ್ ಜಲಸಂಧಿ ಮುಚ್ಚಿದ ಪರಿಣಾಮವಾಗಿ ಯಾವುದೇ ಹಡಗುಗಳು ಈ ಮಾರ್ಗವಾಗಿ ಬರುತ್ತಿಲ್ಲ. ಈ ನಡುವೆ ದೇಶದಲ್ಲಿ ಮುಂದಿನ ದಿನಗಳಲ್ಲಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಅಭಾವ ಸೃಷ್ಟಿಯಾಗುವ ಆತಂಕ ಇದೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಅಷ್ಟ ಸಲಹೆಗಳನ್ನು ನೀಡಿದ್ದಾರೆ.

ಪ್ರಧಾನಿ ಮೋದಿ ಅಷ್ಟ ಸಲಹೆಗಳಿಗೆ ಪರ - ವಿರೋಧ ಚರ್ಚೆಗಳು ನಡೆಯುತ್ತಿರುವ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಇದನ್ನು ಪಾಲನೆ ಮಾಡಲು ಮುಂದಾಗಿದೆ. ಈ ನಿಟ್ಟಿನಲ್ಲಿ ವಿರೋಧ ಪಕ್ಷದ ನಾಯಕ ಆರ್ ಅಶೋಕ ಹೆಜ್ಜೆ ಇಟ್ಟಿದ್ದು, ತಮಗೆ ನೀಡಿರುವ ಬೆಂಗಾವಲು ವಾಹನದ ಬಳಕೆಯನ್ನು ಕಡಿತಗೊಳಿಸಲು ನಿರ್ಧಾರ ಮಾಡಿದ್ದಾರೆ.

ಅಲ್ಲದೆ, ಮೆಟ್ರೋದಲ್ಲಿ ವಾರದಲ್ಲಿ ಒಂದೆರಡು ದಿನಗಳ ಕಾಲ ಪ್ರಯಾಣ ಮಾಡಲು ತೀರ್ಮಾನ ಮಾಡಿದ್ದಾರೆ.ಈ ಕುರಿತಾಗಿ ಅವರು ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ, ''ನಾವೂ ಮೋದಿಯವರ ಕರೆಗೆ ಬೆಂಬಲಿಸಿದ್ದೇವೆ. 30% ರಿಂದ 40% ವಾಹನಗಳ ಬಳಕೆ ಕಡಿಮೆ ಮಾಡ್ತೇವೆ. ದಿನ ಬಿಟ್ಟು ದಿನ ಬೆಂಗಾವಲು ವಾಹನಗಳ ಬಳಕೆ ಮಾಡ್ತೇವೆ. ಮದುವೆಗಳಿಗೆ ಹೋದಾಗ ಎಲ್ಲಾ ವಾಹನಗಳನ್ನು ಬಳಕೆ ಮಾಡುವುದಿಲ್ಲ. ನಮ್ಮ ಮನೆಗಳಲ್ಲೂ ಬೆಂಬಲಿಸಿದ್ದಾರೆ. ಅಡುಗೆ ಎಣ್ಣೆ ಬಳಕೆಯಲ್ಲೂ ನಮ್ಮ ಮನೆಯಲ್ಲಿ ಕಡಿತ ಮಾಡಿದ್ದಾರೆ'' ಎಂದರು.

**ಸರ್ಕಾರಕ್ಕೆ ಬಸ್ ಡೇ ಮಾಡಲು ಪತ್ರ:** ಆರ್ ಅಶೋಕ್ ಸಾರಿಗೆ ಸಚಿವರಾಗಿದ್ದ ಸಂದರ್ಭದಲ್ಲಿ ಬಸ್ ಡೇ ಮಾಡಿದ್ದರು. ಎಲ್ಲಾ ಸರ್ಕಾರಿ ಅಧಿಕಾರಿಗಳು ವಾರಕ್ಕೊಂದು ದಿನ ಬಸ್ ನಲ್ಲಿ ಪ್ರಯಾಣ ಮಾಡಲು ಸೂಚನೆ ನೀಡಿದ್ದರು.

ಇದು ತಕ್ಕಮಟ್ಟಿಗೆ ಯಶಸ್ವಿಯೂ ಆಗಿತ್ತು. ಇದೀಗ ಸಿಎಂ ಸಿದ್ದರಾಮಯ್ಯ ಅವರಿಗೆ ಈ ಕುರಿತಾಗಿ ಪತ್ರ ಬರೆಯಲು ಆರ್ ಅಶೋಕ್ ನಿರ್ಧಾರ ಮಾಡಿದ್ದಾರೆ. ಸರ್ಕಾರಿ ಬಸ್ ಗಳಲ್ಲಿ ಅಧಿಕಾರಿಗಳು, ಸಿಬ್ಬಂದಿ ಪ್ರಯಾಣ ಮಾಡಲು ಸೂಚನೆ ನೀಡಬೇಕು ಎಂದು ಅವರು ಪತ್ರದಲ್ಲಿ ಮನವಿ ಮಾಡಲಿದ್ದಾರೆ.

ಇದೇ ವಿಚಾರವಾಗಿ ಮಾತನಾಡಿದ ಆರ್ ಅಶೋಕ್, ''ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಬಸ್ ಡೇ ಜಾರಿ ಮಾಡಿದ್ದೆವು. ನಾನು ಕೂಡ ವಿಧಾನಸೌಧಕ್ಕೆ ಬಸ್ನಲ್ಲೇ ಬಂದು ಹೋಗುತ್ತಿದ್ದೆ. ಅಧಿಕಾರಿಗಳೂ ಬಸ್ ನಲ್ಲಿ ಓಡಾಡ್ತಿದ್ರು. ಅದೇ ಮಾದರಿಯ ಕ್ರಮ ಕೈಗೊಳ್ಳಲಿ ಈ ಸರ್ಕಾರ. ನಾನೂ ಕೂಡಾ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ. ಯುದ್ಧ ನಿಲ್ಲುವ ಲಕ್ಷಣ ಇಲ್ಲ. ಯುದ್ಧದ ಸಂದರ್ಭದಲ್ಲಿ ಕಾಂಗ್ರೆಸ್ ಚಿಲ್ಲರೆ ಬುದ್ಧಿ ಬಿಡಬೇಕು ಎಂದು ಮನವಿ ಮಾಡಿದರು.

ಸದ್ಯ ಆರ್ ಅಶೋಕ್ ಈ ತೀರ್ಮಾನ ಕೈಗೊಂಡಿದ್ದು ಉಳಿದ ಬಿಜೆಪಿ ನಾಯಕರ ನಡೆ ಏನು ಎಂಬುವುದು ಕೂಡಾ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಇದು ಸಾಂಕೇತಿಕವಾಗಿ ಮಾಡುತ್ತಿಲ್ಲ, ಎಲ್ಲಿಯವರೆಗೆ ಸಮಸ್ಯೆ ಇರುತ್ತದೆ ಅಲ್ಲಿಯ ವರೆಗೂ ಪಾಲನೆ ಮಾಡುತ್ತೇವೆ ಎಂದು ಅಶೋಕ್ ಭರವಸೆ ನೀಡಿದ್ದಾರೆ. ಅಶೋಕ್ ಮಾದರಿಯಲ್ಲಿ ಇತರ ಬಿಜೆಪಿ ನಾಯಕರು ಇದನ್ನು ಪಾಲನೆ ಮಾಡುತ್ತಾರಾ? ಎಂಬುವುದು ಕುತೂಹಲಕ್ಕೆ ಕಾರಣವಾಗಿದೆ.

# ಕೋರ್ಟ್ ನಿರ್ದೇಶನದಂತೆ ಜಿಬಿಎ ಚುನಾವಣೆ

## ಗ್ರೇಟರ್ ಬೆಂಗಳೂರು ಚುನಾವಣೆಯ ಕುರಿತಾಗಿ ಡಿಸಿಎಂ ಡಿಕೆ ಶಿವಕುಮಾರ್ ಪ್ರತಿಕ್ರಿಯೆ, ಸರ್ಕಾರದ ನಡೆಯ ಬಗ್ಗೆ ಸುಳಿವು ಕೊಟ್ಟ ಡಿಕೆಶಿ

• **ಉದಯವಾಹಿನಿ, ಬೆಂಗಳೂರು**

ಕೋರ್ಟ್ ನಿರ್ದೇಶನದಂತೆ ಜಿಬಿಎ ಚುನಾವಣೆ ನಡೆಸಲಾಗುವುದು ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ. ಈ ಮೂಲಕ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ಚುನಾವಣೆ ಮುಂದೂಡುವ ಸರ್ಕಾರದ ನಡೆಯ ಬಗ್ಗೆ ಡಿಕೆ ಶಿವಕುಮಾರ್ ಸುಳಿವು ಕೊಟ್ಟಿದ್ದಾರೆ. ಜಿಬಿಎ ವ್ಯಾಪ್ತಿಯ ಪಾಲಿಕೆಗಳ ಚುನಾವಣೆ ಕೋರ್ಟ್ ನಿರ್ದೇಶನದ ಪ್ರಕಾರ ನಡೆಯುತ್ತದೆ ಎಂದ ಅವರು, ಈ ವರ್ಷ ಜಿಬಿಎ ಆದಾಯದ ನಿರೀಕ್ಷೆ ಏನಿದೆ ಎಂದು ಕೇಳಿದಾಗ, ಆದಾಯ ಬರಲಿ ನೋಡೋಣ.

- **ನ್ಯಾಯಾಲಯದ ನಿರ್ದೇಶನದಂತೆ ಚುನಾವಣೆ ನಡೆಸಲಾಗುವುದು ಎಂದ ಡಿಕೆಶಿ**
- **ಚುನಾವಣೆ ಮುಂದೂಡುವ ಕುರಿತಾಗಿ ನಡೆಯುತ್ತಿರುವ ಚರ್ಚೆಯ ಹಿನ್ನೆಲೆಯಲ್ಲಿ ಡಿಕೆಶಿ ಮಹತ್ವದ ಹೇಳಿಕೆ**

ನಾವು ಆದಾಯದ ಲೆಕ್ಕ ಹಾಕುತ್ತಿಲ್ಲ. ಬೆಲೆ ಏರಿಕೆ ಇಂದ ತತ್ತರಿಸಿರುವ ಜನರ ಬದುಕು ರಕ್ಷಣೆ ಮಾಡಬೇಕು. 'ಚಿನ್ನ ಖರೀದಿ ಮಾಡಬೇಡಿ, ಇಂಧನ ಬಳಕೆ ಕಡಿಮೆ ಮಾಡಿ, ವಿದೇಶ ಪ್ರಯಾಣ ಬೇಡ' ಎಂದು ಹೇಳುವ ಕಷ್ಟ ಕಾಲದಲ್ಲಿ ಜನರಿಗೆ ಒಳ್ಳೆಯದಾಗಬೇಕು ಎಂದು ತಿಳಿಸಿದರು.




**ದೇಶಕ್ಕೆ ದೊಡ್ಡ ಅಪಮಾನ:** ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ನೀಟ್ ಪರೀಕ್ಷೆ ರದ್ದಾಗಿರುವ ಬಗ್ಗೆ ಕೇಳಿದಾಗ, ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ದೇಶಕ್ಕೆ ದೊಡ್ಡ ಅಪಮಾನವಾಗಿದ್ದು, ಕೇಂದ್ರ ಸಚಿವರು ಹಾಗೂ ಸಂಸದರು ಇದಕ್ಕೆ ಉತ್ತರಿಸಬೇಕು. ಇದೇ ಪ್ರಕರಣ ನಮ್ಮ ರಾಜ್ಯದಲ್ಲಿ ಆಗಿದ್ದರೆ ಇಷ್ಟು ಹೊತ್ತಿಗೆ ನಮ್ಮ ಮೇಲೆ ತೀವ್ರ ವಾಗ್ದಾಳಿ ನಡೆಸುತ್ತಿದ್ದರು. ಅನೇಕ ಕನಸು ಕಟ್ಟಿಕೊಂಡು ಕಷ್ಟಪಟ್ಟಿದ್ದ ವಿದ್ಯಾರ್ಥಿಗಳು ಪೋಷಕರು ಆಕ್ರೋಶಗೊಂಡಿದ್ದಾರೆ ಎಂದು ತಿಳಿಸಿದರು.

> **ಭ್ರಷ್ಟಾಚಾರಕ್ಕೆ ದಾರಿಯೇ ಹೊರತು ಬೇರೇನೂ ಅಲ್ಲ**

**ಕಾಂಗ್ರೆಸ್ ಪಕ್ಷಕ್ಕೆ ಚುನಾವಣಾ ಭೀತಿ:** ರಾಜ್ಯ ಸರ್ಕಾರ ನನ್ನ ಖಾತೆ ನನ್ನ ಹಕ್ಕು ಎಂಬ ಆರನೇ ಭೂ ಗ್ಯಾರಂಟಿಯಲ್ಲಿ ಅಚ್ಚರಿ ಏನಿಲ್ಲ ವಿಶೇಷತೆಯೂ ಇಲ್ಲ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ತಿಳಿಸಿದ್ದಾರೆ ಇದು ಬೆಂಗಳೂರಿನ ಜನರಿಗೆ ಯಾವುದೇ ಉಡುಗೊರೆ ಅಲ್ಲ ಎಂದು ತಿಳಿಸಿದರು. 33 ಲಕ್ಷ ಆಸ್ತಿಗಳಿವೆ ಎಂದಿದ್ದಾರೆ. ಈ ಆಸ್ತಿಗಳ ಒಡೆತನ ಯಾರಿಗೂ ಇರಲಿಲ್ಲವೇ? ಹೊಸದಾಗಿ ಒಡೆತನ ಕೊಡುತ್ತಿದ್ದೀರಾ ಎಂದು ಕೇಳಿದರು. ಇದು ಭ್ರಷ್ಟಾಚಾರಕ್ಕೆ ದಾರಿಯೇ ಹೊರತು ಬೇರೇನೂ ಅಲ್ಲ ಎಂದು ಆಕ್ಷೇಪಿಸಿದರು. ಕಾಂಗ್ರೆಸ್‌ನಲ್ಲಿ ಕಿಕ್‌ಬ್ಯಾಕ್ ಇಲ್ಲದೇ ಕಥೆಯೇ ಇಲ್ಲ ಎಂದು ಆರೋಪಿಸಿದರು. ಬೆಂಗಳೂರಲ್ಲಿ ರಸ್ತೆ ಗುಂಡಿಗಳು ಹಾಗೇ ಇವೆ. ಜನರ ಕೋಪ ಎದುರಿಸಲಾಗದೇ ಕಾಂಗ್ರೆಸ್ ಸರಕಾರ ಜಿಬಿಎ ಚುನಾವಣೆಯನ್ನು ನವೆಂಬರ್ ತಿಂಗಳಿಗೆ ಮುಂದಕ್ಕೆ ಹಾಕಲು ಕೋರ್ಟಿಗೆ ಅರ್ಜಿ ಹಾಕಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು ಕಾಂಗ್ರೆಸ್ ಪಕ್ಷ ಚುನಾವಣಾ ಭೀತಿ ಹೊಂದಿದೆ ಎಂದು ದೂರಿದರು.

### ಬಿಜೆಪಿ ನಾಯಕರು ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ



**ಕೋರ್ಟ್ ನಿರ್ದೇಶನದಂತೆ ಜಿಬಿಎ ಚುನಾವಣೆ ನಡೆಸಲಾಗುವುದು, ಚುನಾವಣೆ ಮುಂದೂಡುವ ಕುರಿತಾಗಿ ನಡೆಯುತ್ತಿರುವ ಚರ್ಚೆಯ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿದರು. ತಮ್ಮ ಹೇಳಿಕೆಯ ಮೂಲಕ ರಾಜ್ಯ ಸರ್ಕಾರದ ನಡೆಯ ಬಗ್ಗೆ ಡಿಕೆ ಶಿವಕುಮಾರ್ ಅವರು ಸುಳಿವು ನೀಡಿದ್ದಾರೆ. ಇದೇ ಸಂದರ್ಭದಲ್ಲಿ ಬಿಜೆಪಿ ನಾಯಕರು ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಭೂಮಿ ಗ್ಯಾರಂಟಿ ವಿಚಾರವಾಗಿ ಸರ್ಕಾರದ ಉದ್ದೇಶ ಪ್ರಶ್ನಿಸಿ ಕಿಡಿಕಾರಿದ್ದಾರೆ.**

# ಬಯೋಮೆಟ್ರಿಕ್ ಹಾಜರಿಗೆ ಜಿಪಿಎಸ್ ನಿಗಾ

• ಉದಯವಾಹಿನಿ, ಮೈಸೂರು

ಗ್ರಾಪಂ ಅಧಿಕಾರಿಗಳ ಕಣ್ಣಾ-ಮುಚ್ಚಾಲೆಯಾಟಕ್ಕೆ ಬ್ರೇಕ್‌ಹಾಕಲು ರಾಜ್ಯ ಸರಕಾರ ಜಿಪಿಎಸ್ ವ್ಯವಸ್ಥೆಯನ್ನು ಜಾರಿಗೆ ತರಲು ಚಿಂತನೆ ನಡೆಸಿದೆ. ಗ್ರಾಮ ಪಂಚಾಯಿತಿಗಳಲ್ಲಿ ಬಿಲ್‌ಕಲೆಕ್ಟರ್‌ರಿಂದ ಹಿಡಿದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ತನಕವೂ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ ಇದ್ದರೂ ಸಾರ್ವಜನಿಕರಿಗೆ ಕಚೇರಿ ಸಮಯದಲ್ಲಿ ಸಿಗದಿರುವ ದೂರುಗಳು ಬಂದಿರುವ ಕಾರಣಕ್ಕಾಗಿ ರಾಜ್ಯ ಸರಕಾರ ಈಗ ಬೇಕಾಬಿಟ್ಟಿಯಾಗಿ ಓಡಾಡುವ ಅಧಿಕಾರಿಗಳ ಮೇಲೆ ಕಣ್ಣಾವಲು ಇಡಲು ಜಿಪಿಎಸ್ ಮೊರೆ ಹೋಗುತ್ತಿದೆ. ಈಗಾಗಲೇ ಇದಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳುವಂತೆ ಸಂಬಂಧಿಸಿದ ಎಲ್ಲ ಪಂಚಾಯಿತಿಗಳಿಗೆ ಮೌಖಿಕ ಸೂಚನೆ ನೀಡಲಾಗಿದೆ.

ಈ ನೂತನ ವ್ಯವಸ್ಥೆ ಶೀಘ್ರದಲ್ಲೇ ಜಾರಿಗೆ ಬಂದರೆ ಕಚೇರಿ ಸಮಯದಲ್ಲಿ ಕಾರ್ಯ ನಿಮಿತ್ತ ಹೊರಗಡೆ ಇದ್ದೇನೆ ಎನ್ನುವ ಮಾತಿಗೆ ಕಡಿವಾಣ ಬೀಳಲಿದೆ. ರಾಜ್ಯದಲ್ಲಿ6 ಸಾವಿರ ಗ್ರಾಮ ಪಂಚಾಯಿತಿಗಳಿದ್ದು, ಇಲ್ಲಿಪೌರ ಕಾರ್ಮಿಕರು, ದ್ವಿತೀಯ ದರ್ಜೆ ಸಹಾಯಕರು, ಲೆಕ್ಕ ಸಹಾಯಕರು, ಬಿಲ್ ಕಲೆಕ್ಟರ್, ಕಾರ್ಯದರ್ಶಿ, ಪಿಡಿಒಗಳು, ನೀರುಗಂಟಿಗಳು, ಡಾಟಾ ಎಂಟ್ರಿ ಆಪರೇಟರ್, ಗ್ರಂಥ ಪಾಲಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಧಿಕಾರಿಗಳ ಹಾಜರಾತಿಗೆ ಬಯೋಮೆಟ್ರಿಕ್ ವ್ಯವಸ್ಥೆ ಇದ್ದು, ಬೆಳಗ್ಗೆ ಮತ್ತು ಸಂಜೆ ಹೊತ್ತು ಪಂಚತಂತ್ರ 2.0 ತಂತ್ರಾಂಶದಲ್ಲಿಬಯೋಮೆಟ್ರಿಕ್ ಒತ್ತಬೇಕಿದೆ. ಕಾರ್ಯದರ್ಶಿ, ಪಿಡಿಒಗಳು ನಿತ್ಯ ಚಲನ-ವಲನ ವಹಿಯನ್ನು ಬರೆಯಬೇಕು.



ಈ ಬುಕ್‌ನಲ್ಲಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಗ್ರಾಮೀಣ ಕುಡಿಯುವ ನೀರು ಸರಬರಾಜು, ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗ, ನ್ಯಾಯಾಲಯಕ್ಕೆ ಹೋಗುವುಧಿದನ್ನು ನಮೂದಿಸಬೇಕು. ಆಶ್ರಯ ಮನೆಗಳ ಜಿಪಿಎಸ್ ಮಾಡುವುದು, ಸ್ಥಳ ಪರಿಶೀಲನೆ ಮೊದಲಾದ ಕೆಲಸಗಳ ವಿಚಾರವನ್ನು ಬರೆದು ಹೋಗುತ್ತಾರೆ. ಆದರೆ, ಅಲ್ಲಿಗೆ ಹೋಗದೆ ಇದ್ದರೂ ಬಹುತೇಕರು ಪುಸ್ತಕದಲ್ಲಿ ನಮೂದಿಸಿರುವುದು ಕಂಡು ಬರುತ್ತದೆ.

ಬಯೋಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯವಾಗಿ ಮಾಡಿದ್ದರೂ ಕಚೇರಿಯಲ್ಲಿಮಾತ್ರ ಸಿಬ್ಬಂದಿ ಲಭ್ಯವಿರುವುದಿಲ್ಲ. ತಾಪಂ ಕಾರ್ಯ ನಿರ್ವಾಹಕ ಅಧಿಕಾರಿಗಳು ಗ್ರಾಪಂಗಳ ಎಲ್ಲಾ ಸರಕಾರಿ ನೌಕರರ ಬಯೋಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯವಾಗಿ ಪಂಚತಂತ್ರ 2.0 ತಂತ್ರಾಂಶದ ಮೂಲಕ ಪಡೆದು ಪ್ರತಿ ತಿಂಗಳು ವೇತನ ಪಾವತಿಸಲು ಕ್ರಮ ಕೈಗೊಳ್ಳುವುದರಿಂದ ಬಯೋ ಮೆಟ್ರಿಕ್‌ನಲ್ಲಿ ಗೈರು ಇಲ್ಲದಂತೆ ನೋಡಿಕೊಳ್ಳುತ್ತಾರೆ. ಹೀಗಾಗಿಯೇ, ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಲು ಯಾರೂ ಸಿಗುತ್ತಿಲ್ಲ ಎನ್ನುವ ದೂರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಡಿವಾಣ ಹಾಕಲು ಮುಂದಾಗಿದೆ.

## ವೈದ್ಯರ ನಿರ್ಲಕ್ಷ್ಯದಿಂದ ಗರ್ಭಿಣಿ ಸಾವು; ಪ್ರತಿಭಟನೆ

• ಉದಯವಾಹಿನಿ, ಚಾಮರಾಜನಗರ

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹೆರಿಗೆಗೆ ದಾಖಲಾಗಿದ್ದ ಗರ್ಭಿಣಿ ರೂಪಾ ವೈದ್ಯರ ನಿರ್ಲಕ್ಷ್ಯದಿಂದ ಸಮರ್ಪಕ ಚಿಕಿತ್ಸೆ ದೊರೆಯದೆ ಮೃತಪಟ್ಟಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿ ಸಂಬಂಧಿಗಳು, ರೈತ, ಇತರ ಸಂಘಟನೆಗಳ ಮುಖಂಡರು ಜಿಲ್ಲಾ ಆಸ್ಪತ್ರೆ ಮುಂಭಾಗ ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಅರಳೀಪುರ ಗ್ರಾಮದ ಗರ್ಭಿಣಿ ರೂಪಾ ಜಿಲ್ಲಾ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ಭಾರತಿ ಅವರ ಬಳಿ ಹಲವು ತಿಂಗಳುಗಳಿಂದ ಚಿಕಿತ್ಸೆ ಪಡೆಯುತ್ತಿದ್ದು, ಮೇ 3ರಂದು ಹೆರಿಗೆಗೆ ದಾಖಲಾಗಿದ್ದರು. ಈ ವೇಳೆ ವೈದ್ಯೆ ಲಭ್ಯವಿಲ್ಲದೆ ರೂಪಾ ತೀವ್ರ ಸಮಸ್ಯೆ ಅನುಭವಿಸಬೇಕಾಯಿತು. ಮೇ 6ರಂದು ಹೆರಿಗೆ ಮಾಡಿಸಲು ಕರೆದೊಯ್ದಾಗ ಸಮರ್ಪಕ ಚಿಕಿತ್ಸೆ ದೊರೆಯದೆ ಪ್ರಜ್ಞೆ ತಪ್ಪಿದ್ದಾರೆ.

'ಇಷ್ಟಾದರೂ ಇಲ್ಲಿನ ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ಕರೆದೊಯ್ಯುವಂತೆ ಸೂಚಿಸಿದ್ದು, ಅಲ್ಲಿ ಪರೀಕ್ಷೆ ಮಾಡಿದ ವೈದ್ಯರು ಈಗಾಗಲೇ ಮೃತಪಟ್ಟಿರುವುದಾಗಿ ಸ್ಪಷ್ಟಪಡಿಸಿದ್ದಾರೆ. ಕರ್ತವ್ಯಲೋಪ ಎಸಗಿದ ಜಿಲ್ಲಾ ಆಸ್ಪತ್ರೆಯ ವೈದ್ಯರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಪ್ರತಿಭಟನಾಕರರು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ, ಸಿಮ್ಸ್ ಡೀನ್, ಎಸ್‌ಪಿ, ಡಿಎಚ್‌ಒ ಭೇಟಿ ನೀಡುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು. ಈ ಸಂದರ್ಭ ಮುಖಂಡರಾದ ಹಾ.ರಾ.ಮಹೇಶ್, ನಾಗಯ್ಯ, ಬಸವಣ್ಣ ಬ್ಯಾಡಮೂಡ್ಲು, ಅಬ್ರಾರ್ ಅಹಮದ್, ಸೈಯದ್ ಆರೀಫ್ ಕಲೀಲ್ ಉಲ್ಲ, ಎಂ.ಮಹೇಶ್, ವಾಸು ಹೊಂಡರಬಾಳು,, ಬಾಬು, ಬೆಳ್ಳಿಯಪ್ಪ ಸಹಿತ ಹಲವರು ಭಾಗವಹಿಸಿದ್ದರು.

**ಸ್ಪಷ್ಟನೆ:** ಮೃತರ ಸಂಬಂಧಿಗಳ ಆರೋಪಗಳ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು ಸೂಚನೆ ನೀಡಿದ್ದೇನೆ. ವರದಿ ಆಧಾರದ ಮೇಲೆ ಮುಂದಿನ ಕ್ರಮ ಜರುಗಿಸಲಾಗುವುದು ಎಂದು ಡಿಮ್ಸ್ ಡೀನ್ ಡಾ.ಎಚ್.ಜಿ. ಮಂಜುನಾಥ್ ಸ್ಪಷ್ಟಪಡಿಸಿಸಿದ್ದಾರೆ



ಉದಯವಾಹಿನಿ ಚಿತ್ರ

# ಮಾವು ಬೆಳೆಗಾರರಿಗೆ ಡಬಲ್ ಶಾಕ್

### ಕೆಜಿ ಬಾದಾಮಿ ಹಣ್ಣು ಕೇವಲ 25ರೂ.ಗೆ ಮಾರಾಟ, ಮಾವಿನ ಸಗಟು ಧಾರಣೆಯು ಕುಸಿತ

• ಉದಯವಾಹಿನಿ, ರಾಮನಗರ

ರಾಜ್ಯದಲ್ಲಿ ಮಾವು ಬೆಳೆಯುವ ಪ್ರಮುಖ ಜಿಲ್ಲೆಯಾಗಿರುವ ಬೆಂಗಳೂರು ದಕ್ಷಿಣ ಜಿಲ್ಲೆಯ ಮಾವು ಬೆಳೆಗಾರರು ಈ ಬಾರಿ ಸಂಕಷ್ಟದ ಸುಳಿಯಲ್ಲಿ ಸಿಲುಕಿದ್ದಾರೆ. ಹವಾಮಾನ ವೈಪರೀತ್ಯ ಮತ್ತು ರೋಗಬಾಧೆಯಿಂದಾಗಿ ಶೇ.60ರಷ್ಟು ಫಸಲು ಕೈ ತಪ್ಪಿದ್ದರೆ, ಮಾರುಕಟ್ಟೆಗೆ ಬಂದ ಅಲ್ಪಸ್ವಲ್ಪ ಹಣ್ಣಿಗೂ ಸರಿಯಾದ ಬೆಲೆ ಸಿಗದೆ ರೈತರು ಡಬಲ್ ಶಾಕ್‌ಗೆ ಒಳಗಾಗಿದ್ದಾರೆ. ರಾಜ್ಯದಲ್ಲಿಯೇ ಮಾವು ಬೆಳೆಯಲ್ಲಿ ಎರಡನೇ ಸ್ಥಾನ ಗಳಿಸಿರುವ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 27 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತದೆ. ಈ ಬಾರಿ ಅವಧಿಗೂ ಮೊದಲೇ ಮಾವಿನ ಮರಗಳಲ್ಲಿ ಹೂಬಿಡಲು ಶುರುವಾಗಿತ್ತು. ಡಿಸೆಂಬರ್ ತಿಂಗಳ ಕೊನೆಯ ವಾರದವರೆಗೂ ಫ್ಲವರಿಂಗ್ ಚೆನ್ನಾಗಿಯೇ ಆಗಿತ್ತು. ಮರದ ತುಂಬೆಲ್ಲಾಅರಳಿ ನಿಂತಿದ್ದ ಹೂವಿನ ಗೊಂಚಲುಗಳನ್ನು ನೋಡಿ ಮಾವು ಬೆಳೆಗಾರರಿಗೂ ಸಂತಸವಾಗಿತ್ತು.



ಆದರೆ ಜನವರಿ ಅಂತ್ಯದಲ್ಲಿಉಂಟಾದ ಹವಾಮಾನ ವೈಪರೀತ್ಯ, ಕೀಟ, ರೋಗಬಾಧೆ ಹಾಗೂ ತೇವಾಂಶದ ಕೊರತೆ ಎಲ್ಲರ ಲೆಕ್ಕಾಚಾರವನ್ನು ಬುಡಮೇಲಾಗಿಸಿತ್ತು. ಇದೀಗ ಕೈಗೆ ಬಂದಿರುವ ಅಲ್ಪಸ್ವಲ್ಪ ಫಸಲಿಗೂ ಬೆಲೆ ಕಡಿಮೆ ಆಗಿರುವುದರಿಂದ ಮಾವು ಬೆಳೆಗಾರರು ಕಂಗಾಲಾಗಿದ್ದಾರೆ.

**ಮಾವಿನ ಸಗಟು ಧಾರಣೆ ಕುಸಿತ:** ಹೌದು, ರಾಜ್ಯದಾದ್ಯಂತ ಮಾವಿನ ಸಗಟು ಧಾರಣೆಯು ತೀವ್ರವಾಗಿ ಕುಸಿತ ಕಂಡಿದ್ದು, ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ ಹವಾಮಾನ ವೈಪರೀತ್ಯದಿಂದಾಗಿ ಈ ಬಾರಿ ಮಾವಿನ ಫಸಲು ವಿಳಂಬವಾಗಿದ್ದು, ರಾಜ್ಯದಾದ್ಯಂತ ಏಕಕಾಲಕ್ಕೆ ಉತ್ಪನ್ನ ಮಾರುಕಟ್ಟೆಗೆ ಬಂದಿರುವುದೇ ಬೆಲೆ ಕುಸಿತಕ್ಕೆ ಪ್ರಮುಖ ಕಾರಣ.

ಈ ಹಂಗಾಮಿನಲ್ಲಿಶೇ 30-40ರಷ್ಟು ಫಸಲಷ್ಟೇ ಇದ್ದರೂ ಬೆಲೆ ಮಾತ್ರ ಕುಸಿಯುತ್ತಲೇ ಇದೆ. ರಾಮನಗರದ ಜತೆಗೆ ಸದ್ಯ ಮೈಸೂರು ಭಾಗದಲ್ಲೂ ಏಕಕಾಲಕ್ಕೆ ಕೊಯ್ಲು ನಡೆಯುತ್ತಿದೆ. ಕೋಲಾರ, ಚಿಕ್ಕಬಳ್ಳಾಪುರದಲ್ಲಿಯೂ ಮಾವು ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಹೀಗಾಗಿ ಅಲ್ಲಿನ ಉತ್ಪನ್ನ ಅಲ್ಲಿನ ಮಾರುಕಟ್ಟೆಗೆ ಸೀಮಿತಗೊಂಡಿದ್ದು, ರಫ್ತು ಸಹ ಈ ಬಾರಿ ಆಶಾದಾಯಕವಾಗಿಲ್ಲ ಎನ್ನುತ್ತಾರೆ ಬೆಳೆಗಾರರು.

**ವರ್ತಕರಿಗೆ ಲಾಭ:** ಸಗಟು ಧಾರಣೆ ಕುಸಿದಿದ್ದರೂ ಚಿಲ್ಲರೆ ಮಾರುಕಟ್ಟೆಯಲ್ಲಿಇನ್ನೂ ಹಣ್ಣಿನ ಬೆಲೆ ಹೆಚ್ಚು ಇಳಿಕೆ ಕಂಡಿಲ್ಲ. ರಸಪುರಿ, ಬಾದಾಮಿ, ಮಲಗೋವಾ, ಮಲ್ಲಿಕಾ ಸೇರಿ ಪ್ರಮುಖ ತಳಿಯ ಹಣ್ಣುಗಳೆಲ್ಲವೂ ಚಿಲ್ಲರೆ ಮಾರುಕಟ್ಟೆಯಲ್ಲಿ ದುಬಾರಿಯಾಗಿಯೇ ಇವೆ.

**ಕಹಿಯಾಗುತ್ತಿದೆ ಬಾದಾಮಿ:** ರಾಜ್ಯದಲ್ಲಿಅತಿ ಹೆಚ್ಚು ಬೆಳೆಯುವ, ತನ್ನ ಸ್ವಾದದಿಂದ ಮಾವು ಪ್ರಿಯರ ಪ್ರೀತಿ ಗಳಿಸಿದ್ದ ಬಾದಾಮಿ ಮಾವಿನ ಹಣ್ಣು ಈ ಬಾರಿ ಬೆಳೆಗಾರರಿಗೆ ಕಹಿಯಾಗುತ್ತಿದೆ. ಜಿಲ್ಲೆಯಲ್ಲಿಅತೀ ಹೆಚ್ಚು ಬಾದಾಮಿ ತಳಿಯ ಮಾವನ್ನೇ ಬೆಳೆಯಲಾಗುತ್ತದೆ. ಬರೋಬ್ಬರಿ 22,830 ಹೆಕ್ಟೇರ್ ಪ್ರದೇಶದಲ್ಲಿ ಬಾದಾಮಿ ತಳಿಯನ್ನು ಬೆಳೆಯಲಾಗುತ್ತದೆ. ಕಳೆದ ಬಾರಿ 1,96,690 ಮೆಟ್ರಿಕ್ ಟನ್ ಇಳುವರಿ ಬಂದಿತ್ತು. ಆದರೆ ಈ ವರ್ಷ ಕೇವಲ 82,667 ಮೆಟ್ರಿಕ್ ಟನ್ ಮಾತ್ರ ಇಳುವರಿ ಬರುವ ನಿರೀಕ್ಷೆಯಿದೆ.

ಇಳುವರಿ ಕುಸಿತದ ಜತೆಗೆ ಈ ತಳಿಯ ಹಣ್ಣಿಗೆ ಬೇಡಿಕೆಯೂ ಕುಸಿದಿದೆ. ಪ್ರತಿ ಕೆಜಿ ಬಾದಾಮಿ ಮಾವಿನ ಕಾಯಿ ಕೇವಲ 25-30ರೂ.ಗೆ ಮಾರಾಟವಾಗುತ್ತಿದೆ ಎಂದು ಜಿಲ್ಲಾಮಾವು ಮತ್ತು ತೆಂಗು ಬೆಳೆ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷ ಧರಣೇಶ್ ಕುಮಾರ್ ಮಾಹಿತಿ ನೀಡಿದರು.

**ರಸಪೂರಿ ಬಲು ದುಬಾರಿ:** ಈ ಬಾರಿ ರಸಪೂರಿ ಮಾವಿನ ದರವು ಬಾದಾಮಿಯನ್ನೂ ಹಿಂದಿಕ್ಕಿದ್ದು ಬೆಲೆ ಕುಸಿತದ ನಡುವೆಯೂ ಬೆಳೆಗಾರರಿಗೆ ಬಂಪರ್ ಕೊಡುಗೆ ನೀಡುತ್ತಿದೆ. ಕೊಯ್ಲಿನ ಆರಂಭದಲ್ಲಿ ಸಗಟು ದರ ಪ್ರತಿ ಕೆ.ಜಿ.ಗೆ 180ರಿಂದ 200ಕ್ಕೆ ತಲುಪಿತ್ತು.

ಈಗಲೂ ಕಾಯಿಗೆ ಸರಾಸರಿ 80ರಿಂದ 90 ಬೆಲೆ ಇದೆ. ಮಾರುಕಟ್ಟೆಯಲ್ಲಿ ಹಣ್ಣಿನ ದರ 120 ರ ಸಮೀಪದಲ್ಲಿದೆ. ಸಣ್ಣ ತೊಗಟೆ ಹೆಚ್ಚು ರುಚಿ ಹಾಗೂ ಹಣ್ಣಿನ ಪ್ರಮಾಣ ಹೆಚ್ಚು ಎನ್ನುವ ಕಾರಣಕ್ಕೆ ರಸಪೂರಿ ಜನರಿಗೆ ಇಷ್ಟವಾಗುತ್ತಿದೆ. ಅದರಲ್ಲೂ ಬೆಂಗಳೂರು-ಮೈಸೂರು ಭಾಗದಲ್ಲಿ ಹೆಚ್ಚು ಬೇಡಿಕೆ ಇದೆ. ರಾಜ್ಯದಲ್ಲಿ ರಸಪೂರಿ ಮಾವಿನ ಬೆಳೆಯೂ ಕಡಿಮೆ ಆಗುತ್ತಿರುವುದು ಬೆಲೆ ಹೆಚ್ಚಳಕ್ಕೆ ಕಾರಣ ಎನ್ನುತ್ತಾರೆ ಮಾವು ಬೆಳೆಗಾರ ಆಕಾಶ್.

**ಮಾವು ಪ್ರಿಯರಿಗಿಲ್ಲ ಸಿಹಿ**

**ಒಂದು ಕಡೆ ಬೆಳೆ ನಷ್ಟದಿಂದ ರೈತ ಕಂಗಾಲು ಆಗಿದ್ದರೆ, ಇನ್ನೊಂದು ಕಡೆ ಹೆಚ್ಚಿನ ಬೆಲೆ ತೆತ್ತು ಹಣ್ಣು ಖರೀದಿಸಲಾರದೆ ಗ್ರಾಹಕ ಹೈರಾಣಾಗಿದ್ದಾನೆ. ಸಗಟು ಮಾರುಕಟ್ಟೆಯಲ್ಲಿ ಮಾವಿನ ಬೆಲೆ ತೀವ್ರವಾಗಿ ಕುಸಿದಿದ್ದರೂ, ಚಿಲ್ಲರೆ ಮಾರುಕಟ್ಟೆಯಲ್ಲಿ ಮಾತ್ರ ಬೆಲೆ ಇಳಿಕೆಯಾಗದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಮಾರುಕಟ್ಟೆಯಲ್ಲಿ ಸಗಟು ದರ ಕಡಿಮೆಯಾದಾಗ ಅದರ ಲಾಭ ಗ್ರಾಹಕರಿಗೆ ಸಿಗಬೇಕಿತ್ತು. ಆದರೆ, ಬೆಂಗಳೂರು ಸೇರಿದಂತೆ ವಿವಿಧ ನಗರಗಳ ಚಿಲ್ಲರೆ ಮಾರುಕಟ್ಟೆಯಲ್ಲಿ ಮಾವಿನ ಹಣ್ಣಿನ ಬೆಲೆ ಇಂದಿಗೂ ಸಾಮಾನ್ಯ ಜನರ ಕೈಗೆಟುಕದಂತಿದೆ.**

**ಜಿಲ್ಲೆಯ ಮಾವು ಬೆಳೆಗಾರರಿಗೆ ಈ ಬಾರಿ ಡಬಲ್ ಶಾಕ್ ಎದುರಾಗಿದೆ. ಒಂದು ಕಡೆ ಫಸಲು ಸರಿಯಾಗಿ ಬರದೇ ಇರುವುದರಿಂದ ರೈತ ಕಂಗಾಲಾಗಿದ್ದಾನೆ. ಇನ್ನೊಂದು ಕಡೆ ಈಗ ಬೇಡಿಕೆ ಕಡಿಮೆಯಾದ ಪರಿಣಾಮ ಬೆಲೆಯೂ ಕುಸಿತವಾಗಿದೆ. ಹೀಗಾದರೆ ಔಷಧ ಸಿಂಪಡಣೆ, ಗೊಬ್ಬರ ಮತ್ತು ನಿರ್ವಹಣೆಗೆ ಮಾಡಿದ್ದ ಸಾಲ ತೀರಿಸುವುದು ಹೇಗೆ? ಸರಕಾರ ಮಾವು ಬೆಳೆಗಾರರ ನೆರವಿಗೆ ಧಾವಿಸಬೇಕು.**

**-ಧರಣೇಶ್ ಕುಮಾರ್, ಅಧ್ಯಕ್ಷರು, ಜಿಲ್ಲಾಮಾವು ಮತ್ತು ತೆಂಗು ಬೆಳೆ ರೈತ ಉತ್ಪಾದಕ ಕಂಪನಿ**

## ನಾಲೆಗಳಿಗೆ ನೀರು ಹರಿಸಲು ರವೀಂದ್ರ ಶ್ರೀಕಂಠಯ್ಯ ಮನವಿ

• ಉದಯವಾಹಿನಿ, ಮಂಡ್ಯ



ಕೆಆರ್‌ಎಸ್ ಅಣೆಕಟ್ಟೆ ವ್ಯಾಪ್ತಿಯ ಪ್ರದೇಶದಲ್ಲಿ ಭತ್ತದ ಫಸಲು ಕಾಳು ಕಟ್ಟುವ ಹಂತದಲ್ಲಿದ್ದು, ಬಿಸಿಲ ಬೇಗೆ ಹೆಚ್ಚಾಗಿರುವುದರಿಂದ ನಾಲೆಗಳಿಗೆ ಕೂಡಲೇ ನೀರು ಹರಿಸುವಂತೆ ರಾಜ್ಯ ಸರ್ಕಾರ ಮತ್ತು ಜಿಲ್ಲಾ ಉಸ್ತುವಾರಿ ಸಚಿವರನ್ನು ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಮನವಿ ಮಾಡಿಕೊಂಡಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಜಿಲ್ಲೆಯಲ್ಲಿ ಸುಮಾರು 1.80 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗಿದೆ. ಈಗ ಕಾಳು ಕಟ್ಟುವ ಹಂತವಾಗಿದೆ. ಕೆಆರ್‌ಎಸ್ ವ್ಯಾಪ್ತಿಯ ನಾಲೆಗಳಿಗೆ ನೀರು ಹರಿಸಿ ಭತ್ತದ ಫಸಲು ರಕ್ಷಿಸಿಕೊಳ್ಳಲು ನೆರವಾಗಬೇಕು ಎಂದಿದ್ದಾರೆ.

ಪ್ರಸ್ತುತದಲ್ಲಿ ಶೇ 60 ರಷ್ಟು ಭತ್ತದ ಬೆಳೆಗೆ ತುರ್ತಾಗಿ ಒಂದು ಕಟ್ಟು ನೀರು ಬೇಕಿದೆ. ಸಕಾಲಿಕವಾಗಿ ನೀರು ಹರಿಸದಿದ್ದರೆ ಭತ್ತದ ಫಸಲು ಅಪಾರ ಪ್ರಮಾಣದಲ್ಲಿ ನಾಶವಾಗಿ ಜೊಳ್ಳಾಗಲಿದೆ. ವಾಡಿಕೆಯಂತೆ ಮೇ 12 ರಂದು ನಾಲೆಗಳಿಗೆ ನೀರು ಹರಿಸಿದರೆ ಜಮೀನುಗಳಿಗೆ ತಲುಪಲು ಹೆಚ್ಚುವರಿಯಾಗಿ ಮೂರು ದಿನದ ಅವಶ್ಯವಿದೆ. ಇದನ್ನು ಮನಗಂಡು ರೈತರಿಗೆ ನಷ್ಟ ತಪ್ಪಿಸಲು ಕೆಆರ್ ಎಸ್ ಅಣೆಕಟ್ಟೆ ಪಾತ್ರದ ನಾಲೆಗಳಿಗೆ ತ್ವರಿತವಾಗಿ ನೀರು ಹರಿಸಬೇಕೆಂದು ಮನವಿ ಮಾಡಿದ್ದಾರೆ.

**ಖರೀದಿ ಕೇಂದ್ರ ತೆರೆಯಿರಿ:** ಭತ್ತ ಕಟಾವಿಗೆ ಮೊದಲೇ ಭತ್ತ ಖರೀದಿ ಕೇಂದ್ರಗಳನ್ನು ತೆರೆಯಲು ಜಿಲ್ಲಾಡಳಿತ ಸನ್ನದ್ಧವಾಗಬೇಕು. ಭತ್ತ ಕಟಾವು ನಂತರದಲ್ಲಿ ಖರೀದಿ ಕೇಂದ್ರ ತೆರೆದರೆ ಭತ್ತ ದಲ್ಲಾಳಿಗಳ ಪಾಲಾಗಿ ರೈತರಿಗೆ ನಷ್ಟವಾಗಲಿದೆ. ಜೊತೆಗೆ ರೈತರಿಗೆ ರಸಗೊಬ್ಬರ ದಾಸ್ತಾನು ಕೊರತೆ ಇದ್ದು, ಯೂರಿಯಾ ಕೊರತೆಯಿಂದ ಹಲವಾರು ಬೆಳೆಗಳ ಬೆಳವಣಿಗೆಗೆ ತೊಂದರೆಯಾಗಿದೆ ಎಂದು ಆರೋಪಿಸಿದ್ದಾರೆ.

**ಕಾರ್ಖಾನೆ ಆರಂಭಿಸಿ:** ಜೂನ್ ತಿಂಗಳಲ್ಲಿ ಮೈಷುಗರ್ ಸಕ್ಕರೆ ಕಾರ್ಖಾನೆ ಸೇರಿ ಎಲ್ಲಾ ಸಕ್ಕರೆ ಕಾರ್ಖಾನೆ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಬೇಕು. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆಯಲ್ಲಿ ವಿದ್ಯುತ್ ನೀಡಬೇಕು. ಪರವಾನಗಿ ಭೂಮಾಪಕರು ತಮ್ಮ ವಿವಿಧ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಂಡಿದ್ದು, ರಾಜ್ಯ ಸರ್ಕಾರ ಭೂಮಾಪಕರ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿದ್ದಾರೆ.


## ನೀರಾವರಿ, ಅಭಿವೃದ್ಧಿಗೆ ಒತ್ತಾಯ

• ಉದಯವಾಹಿನಿ, ಕೋಲಾರ:

ತಾಲ್ಲೂಕಿನ ಕ್ಯಾಲನೂರು ಭಾಗದಲ್ಲಿ ಯಾವುದೇ ನೀರಾವರಿ ಯೋಜನೆಗಳು ಜಾರಿಯಾಗಿಲ್ಲ. ಕೂಡಲೇ ರಾಜ್ಯ ಸರ್ಕಾರವು ಈ ಭಾಗದಲ್ಲಿ ನೀರಾವರಿ ಯೋಜನೆಗಳ ಜೊತೆಗೆ ಅಭಿವೃದ್ಧಿಗೆ ಒತ್ತು ನೀಡುವಂತೆ ಜೆಡಿಎಸ್ ಮುಖಂಡ ಸಿಎಂಆರ್ ಶ್ರೀನಾಥ್ ಆಗ್ರಹಿಸಿದರು.

ಚುನಾವಣಾ ಆಯೋಗದಿಂದ ನಡೆಯಲಿರುವ ಎಸ್‌ಐಆರ್ ಕುರಿತು ಜಾಗೃತಿ ಮತ್ತು ಪಕ್ಷದಿಂದ ಬೂತ್ ಮಟ್ಟದ ಏಜೆಂಟ್ ನೇಮಿಸುವ ಕುರಿತು ವೇಮಗಲ್ ಹೋಬಳಿಯ ಚನ್ನಸಂದ್ರ ಗ್ರಾಮದಲ್ಲಿ ಜೆಡಿಎಸ್‌ನಿಂದ ನಡೆದ ಗ್ರಾಮ ಪಂಚಾಯತಿ ಮಟ್ಟದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ಕೋಲಾರ, ಚಿಕ್ಕಬಳ್ಳಾಪುರ ಅವಳಿ ಜಿಲ್ಲೆಗಳಿಗೆ ಬೆಂಗಳೂರಿನಿಂದ ಕೆ.ಸಿ ವ್ಯಾಲಿ ಮತ್ತು ಎಚ್.ಎನ್ ವ್ಯಾಲಿ ಯೋಜನೆಗಳ ಮೂಲಕ ನೀರು ತರಲಾಗಿದೆ. ಆದರೆ ಕ್ಯಾಲನೂರು ಭಾಗದಲ್ಲಿ ಯಾವುದೇ ಯೋಜನೆ ಜಾರಿಯಾಗಿಲ್ಲ. ಕೂಡಲೇ ನೀರಾವರಿ ಯೋಜನೆ ಜಾರಿಗೆ ಮುಂದಾಗಲಿ ಎಂದು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

## ರಾಷ್ಟ್ರೀಯ ಹೆದ್ದಾರಿ ವಿದ್ಯುತ್ ದೀಪ ದುರಸ್ತಿಪಡಿಸುವಂತೆ ಒತ್ತಾಯಿಸಿ ಕಾವಲು ಪಡೆ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ಪಟ್ಟಣದ ಮೈಸೂರು-ಊಟಿ ಹಾಗೂ ಸುಲ್ತಾನ್ ಬತ್ತೇರಿ ರಸ್ತೆಯ ಮಧ್ಯ ಭಾಗದಲ್ಲಿರುವ ವಿದ್ಯುತ್‌ದೀಪಗಳನ್ನು ದುರಸ್ತಿಪಡಿಸುವಂತೆ ಒತ್ತಾಯಿಸಿ ಕರ್ನಾಟಕ ಕಾವಲು ಪಡೆಯ ಪಧಾಧಿಕಾರಿಗಳು ಬುಧವಾರ ಪ್ರತಿಭಟನೆ ನಡೆಸಿದರು. ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಎಂ.ಡಿ.ಸಿ.ಸಿ.ಬ್ಯಾಂಕ್ ಮುಂಭಾಗ ರಸ್ತೆ ತಡೆದು ಅಧಿಕಾರಿಗಳ ವಿರುದ್ಧ ದಿಕ್ಕಾರದ ಘೋಷಣೆಗಳನ್ನ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ತಾಲ್ಲೂಕು ಕಚೇರಿಗೆ ಮುಂಭಾಗ ಜಮಾಯಿಸಿ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ವಿರುದ್ಧ ಅಸಮಾಧಾನ ಹೊರಹಾಕಿದರು, ಕಾವಲು ಪಡೆಯ ತಾಲ್ಲೂಕು ಅಧ್ಯಕ್ಷ ಎ.ಅಬ್ದುಲ್ ಮಾಲಿಕ್ ಮಾತನಾಡಿ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಿದ್ಯುತ್ ದೀಪ ದುರಸ್ತಿ ಮಾಡದೇ ಇರುವುದರಿಂದ ಪಾದಚಾರಿಗಳಿಗೆ ತುಂಬಾ ತೊಂದರೆಯಾಗುತ್ತಿದ್ದರೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ವಿದ್ಯುತ್ ದೀಪಗಳನ್ನ ಸರಿಪಡಿಸುವುದಕ್ಕೆ ಮುಂದಾಗಿಲ್ಲ ಎಂದು ಆರೋಪಿಸಿದರು.


ಅಧಿಕಾರಿಗಳು ಕೂಡಲೇ ವಿದ್ಯುತ್ ದೀಪಗಳು ಸರಿಪಡಿಸಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಸಿ ಬಳಿಕ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿದ ದಂಡಾಧಿಕಾರಿಗಳು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಕೂಡಲೇ ಕ್ರಮಕ್ಕೈಗೊಳ್ಳುವಂತೆ ಸೂಚಿಸಿದರು.

ಪ್ರತಿಭಟನೆಯಲ್ಲಿ ಕಾವಲು ಪಡೆಯ ತಾಲ್ಲೂಕು ಗೌರವಾಧ್ಯಕ್ಷ ರಾಮೇಗೌಡ, ಕಾರ್ಯದರ್ಶಿ ಎಸ್. ಮುಬಾರಕ್, ಉಪಾಧ್ಯಕ್ಷ ಶಿವಕುಮಾರ್.ಟೌನ್ ಉಪಾಧ್ಯಕ್ಷ ಸಾದಿಕ್ ಪಾಷ.ಟೌನ್ ಸಂಚಾಲಕ ಮಿಮಿಕ್ರಿರಾಜು. ಜಾಕಿರ್ ಹುಸೇನ್, ವಾಸುಆಚಾರ್, ಆಸೀಫ್, ಕರೀಮ್,ಮುಂಟೀಪುರಮಾದಯ್ಯ, ಕಂದೇಗಾಲ ಮನಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಕಟ್ಟಡ ನಿರ್ಮಾಣಕ್ಕೆ ಅನುದಾನ: ಶಾಸಕ

• ಉದಯವಾಹಿನಿ, ಚಾಮರಾಜನಗರ

ನಗರದ ಸಮೀಪದ ಕರಿನಂಜನಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಹಕಾರ ಸಂಘಕ್ಕೆ ಶಾಸಕ, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿದರು. ಇದೇ ವೇಳೆ ಸಂಘದ ನೂತನ ಸದಸ್ಯರಿಗೆ ಸಾಲ ಸೌಲಭ್ಯ ಸೇರಿದಂತೆ ಸಂಘದ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡುವ ಭರವಸೆ ನೀಡಿದ ಶಾಸಕರು ಬ್ಯಾಂಕಿನ ವಹಿವಾಟು, ಸಾಲಗಳ ವಿವರ ಪಡೆದುಕೊಂಡರು. ಸಹಕಾರ ಸಂಘವನ್ನು ಮುನ್ನಡೆಸಲು ಪ್ರಾಮಾಣಿಕತೆ ಹಾಗೂ ನಿಷ್ಠೆ ಅಗತ್ಯವಿದ್ದು, ಕಾರ್ಯದರ್ಶಿ ಮತ್ತು ಅಧ್ಯಕ್ಷರು ಪಾರದರ್ಶಕವಾಗಿ ಆಡಳಿತ ನಡೆಸಿದರೆ ಸಂಘ ಅಭಿವೃದ್ಧಿಯ ಹಾದಿಯಲ್ಲಿ ಸಾಗುತ್ತದೆ. ಉತ್ತರ ಕರ್ನಾಟಕ ಮತ್ತು ಕರಾವಳಿ ಭಾಗದಲ್ಲಿ ಸಹಕಾರ ಸಂಘಗಳು ಸರ್ಕಾರಿ ಬ್ಯಾಂಕ್‌ಗಳಿಗಿಂತಲೂ ಹೆಚ್ಚಿನ ವಹಿವಾಟು ನಡೆಸುತ್ತಿದ್ದು ಲಾಭದಾಯಕವಾಗಿ ನಡೆಯುತ್ತಿದ್ದು, ಪಾರದರ್ಶಕ ಆಡಳಿತ ಕಾರಣವಾಗಿದೆ. ಸಂಘದ ನಿರ್ದೇಶಕರು ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು' ಎಂದು ಸಲಹೆ ನೀಡಿದರು. 'ಸಂಘ ಅಭಿವೃದ್ಧಿಯಾಗಬೇಕಾದರೆ ಹೊಸ ಸದಸ್ಯರಿಗೆ ಸಾಲ ದೊರೆಯಬೇಕು, ಅಫೆಕ್ಸ್ ಬ್ಯಾಂಕ್ ಚುನಾವಣೆ ರದ್ದಾಗಿರುವ ಕಾರಣದಿಂದ ಬ್ಯಾಂಕ್‌ಗಳಿಗೆ ಸಾಲ ನೀಡುವುದು ವಿಳಂಬವಾಗುತ್ತದೆ. ಆಡಳಿತ ಮಂಡಳಿ ಶೀಘ್ರ ಹೊಸ ಸದಸ್ಯರ ಪಟ್ಟಿ ಕಳುಹಿಸಿಕೊಟ್ಟರೆ ಸಾಲ ಮಂಜೂರಾತಿ ಮಾಡಿಸಲಾಗುವುದು' ಎಂದರು. ಸಂಘದ ಅಧ್ಯಕ್ಷ ಈಶ್ವರ್ ಮಾತನಾಡಿ, 'ಕರಿನಂಜನಪುರ ಸಹಕಾರ ಸಂಘ ಹಳೆಯ ಸಂಘವಾಗಿದ್ದು, ಸದಸ್ಯತ್ವ ಹೊಂದಿರುವ ಎಲ್ಲರಿಗೂ ಸಾಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಶಾಸಕರು ಹೆಚ್ಚಿನ ಅನುದಾನ ಹಾಗೂ ಸೌಲಭ್ಯವನ್ನು ಕಲ್ಪಿಸಿಕೊಡಬೇಕು. ಬ್ಯಾಂಕ್‌ಗೆ ಮೂಲ ಸೌಲಭ್ಯ ಕಲ್ಪಿಸಬೇಕು' ಎಂದು ಮನವಿ ಮಾಡಿದರು.


ಉದಯವಾಹಿನಿ ಚಿತ್ರ

### ಮಲೆ ಮಹದೇಶ್ವರ ಬೆಟ್ಟದ ನಾಗಮಲೆ ಪ್ರದೇಶದಲ್ಲಿ ಆಪರೇಷನ್ ಚಿರತೆ ಕಾರ್ಯಾಚರಣೆ

# ಹಗಲಿರುಳು ಬಿರುಸಿನ ಕಾರ್ಯಾಚರಣೆ

• ಉದಯವಾಹಿನಿ, ಹನೂರು

ಮಲೆ ಮಹದೇಶ್ವರ ಬೆಟ್ಟದ ಕಾಡಂಚಿನಲ್ಲಿ ಚಿರತೆ ಸೆರೆಗೆ ಅರಣ್ಯ ಇಲಾಖೆ 'ಆಪರೇಷನ್ ಚಿರತೆ' ಕಾರ್ಯಾಚರಣೆ ತೀವ್ರಗೊಳಿಸಿದೆ. ಭಕ್ತರು, ಸಾರ್ವಜನಿಕರ ಆತಂಕದ ಹಿನ್ನೆಲೆ ಬೆಟ್ಟದಾದ್ಯಂತ ಹಗಲಿರುಳು ಬಿರುಸಿನ ಕಾರ್ಯಾಚರಣೆ ನಡೆಯುತ್ತಿದೆ. ಬೆಟ್ಟದಲ್ಲಿ ನಡೆಯುತ್ತಿರುವ ಕಾರ್ಯಾಚರಣೆ ಹಿನ್ನೆಲೆ ಚಾಮರಾಜನಗರ ವಲಯದ ಸಿಸಿಎಫ್ ಮಾಲತಿ ಪ್ರಿಯಾ ಭೇಟಿ ನೀಡಿ ಪರಿಶೀಲನೆ ನಡೆಸಿ, ಕಾರ್ಯಾಚರಣೆಯ ಪ್ರಗತಿ, ಬೋನ್‌ಗಳ ಅಳವಡಿಕೆ ಹಾಗೂ ಚಿರತೆ ಚಲನವಲನ ಪತ್ತೆ ಕಾರ್ಯಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.


**ನಮ್ಮ ಪ್ರಮುಖ ಗುರಿ**

**ಅರಣ್ಯ ಪ್ರದೇಶದಲ್ಲಿ ನಿರಂತರ ನಿಗಾ:** ಬಳಿಕ ಮಾತನಾಡಿ ಸಿಸಿಎಫ್ ಮಾಲತಿ ಪ್ರಿಯಾ, ''ಮಹದೇಶ್ವರ ವನ್ಯಧಾಮ ಹಾಗೂ ಕಾವೇರಿ ವನ್ಯಜೀವಿ ವಲಯದ 70 ಕ್ಕೂ ಹೆಚ್ಚು ನುರಿತ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಚಿರತೆಯ ಚಲನವಲನ ಪತ್ತೆಹಚ್ಚಲು ಥರ್ಮಲ್ ಡ್ರೋನ್‌ಗಳ ಸಹಾಯ ಪಡೆಯಲಾಗುತ್ತಿದೆ. ದಟ್ಟ ಅರಣ್ಯ ಪ್ರದೇಶದಲ್ಲಿ ನಿರಂತರ ನಿಗಾ ವಹಿಸಲಾಗುತ್ತಿದೆ,''ಎಂದರು.

''ಚಿರತೆ ಸಂಚರಿಸುವ ಶಂಕಿತ ಮಾರ್ಗಗಳನ್ನು ಗುರುತಿಸಿ ಈಗಾಗಲೇ ನಾಲ್ಕು ಬೋನ್‌ಗಳನ್ನು ಅಳವಡಿಸಲಾಗಿದೆ. ಅಗತ್ಯವಿದ್ದರೆ ಹೆಚ್ಚುವರಿ ಬೋನ್‌ಗಳನ್ನು ಅಳವಡಿಸುವ ಕಾರ್ಯವೂ ಮುಂದುವರಿಯಲಿದೆ. ಜತೆಗೆ ಚಿರತೆ ಹೆಜ್ಜೆ ಗುರುತು ಮತ್ತು ಇತ್ತೀಚಿನ ಚಲನೆಯ ಸುಳಿವುಗಳ ಆಧಾರದಲ್ಲಿ ವಿಶೇಷ ತಂಡಗಳು ಪರಿಶೀಲನೆ ನಡೆಸುತ್ತಿದ್ದಾರೆ. ವಿಶೇಷ ಕಾರ್ಯಪಡೆ ರಚಿಸಲಾಗಿದ್ದು, ದಟ್ಟ ಅರಣ್ಯ ಹಾಗೂ ಭೂಗೋಳದ ಸವಾಲುಗಳ ನಡುವೆಯೂ ಚಿರತೆಯನ್ನು ಸುರಕ್ಷಿತವಾಗಿ ಸೆರೆಹಿಡಿಯುವುದು ನಮ್ಮ ಪ್ರಮುಖ ಗುರಿಯಾಗಿದೆ ಎಂದು ಹೇಳಿದರು.

''ಮುಂದಿನ ದಿನಗಳಲ್ಲಿ ನಾಗಮಲೆ, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಕ್ತರು, ಸಾರ್ವಜನಿಕರ ಸುರಕ್ಷತೆಗಾಗಿ ಕೈಗೊಳ್ಳಬೇಕಾದ ಶಾಶ್ವತ ಕ್ರಮಗಳ ಕುರಿತು ಯೋಜನೆ ರೂಪಿಸಲಾಗುವುದು,''ಎಂದು ತಿಳಿಸಿದರು.

ಡಿಸಿಎಫ್ ಭಾಸ್ಕರ್, ಎಸಿಎಫ್ ಮರಿಸ್ವಾಮಿ, ವಿರಾಜ್, ಸಂದೀಪ್‌ಕಂಬಾರ್ ಸೇರಿದಂತೆ ಮಾದೇಥ್ ವಾಗೇಶ್ ಇದ್ದರು.



**ಸಾರ್ವಜನಿಕರು, ಭಕ್ತರ ಆತಂಕ**

**ಮಲೆ ಮಹದೇಶ್ವರ ಬೆಟ್ಟದ ಕಾಡಂಚಿನಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವುದರಿಂದ ಅರಣ್ಯ ಇಲಾಖೆಯು 'ಆಪರೇಷನ್ ಚಿರತೆ' ಕಾರ್ಯಾಚರಣೆಯನ್ನು ತೀವ್ರಗೊಳಿಸಿದೆ. ಸಾರ್ವಜನಿಕರು ಮತ್ತು ಭಕ್ತರ ಆತಂಕ ದೂರ ಮಾಡಲು ಹಗಲಿರುಳು ಬಿರುಸಿನ ಶೋಧ ಕಾರ್ಯ ನಡೆಯುತ್ತಿದ್ದು, ಚಾಮರಾಜನಗರ ವಲಯದ ಸಿಸಿಎಫ್ ಮಾಲತಿ ಪ್ರಿಯಾ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.**

**ಅರಣ್ಯ ಇಲಾಖೆ ಮನವಿ**

**ಬೆಟ್ಟದ ಮಾರ್ಗದಲ್ಲಿ ಸಂಚರಿಸುವ ಭಕ್ತರು ಹಾಗೂ ಸ್ಥಳೀಯರು ಗುಂಪಾಗಿ ಪ್ರಯಾಣಿಸಬೇಕು ಇಲಾಖೆಯ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಚಿರತೆ ಕಂಡರೆ ತಕ್ಷಣ ತಿಳಿಸಬೇಕು. ರಾತ್ರಿ ವೇಳೆ ಸಂಚಾರ ಮಾಡಬಾರದು. ಅರಣ್ಯ ಇಲಾಖೆ ಸಿಬ್ಬಂದಿಯಿಂದ ಹಗಲಿರುಳು ಕಾರ್ಯಾಚರಣೆ ನಡೆಯುತ್ತಿದೆ.**

## ಮಿನಿ ನ್ಯೂಸ್

### ಬಿಡದಿ ಟೌನ್‌ಶಿಪ್-ಡಿನೋಟಿಫೈ ಮಾಡುವುದಿಲ್ಲ: ಡಿ.ಕೆ.ಶಿವಕುಮಾರ್

• ಉದಯವಾಹಿನಿ, ಬಿಡದಿ

ಬಿಡದಿ ಟೌನ್‌ಶಿಪ್‌ಗಾಗಿ ಮಾಡಿರುವ ಭೂಸ್ವಾಧೀನವನ್ನು ಯಾವ ಕಾರಣಕ್ಕೂ ಡಿನೋಟಿಫೈ ಮಾಡುವುದಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಪುನರುಚ್ಚರಿಸಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ಹತ್ತಿಪ್ಪತ್ತು ಜನರನ್ನು ಹೊರತುಪಡಿಸಿ, ಅಲ್ಲಿ ಯಾರೂ ಕೃಷಿ ಮಾಡುತ್ತಿಲ್ಲ. ನಾವು ನೀಡುತ್ತಿರುವಷ್ಟು ಪರಿಹಾರವನ್ನು ದೇಶದಲ್ಲಿ ಯಾವ ಸರ್ಕಾರವೂ ನೀಡುತ್ತಿಲ್ಲ. ದುಪ್ಪಟ್ಟು ಪರಿಹಾರ ನೀಡಲು ಅವಕಾಶ ಇಲ್ಲದಿದ್ದರೂ, ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಂಡಿದ್ದೇವೆ ಎಂದರು.

### ಟಿ.ಬಿ ಕ್ರಾಸ್‌ನಲ್ಲಿ ಕಗ್ಗತ್ತಲು ಜನರ ಸಂಚಾರಕ್ಕೆ ತೊಂದರೆ

• ಉದಯವಾಹಿನಿ, ಬಾಗೇಪಲ್ಲಿ

ಪಟ್ಟಣದ ಹೊರವಲಯದ ಟಿ.ಬಿ.ಕ್ರಾಸ್‌ನಲ್ಲಿ ಮೇಲ್ಸೇತುವೆಯಲ್ಲಿ ಹೈಮಾಸ್ಟ್ ದೀಪ ಇಲ್ಲದೆ, ರಾತ್ರಿ ವೇಳೆ ಪ್ರಯಾಣಿಕರು ಕಗ್ಗತ್ತಲಿನಲ್ಲಿ ಪರದಾಡುವಂತಾಗಿದೆ ಎಂದು ಸ್ಥಳೀಯರು ದೂರಿದ್ದಾರೆ. ಬೆಂಗಳೂರು ಹೈದರಾಬಾದ್ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ರಸ್ತೆ-44ರ ಟಿ.ಬಿ ಕ್ರಾಸ್‌ನ ಮೂಲಕ ಪಟ್ಟಣಕ್ಕೆ ರಸ್ತೆ ಹಾದು ಹೋಗುತ್ತದೆ. ಟಿ.ಬಿ. ಕ್ರಾಸ್‌ನಲ್ಲಿ ಮೇಲ್ಸೇತುವೆಯ 4 ಕಡೆಗಳಲ್ಲಿ ಬೈಪಾಸ್ ರಸ್ತೆಗಳನ್ನು ಮಾಡಲಾಗಿದೆ. ಇದೇ ಟಿ.ಬಿ ಕ್ರಾಸ್‌ನಿಂದ ಹೈದರಾಬಾದ್, ಬೆಂಗಳೂರು ಕಡೆಗಳಿಂದ ಬರುವ ಪ್ರಯಾಣಿಕರು ಪಟ್ಟಣಕ್ಕೆ ಸಂಚರಿಸಬೇಕು. ಟಿ.ಬಿ ಕ್ರಾಸ್ ಮೇಲ್ಸೇತುವೆಯಲ್ಲಿ ಹೈದರಾಬಾದ್ ಮತ್ತು ಬೆಂಗಳೂರು ಕಡೆಗಳಿಂದ ಬರುವ ಬಸ್‌ಗಳು ರಾತ್ರಿ ವೇಳೆ ಪಟ್ಟಣಕ್ಕೆ ಬರುವುದಿಲ್ಲ. ಟಿ.ಬಿ. ಕ್ರಾಸ್ ಮೇಲ್ಸೇತುವೆಯಲ್ಲಿ ಪ್ರಯಾಣಿಕರನ್ನು ಇಳಿಸಲಾಗುತ್ತದೆ. ಮಹಿಳೆಯರು, ಮಕ್ಕಳು, ಹಿರಿಯರು 5 ಕಿ.ಮೀ.ನಷ್ಟು ದೂರ ಕಾಲು ನಡಿಗೆಯಲ್ಲೇ ಸಂಚರಿಸಬೇಕಿದೆ. ಆದರೆ, ಬೀದಿದೀಪ, ಹೈಮಾಸ್ಟ್ ದೀಪವಿಲ್ಲದ ಕಾರಣ ಪ್ರಯಾಣಿಕರೆಲ್ಲರೂ ಕಗ್ಗತ್ತಲಲ್ಲೇ ನಡೆದು, ಊರು ಸೇರಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಸುತ್ತಮುತ್ತಲಿನ ಗ್ರಾಮಸ್ಥರಾದ ಚಲಪತಿ, ರತ್ನಮ್ಮ, ವೆಂಕಟಶಿವಪ್ಪ ದೂರಿದರು.

### ಕೋಲಾರ ಡಿಸಿಸಿ ಬ್ಯಾಂಕ್ ಹಗರಣ ಸಿಬಿಐಗೆ ಒಪ್ಪಿಸಲು ಆಗ್ರಹ

• ಉದಯವಾಹಿನಿ, ಕೋಲಾರ

ಪ್ರಾಮಾಣಿಕವಾಗಿ ಸಾಲ ಮರುಪಾವತಿ ಮಾಡಿರುವ ರೈತರಿಗೆ ಯಾವುದೇ ಷರತ್ತು ಇಲ್ಲದೆ ಕೃಷಿ ಸಾಲ ವಿತರಣೆ ಮಾಡಬೇಕು, ಬ್ಯಾಂಕ್‌ನಲ್ಲಿ ನಡೆದಿರುವ ಹಗರಣವನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಆಗ್ರಹಿಸಿ ರೈತ ಸಂಘದವರು ನಗರದ ಡಿಸಿಸಿ ಬ್ಯಾಂಕ್ ಮುಂದೆ ಪ್ರತಿಭಟನೆ ನಡೆಸಿದರು.

ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಲೂಟಿ ಮಾಡಲು ರೈತರು, ಮಹಿಳೆಯರು, ಕೂಲಿ ಕಾರ್ಮಿಕರಿಗೆ ಸ್ವಾಭಿಮಾನದ ಬದುಕು ನೀಡಿರುವ ಡಿಸಿಸಿ ಬ್ಯಾಂಕ್ ಬೇಕೇ? ಬ್ಯಾಂಕ್‌ಗೆ ಬೀಗ ಹಾಕುವ ಕಾಲ ದೂರ ಇಲ್ಲ, ಬ್ಯಾಂಕ್ ಮುಳುಗಡೆಯಾಗುತ್ತಿದ್ದರೂ ಜನಪ್ರತಿನಿಧಿಗಳು ಏಕೆ ಧ್ವನಿ ಎತ್ತುತ್ತಿಲ್ಲ ಎಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ ನಾರಾಯಣಗೌಡ ಪ್ರಶ್ನಿಸಿದರು. ಪಡೆದು ಸಾಲವನ್ನು ಮರುಪಾವತಿ ಮಾಡದ ಮಾಜಿ ಶಾಸಕರಿಗೆ ಸಾಲ ಮುಕ್ತಿವಾಗಿದೆಯೆಂದು ಎನ್‌ಓಸಿ ನೀಡಿರುವ ಪ್ರಕರಣವನ್ನು ಗಂಭಿರವಾಗಿ ಪರಿಗಣಿಸಿ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಎಲ್ಲಾ ರೈತರಿಗೂ, ಸ್ತ್ರೀ ಶಕ್ತಿ ಸಂಘಗಳಿಗೂ ಬ್ಯಾಂಕ್‌ನಿಂದ ಎನ್‌ಓಸಿ ನೀಡಿ ಎಂದು ಒತ್ತಾಯಿಸಿದರು.

### ಎರಡು ಬೈಕ್‌ಗೆ ಒಂದೇ ಸಂಖ್ಯೆ!; ದೂರು ದಾಖಲು

• ಉಯವಾಹಿನಿ, ಮೈಸೂರು

ಒಂದೇ ನೋಂದಣಿ ಸಂಖ್ಯೆಯ ಎರಡು ದ್ವಿಚಕ್ರ ವಾಹನ ಪತ್ತೆಯಾಗಿದ್ದು, ಆರ್‌ಟಿಒ ಅಧಿಕಾರಿಗಳು ಅಸಲಿ ಸಂಖ್ಯೆ ಹೊಂದಿರುವ ವಾಹನ ಪತ್ತೆಹಚ್ಚುವ ಸವಾಲು ಎದುರಿಸುತ್ತಿದ್ದಾರೆ. ನಗರದ ಕೆಎಸ್‌ಆರ್‌ಟಿಸಿ ನೌಕರ ಜಯಂತ್, ಆಂಧ್ರ ಪ್ರದೇಶ ಮೂಲದ ಯೋಧರೊಬ್ಬರ ಬುಲೆಟ್ ಬೈಕ್‌ಗಳಿಗೆ ಒಂದೇ ನೋಂದಣಿ ಸಂಖ್ಯೆ ಇದೆ. ಇದು ಸಾರಿಗೆ ನಿಯಮಕ್ಕೆ ವಿರುದ್ಧವಾಗಿದ್ದು, ಪಶ್ಚಿಮ ಆರ್‌ಟಿಒ ಕಚೇರಿಯಲ್ಲಿ ಆಂಧ್ರಪ್ರದೇಶದ ವ್ಯಕ್ತಿ ದೂರು ನೀಡಿದ್ದಾರೆ. ಆರ್‌ಟಿಒ ವತಿಯಿಂದ ಎರಡು ಬೈಕ್‌ಗಳಿಗೆ ಎಂಇಜಿ 2261 ಎಂಬ ಸಂಖ್ಯೆ ನೀಡಲಾಗಿದೆ. ಚಾರ್ಸಿ ಸಂಖ್ಯೆಯೂ ಒಂದೇ ರೀತಿ ಇದೆ. ಇಬ್ಬರು ಮಾಲೀಕರಲ್ಲೂ ಸರಿಯಾದ ದಾಖಲೆಗಳೂ ಇವೆ. ಎರಡೂ ಬೈಕ್‌ಗಳನ್ನು ಸುಪರ್ದಿಗೆ ಪಡೆದು ಪರಿಶೀಲನೆ ನಡೆಸುತ್ತಿದ್ದೇವೆ.

ಮಂಗಳೂರು ಆರ್‌ಆರ್‌ಸಿಗೆ ಪತ್ರ ವ್ಯವಹಾರ ಮಾಡಿದ್ದು, ಮೂಲ ದಾಖಲೆ ನೀಡುವಂತೆ ತಿಳಿಸಿದ್ದೇವೆ. ಬೈಕ್ ತಯಾಕರಾದ ರಾಯಲ್ ಎನ್‌ಫೀಲ್ಡ್ ಸಂಸ್ಥೆಗೂ ದಾಖಲೆ ಒದಗಿಸುವಂತೆ ತಿಳಿಸಿದ್ದು, ಅವರು ಮಾಹಿತಿ ನೀಡಿದ ಬಳಿಕ ಸತ್ಯಾಸತ್ಯತೆ ತಿಳಿಯಲಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ವಸಂತ್ ಈಶ್ವರ್ ಚವ್ಹಾಣ್ ತಿಳಿಸಿದರು. 'ತಾಂತ್ರಿಕ ತೊಂದರೆಯಿಂದ ಈ ರೀತಿ ಆಗಿದೆಯೇ ಎಂಬುದನ್ನೂ ಪರಿಶೀಲಿಸಲಿದ್ದೇವೆ' ಎಂದು ಮಾಹಿತಿ ನೀಡಿದರು.

### ದಲಿತ ಮಹಿಳೆಗೆ ಕಿರುಕುಳ: ಮಂಡ್ಯ ಡಿಸಿ ಕಚೇರಿ ಎದುರು ಕರವೇ ಪ್ರತಿಭಟನೆ

• ಉದಯವಾಹಿನಿ, ಮಂಡ್ಯ

ಬಾಲಕಿಯರ ಸರ್ಕಾರಿ ಬಾಲ ಮಂದಿರದಲ್ಲಿ ದಲಿತ ಸಮುದಾಯದ ಗೃಹ ಪಾಲಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರೊಬ್ಬರಿಗೆ ಕಿರುಕುಳ ನೀಡಿ ಕೆಲಸ ಬಿಡುವಂತೆ ಮಾಡಿದ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಕ್ಷಣಾ ವೇದಿಕೆ, ಮಾನವ ಬಂಧುತ್ವ ವೇದಿಕೆ, ಆಟೋ ಚಾಲಕರ ಸಂಘದ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.


ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದ ಕಾರ್ಯಕರ್ತರು ಕಚೇರಿ ಸಹಾಯಕಿ ರೋಹಿಣಿ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ಗೃಹ ಪಾಲಕಿಯಾಗಿ ಕೆಲಸ ನಿರ್ವಹಿಸುತ್ತಿರುವ ರಾಧಾ ಅವರು, ಮೇಲಧಿಕಾರಿಯಿಂದ ಮಾನಸಿಕ ಕಿರುಕುಳಕ್ಕೆ ಒಳಗಾಗಿ ಒತ್ತಡದಲ್ಲಿ ಕೆಲಸ ನಿರ್ವಹಿಸಿದ್ದಾರೆ. ಜೊತೆಗೆ ಸ್ವತಃ ಕೆಲಸ ಬಿಟ್ಟು ಹೋಗುವಂತೆ ನಡೆದುಕೊಂಡಿರುವ ನಡೆ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅನಾರೋಗ್ಯದ ಸಂದರ್ಭದಲ್ಲಿ ರಾಧಾ ಅವರಿಗೆ ಬೆಳಿಗ್ಗೆ 9 ರಿಂದ ರಾತ್ರಿ 8 ಗಂಟೆವರೆಗೂ ಕೆಲಸ ನಿರ್ವಹಿಸುವಂತೆ ಕಿರುಕುಳ ನೀಡಿದ್ದಾರೆ. ದಲಿತ ಸಮುದಾಯದವರು ಎಂಬ ಕಾರಣಕ್ಕಾಗಿ ಇವರಿಗೆ ರಜೆ ನೀಡದೆ ಉಳಿದ ಶನಿವಾರ ಭಾನುವಾರ ದಿನಗಳಲ್ಲಿ ಸಮುದಾಯದ ಸಿಬ್ಬಂದಿಗೆ ರಜೆ ನೀಡಿ ಅವರ ಸಿ.ಎಲ್ ರಜೆ ತೆಗೆದುಕೊಂಡಾಗ ಸಂಬಳ ಕಡಿತಗೊಳಿಸಿದ್ದಾರೆ ಎಂದು ಆರೋಪಿಸಿದರು.

ಅಂತರಾಳದಿಂದ... EDITORIAL

# ಮಿತವ್ಯಯದ ಸಲಹೆ ಅಪಾಯಕರ ನೈತಿಕತೆ ಕೊರತೆಯ ಪ್ರಧಾನಿ ಕರೆ


ಮಿತವ್ಯಯಕ್ಕೆ ಸಂಬಂಧಿಸಿದಂತೆ ವಿವಿಧ ಕ್ರಮಗಳನ್ನು ಅನುಸರಿಸುವಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದ ಜನರಿಗೆ ಕರೆ ನೀಡಿದ್ದಾರೆ. ಈ ಮೂಲಕ, ಇಂಧನ ಮತ್ತು ವಿದೇಶಿ ವಿನಿಮಯಕ್ಕೆ ಸಂಬಂಧಿಸಿದ ತುರ್ತು ಪರಿಸ್ಥಿತಿಯನ್ನು ಪರೋಕ್ಷವಾಗಿ ಘೋಷಿಸಿದ್ದಾರೆ. ವಿದೇಶಿ ವಿನಿಮಯದ ಹೊರ ಹರಿವಿಗೆ ಕಾರಣವಾಗುವ ಸರಕುಗಳ ಆಮದನ್ನು ಕಡಿತಗೊಳಿಸುವ ಅವರ ಸಲಹೆಯ ಬಗ್ಗೆ ಸಾರ್ವತ್ರಿಕ ಸಮ್ಮತಿ ಇದೆ. ಆದರೆ, ಆ ಕರೆಯ ಹಿಂದಿನ ನೈತಿಕತೆ ಮತ್ತು ಸಮಯ ಪ್ರಶ್ನೆಗಳಿಗೆ ಕಾರಣವಾಗಿದೆ. ತೈಲದ ಬಿಕ್ಕಟ್ಟು ಈ ವಾರದ ಬೆಳವಣಿಗೆಯೇನಲ್ಲ. ಕಚ್ಚಾತೈಲ, ಎಲ್‌ಪಿಜಿ, ರಸಗೊಬ್ಬರ ಸೇರಿದಂತೆ ಪೆಟ್ರೋಲಿಯಂ ಉತ್ಪನ್ನಗಳ ಸರಬರಾಜಿನ ಮೇಲೆ ಪರಿಣಾಮ ಬೀರಿರುವ ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಎರಡು ತಿಂಗಳ ಹಿಂದೆಯೇ ಆರಂಭವಾಗಿದೆ. ಇದರ ಪರಿಣಾಮವನ್ನು ಸಂಘರ್ಷದ ಆರಂಭದ ದಿನದಿಂದಲೂ ದೇಶ ಅನುಭವಿಸುತ್ತಿದೆ.



ಆದರೆ, ವಾಣಿಜ್ಯ ಎಲ್‌ಪಿಜಿ ಹೊರತುಪಡಿಸಿ ಯಾವುದೇ ಪೆಟ್ರೋಲಿಯಂ ಉತ್ಪನ್ನದ ಬೆಲೆಯನ್ನು ಸರ್ಕಾರ ಹೆಚ್ಚು ಮಾಡಲಿಲ್ಲ. ಬೆಲೆ ಏರಿಸದಿರುವ ಸರ್ಕಾರದ ನಿಲುವಿಗೆ ಕೆಲವು ರಾಜ್ಯಗಳಲ್ಲಿ ನಡೆಯುತ್ತಿದ್ದ ವಿಧಾನಸಭಾ ಚುನಾವಣೆಗಳೇ ಕಾರಣವಾಗಿದ್ದುದು ಸ್ಪಷ್ಟ. ದೇಶದ ಹಿತಾಸಕ್ತಿಯ ಮೇಲೆ ರಾಜಕೀಯ ಮೇಲುಗೈ ಸಾಧಿಸಿದ್ದು ದುರದೃಷ್ಟಕರ. ಇತ್ತೀಚಿನ ವಾರಗಳಲ್ಲಿ ನರೇಂದ್ರ ಮೋದಿ ಅವರು ನೂರಾರು ವಾಹನಗಳೊಂದಿಗೆ ರೋಡ್ ಶೋಗಳನ್ನು ನಡೆಸಿದ್ದಾರೆ. ಮಿತವ್ಯಯದ ಕರೆ ನೀಡಿದ ನಂತರವೂ ಒಂದು ರೋಡ್ ಶೋ ನಡೆಸಿದ್ದಾರೆ. ಈ ಕಾರಣದಿಂದಲೂ ಅವರ ಕರೆ ಪ್ರಶ್ನಾರ್ಹ. ನೈತಿಕತೆಯ ಕೊರತೆ ಹಾಗೂ ವಿರೋಧಾಭಾಸದ ನಿಲುವನ್ನು ಅವರ ಕರೆ ಒಳಗೊಂಡಿದೆ. ಕಚೇರಿಯ ಕೆಲಸಗಳನ್ನು ಮನೆಯಿಂದಲೇ ನಿರ್ವಹಿಸುವಂತೆ (ವರ್ಕ್ ಫ್ರಂಹೋಂ), ಸಾರ್ವಜನಿಕ ವಾಹನಗಳನ್ನು ಬಳಸುವಂತೆ, ಅನಗತ್ಯವಾದ ವಿದೇಶಿ ಪ್ರವಾಸಗಳನ್ನು ಹಾಗೂ ಚಿನ್ನದ ಖರೀದಿಯನ್ನು ಮುಂದೂಡುವಂತೆ ಪ್ರಧಾನಿ ನಾಗರಿಕರನ್ನು ಕೇಳಿಕೊಂಡಿದ್ದಾರೆ. 'ನಾಗರಿಕ ಸತ್ಯಾಗ್ರಹ'ದ ರೂಪದಲ್ಲಿ ಈ ಕರೆ ಆಕರ್ಷಕವಾಗಿದೆ. ಆದರೆ, ರಾಜಕಾರಣ ಮತ್ತು ಆರ್ಥಿಕತೆಗೆ ಸಂಬಂಧಿಸಿದ ಅಪ್ರಿಯ ಪ್ರಶ್ನೆಗಳನ್ನು ಮಿತವ್ಯಯದ ಕರೆ ಮರೆಮಾಚುವಂತಿದೆ. ಇಂಧನದ ಲಭ್ಯತೆ ಹಾಗೂ ಆರ್ಥಿಕತೆಯ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ ಎಂದು ಇಲ್ಲಿಯವರೆಗೂ ಕೇಂದ್ರ ಸರ್ಕಾರ ಭರವಸೆ ನೀಡಿಕೊಂಡೇ ಬಂದಿದೆ. ಶೇ 70ರಷ್ಟು ಕಚ್ಚಾತೈಲದ ಸರಬರಾಜು ಹೊರ್ಮುಜ್ ಜಲಸಂಧಿಯ ಮೂಲಕ ನಡೆಯುತ್ತಿಲ್ಲ ಮತ್ತು ಇಂಧನ ಪೂರೈಕೆ ಸುರಕ್ಷಿತವಾಗಿದೆ ಎಂದು ಸರ್ಕಾರ ಹೇಳಿಕೊಂಡು ಬಂದಿದೆ. ಈಗ ಇದ್ದಕ್ಕಿದ್ದಂತೆ ಪ್ರಧಾನಿ ಅವರು ನೀಡಿರುವ ಕರೆ, ಸರ್ಕಾರ ನಿರೀಕ್ಷಿಸದ ಅಥವಾ ಮುನ್ಸೂಚನೆ ನೀಡಲು ವಿಫಲವಾದ ಬಿಕ್ಕಟ್ಟಿಗೆ ಜನರನ್ನು ಸಿದ್ಧಗೊಳಿಸುವ ಪ್ರಯತ್ನದಂತೆ ಕಾಣಿಸುತ್ತಿದೆ. ತಮ್ಮ ಕರೆಗೆ ಬೆಂಬಲದ ರೂಪದಲ್ಲಿ ಸಾಂಕ್ರಾಮಿಕ ಪಿಡುಗಿನ ಪರಿಸ್ಥಿತಿಯನ್ನು ಅವರು ಉಲ್ಲೇಖಿಸಿದ್ದಾರೆ.

ಪ್ರಧಾನಿ ನೀಡಿರುವ ಕೆಲವು ಸಲಹೆಗಳು ಜನಜೀವನ ಮತ್ತು ದೇಶದ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರಲಿವೆ. ಈ ಬಾರಿಯ ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಇರುವುದಿಲ್ಲ ಎಂದು ಹವಾಮಾನ ಇಲಾಖೆ ಅಂದಾಜು ಮಾಡಿದೆ. ಮುಂಗಾರಿನ ಕೊರತೆಯ ಜೊತೆಗೆ, ಪ್ರಧಾನಿ ಸಲಹೆಯಂತೆ ರಸಗೊಬ್ಬರ ಬಳಕೆಯನ್ನೂ ಕಡಿಮೆ ಮಾಡಿದರೆ ಕೃಷಿ ಇಳುವರಿ ಗಂಭೀರ ಪ್ರಮಾಣದಲ್ಲಿ ಕುಸಿಯುತ್ತದೆ. ಮನೆಯಿಂದಲೇ ಕೆಲಸ ಮಾಡುವ ಪದ್ಧತಿ ಈಗಾಗಲೇ ಅಸ್ತಿತ್ವದಲ್ಲಿದೆ; ಬಹುಶಃ ಅದನ್ನು ಮತ್ತಷ್ಟು ವಿಸ್ತರಿಸುವುದುಸಾಧ್ಯವಾಗದಿರಬಹುದು. ರೂಪಾಯಿಯಂತೂ ಯುದ್ಧಕ್ಕೆ ಮೊದಲೇ ದುರ್ಬಲಗೊಳ್ಳಲು ಆರಂಭಿಸಿತ್ತು. ಆ ಕುಸಿತಕ್ಕೆ ಬೇರೆ ಕಾರಣಗಳೂ ಇದ್ದವು. ಸರಕು ಮತ್ತು ಸೇವೆಯ ಬಳಕೆ ಹೆಚ್ಚಾಗುವುದಕ್ಕೂ ಆರ್ಥಿಕತೆ ಗಟ್ಟಿಯಾಗಿರುವುದಕ್ಕೂ ಸಂಬಂಧ ಇರುವ ಸಮಯದಲ್ಲಿ, ಮಿತವ್ಯಯದ ಕರೆಯನ್ನು ಪ್ರಧಾನಿ ಜನರಿಗೆ ನೀಡಿದ್ದಾರೆ. ಬಳಕೆಯಲ್ಲಿನ ಇಳಿಕೆಯು ವ್ಯತಿರಿಕ್ತ ಪರಿಣಾಮಗಳನ್ನು ಬೀರಬಹುದು ಹಾಗೂ ನಕಾರಾತ್ಮಕ ಪರಿಣಾಮಗಳನ್ನು ಉಂಟುಮಾಡಬಹುದು. ಆರ್ಥಿಕತೆಯಲ್ಲಿ ಸಮಸ್ಯೆ ಇದೆ ಎನ್ನುವುದನ್ನು ನಿರಾಕರಿಸಿ, ಸಮಸ್ಯೆ ಬೆಳೆಯುವುದಕ್ಕೆ ಅನುವು ಮಾಡಿಕೊಟ್ಟು, ಈಗ ಸಮಸ್ಯೆಯಿದೆ ಎಂದು ಸರ್ಕಾರ ಹೇಳುತ್ತಿದೆ ಹಾಗೂ ಅದನ್ನು ಪರಿಹರಿಸಲು ಜನರಿಗೆ ಕರೆ ನೀಡುತ್ತಿದೆ. ನೈತಿಕತೆ ಒತ್ತಟ್ಟಿಗಿರಲಿ, ಇದು ಜವಾಬ್ದಾರಿಯುತ ನಡವಳಿಕೆಯೂ ಅಲ್ಲ.

# ರಾಮಾಯಣ



**ಕೊಳಕುಬಟ್ಟೆಯ ನಡುವೆ ಹೊಳೆಯುವ ಮಣಿಯ ಹಾಗಿದ್ದ ಸೀತೆಯನ್ನು ಅಶೋಕವನದಲ್ಲಿ ಕಂಡದು**

• ಹಿಂದಿನ ಸಂಚಿಕೆಯಿಂದ **ಸುಂದರಕಾಂಡ**

ನನ್ನ ಮೇಲಿನ ರಘೂತ್ತಮನ ಒಲವಿನ ಅಗಾಧತೆ ಎಂತಹುದೋ! ಸಮುದ್ರವನ್ನು ಹಾರಿ ಲಂಕಾನಗರಿಯನ್ನು ಸುತ್ತಿದ ಕಷ್ಟಕ್ಕೆ ಅಮು ರಿತಫಲವೇ ದೊರಕಿದಂತಾಯಿತು ಸಂಜೆ ಹನುಮನು ಹಿಗ್ಗಿದ. ಜೇತಹೋವನದ ಔಷ ಹರಿಯೋ. ಸೌಭಾಗ್ಯಕ್ಕೆ ಪಾವನಕರವಾದ ಸಂಜೀವಿನಿಯೋ. ಸಿರಿಯನ್ನೀವ ಪರುಷದ ಗಣಿಯೋ, ಸಕಲ ಲೋಕಾನಂದವೀಯುವ ಚಿಂತಾಮಣಿಯೋ, ದೇವ ಶ್ರೀರಾಮಪುರದರಸನ ಸಂತಸದ ಜೀವನಾಡಿಯೋ ಎಂಬ ತಾಯಿಯನ್ನು ಕಂಡೆ ಎಂಬ ಸಂತೋಷಭಾವದಿಂದ ಪಾವಮಾನಿಯು ಹಿಗ್ಗಿದ.

**ಸೀತೆಯನ್ನು ಒಲಿಸಿಕೊಳ್ಳಲು ರಾವಣನು ಅನುನಯದ ನುಡಿಗಳನ್ನಾಡಿದುದು**

ಭವಾನಿಯೇ ಕೇಳು, ಪ್ರತಿಹತಾಶೆಯೋ, ಭಕ್ತಿಯಿಲ್ಲದ ಮನಸ್ಸೋ, ಕುಟಿಲ ಬುದ್ಧಿಯೋ, ಕಲುಷವಾದ ಸಿದ್ಧಿಯೋ, ಸತತ ಅಪವಾದಕ್ಕೊಳಗಾದ ಕೀರ್ತಿಯೋ, ಪಾಷಂಡತೆಯನ್ನೊಳಗೊಂಡ ಉಪನಿಷತ್ತಿನ ಅರ್ಥವೋ, ಗಾಢ ನಿದ್ದೆಯಲ್ಲಿ ಸಿಕ್ಕಿರುವ ಚಿದ್ವಸ್ತುವಿನ ಗತಿಯೋ ಎನ್ನುವಂತೆ ಧರಣಿಜಾತೆಯು ಕೊಳಕಾದ ಬಟ್ಟೆಯ ಮಧ್ಯದಲ್ಲಿ ದೇಹವನ್ನು ಮರೆಮಾಚಿಕೊಂಡು ಅಶೋಕದ ಮರೆಯಲ್ಲಿ ಕಾಣಿಸಿದಳು. ವೇದವಿಹಿತವಲ್ಲದ ವಿದ್ಯೆಯಂತೆ, ಸಂಸ್ಕಾರವಿಲ್ಲದ ಮಾತಿನ ಹಾಗೆ, ಮೋಡದ ಮರೆಯಲ್ಲಿ ಕಂಡೂ ಕಾಣಿಸದಂತಿರುವ ಚಂದ್ರಬಿಂಬದಂತೆ, ಮಲಿನ ವಸ್ತ್ರವನ್ನು ಸುತ್ತಿಕೊಂಡು ದೇಹವನ್ನು ಮಲಿನಗೊಳಿಸಿಕೊಂಡ ಸೀತೆಯ ಚರಣಗಳನ್ನು ಕಂಡು ಮಾರುತಿಯು ಆಕೆಗೆ ಮನಸಿನಲ್ಲಿಯೇ ವಂದಿಸಿದ. ಶ್ರೀರಾಮನ ಕೀರ್ತನೆ ಮಾಡುವ ರೀತಿಯಲ್ಲಿ ಸೀತೆಯ ಸಲ್ಲಕ್ಷಣಗಳು ಒಂದೊಂದಾಗಿ ಕಾಣಬರುತ್ತಿರಲು, ಆಕೆಯೇ ಜಾನಕಿ, ಇದರಲ್ಲಿ ಸಂದೇಹವೇ ಇಲ್ಲ ಎಂದು ನಿಶ್ಚೈಸಿಕೊಂಡು ನಡೆಯುವುದನ್ನೆಲ್ಲ ನೋಡುತ್ತ ವನದಲ್ಲಿ ಒಂದು ಕಡೆ ಕುಳಿತುಕೊಂಡ. ಜಗದೇಕವಿರನಾದ ರಘುವೀರನೇ ರಾಜ, ಎಲ್ಲದಕ್ಕೂ ಸಿದ್ಧನಾದ ಲಕ್ಷ್ಮಣನೇ ಸೇವಕ, ರವಿಕುಲೋದ್ಭವನಾದ ದಶರಥನ ಅರಮನೆಯೇ ವಾಸಸ್ಥಳ, ಇವುಗಳಲ್ಲಿ ಸುಖವನ್ನು ಸೂರೆಗೊಳ್ಳುತ್ತ ಇರಬೇಕಾದ ಈ ಸುಕುಮಾರಿಯು ರಕ್ಕಸಿಯರ ಗುಂಪಿನಲ್ಲಿ ಸಿಲುಕಿಕೊಂಡು ಸಂಕಟಪಡುವಂತೆ ಮಾಡಿರುವ ವಿಧಿಯ ಬಲುಹು ಅದೆಂತಹುದು! ರುಚಿಕರವಾದ ಆಹಾರವನ್ನು ಬಿಟ್ಟು ಉಪವಾಸಗೈಯುತ್ತ ಪಟ್ಟೆಪೀತಾಂಬರಗಳ ಬದಲು ಕೊಳೆಯ ಬಟ್ಟೆಗಳನ್ನುಟ್ಟು ಹಂಸತೂಲಿಕಾತಲ್ಪದಲ್ಲಿ ಮಲಗಿರುವ ಬದಲು ನೆಲದ ಮೇಲೆ ಮರದ ನೆರಳಿನಲ್ಲಿ ಈ ಪರಿಯಲ್ಲಿ ಕುಳಿತಿರುವ ಅನುಭವವು ಎಧಿಕೃತಂ ಬಲಂ' ಎಂದು ಪವನಸುತನು ಅವನಿಸಂಭವೆಯನ್ನು ನೋಡಿ ಮರುಗಿದ.

ಈಕೆ ಜಾನಕಿಯೇ ಹೌದು, ಇನ್ನು ಸುಮ್ಮನೆ ಕುಳಿತಿರುವುದು ಸರಿಯಲ್ಲ ಎಂದು ಕೊಳ್ಳುವಷ್ಟರಲ್ಲಿ ಆಕಾಶದಲ್ಲಿ ಚಂದ್ರನು ಹನುಮನಿಗೆ ಸಹಾಯ ಮಾಡುವಂತೆ ಬೆಳ್ಳಿಂಗಳನ್ನು ಸುರಿಸಲು ಮಂಗಳಮೂರ್ತಿಯನ್ನು ನೋಡುತ್ತ ಹರ್ಷಗೊಂಡ. ಪಾಚಿಯು ತಾವರೆಗಳ ಕಾಂತಿಯನ್ನು ಹೆಚ್ಚಿಸುವಂತೆ, ಚಂದ್ರಮನು ಅತಿಶಯವಾಗಿ ರಾರಾಜಿಸುವಂತೆ ಮಲಿನಾಂಬರದ ಜೀವರತ್ನದ ಹಾಗೆ ದೇವಿ ಕಂಗೊಳಿಸಲು, ಆಕೆಯ ಸಹಜ ಸೌಂದರ್ಯಕ್ಕೆ ಮಾರುತಿಯು ಬೆರಗಾದ. ಶೃಂಗಾರರಸದ ಸರ್ವಸ್ವವೋ, ಮೂರು ಲೋಕಗಳ ಹೆಣ್ಣುಗಳ ಚೆಲುವಿನ ನೆಲೆಯೋ, ಮಂಗಲಪ್ರದವಾದ ದೇವತಾಸಂಪ್ರದಾಯವೋ, ಮನ್ಮಥನ ಆರಾಧ್ಯಸಿರಿಯೋ, ಚಿನ್ನದ ಕಳಶವೋ, ಬ್ರಹ್ಮನ ಸೃಷ್ಟಿಕಾರ್ಯದ ಸದನವೋ ಎನ್ನುವಂತೆ ಬೆಡಗನ್ನು ಪಡೆದ ಭೂಜಾತೆಯನ್ನು ಕಂಡ ಪವನಸುತನು ಕುಳಿತಲ್ಲಿಯೇ ಕೈಮುಗಿದ. ಈ ಮಾನಿನೀಮಣಿಯನ್ನು ಕರೆದೊಯ್ದರೆ ಸಾಮ್ರಾಜ್ಯವೇ ಕೈಗೂಡಿತೆಂಬಂತೆ ರಾಮನು ಮನ್ನಿಸುವುದರಲ್ಲಿ ಸಂಶಯವಿಲ್ಲ, ರಾಮಣೀಯಕ ಮೂರ್ತಿಯು ದೊರೆತ ಬಳಿಕ ಸಿರಿಯ ಸೀಮೆಯನ್ನೇ ಗಳಿಸಿದಂತೆ ಎಂದು ಆನಂದದಿಂದ ನೋಡಿದ. ಬಾಲಚಂದ್ರನನ್ನು ಆವರಿಸಿರುವ ಕಾರ್ಮುಗಿಲಿನಂತೆ ಸೀತೆಯನ್ನು ಸುತ್ತುವರಿದು, ಜ್ವಾಲಾಮುಖಿಗಳಂತೆ ಅತಿ ಭೀಕರ ಮುಖಗಳ ರಕ್ಕಸಿಯರು ಮೇಲಕ್ಕಡರಿದ ಮೂಗು, ಕರಾಳ ದಾಡೆಗಳಿಂದ ಕೂಡಿ ಯಮದೂತರ ಮಗಳಂದಿರೆಂಬಂತೆ ಕಾಣಿಸಿದರು.

ಮುಂದುವರಿಯುವುದು...

# ದೈವೀಕ ಸಾಕ್ಷಾತ್ಕಾರದ ಗೌರಿ ಕೃಷ್ಣಳ ಸಾತ್ವಿಕಾಭಿನಯ



ಕಲಾ ಸಾಹಿತ್ಯ
ವೈ.ಕೆ. ಸಂಧ್ಯಾಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

ಹೆಸರಿಗೆ ಅನ್ವರ್ಥಕವಾದ ಮುದ್ದಾದ ರೂಪ- ಮಾಟವಾದ ಕಾಯ ಹೊಂದಿದ್ದ ಮನಮೋಹಕ ಕಲಾವಿದೆ ಗೌರೀ ಕೃಷ್ಣ, ವೇದಿಕೆಯ ಮೇಲೆ ಧವಳವಸ್ತ್ರಧಾರಿಯಾಗಿ ಸಾಕ್ಷಾತ್ ಸರಸ್ವತಿಯಾಗಿ ನರ್ತಿಸುತ್ತಿದ್ದರೆ ನೋಡುಗರಿಗೆ ಮುದ ಉಕ್ಕುವ ರಮ್ಯಾನುಭವ. ಇತ್ತೀಚೆಗೆ ನೃತ್ಯಾಚಾರ್ಯ ವಿನ್ಸೆಂಟ್ ಪಾಲರ ಶಿಷ್ಯೆ ರಮಣ ಮಹರ್ಷಿ ಹೆರಿಟೇಜ್ ಆಡಿಟೋರಿಯಂನಲ್ಲಿ ನಡೆದ ತನ್ನ ವಿದ್ಯುಕ್ತ 'ರಂಗಾರ್ಪಣೆ' ಸಂದರ್ಭದಲ್ಲಿ ಸಾಕಾರಗೊಳಿಸಿದಳು.

ಶುಭಾರಂಭದ ' ಸರಸ್ವತಿ ಪುಷ್ಪಾಂಜಲಿ' ಮತ್ತು 'ವಕ್ರತುಂಡ ಮಹಾಕಾಯನಾದ ಗಣೇಶನ ಶ್ಲೋಕ ಹಾಗೂ ಸಾಂಪ್ರದಾಯಕ ಅಲರಿಪು ಅವಳ ಅಂಗಶುದ್ಧ ನರ್ತನದ ಹರಿತ ನೃತ್ತಗಳ ಸೊಗಸನ್ನು ಎತ್ತಿ ಹಿಡಿದವು ಮತ್ತು ಅನುಪಮ ಭಾವ-ಭಂಗಿಗಳಿಗೆ ಕನ್ನಡಿ ಹಿಡಿಯಿತು. ಹಸನ್ಮುಖದಲ್ಲಿ ರಂಗವನ್ನು ಪ್ರವೇಶಿಸಿದ ಕಲಾವಿದೆಯ ನವಿರಾದ ಅಭಿನಯ, ಹಾಗೂ ನಿಖರ ಅಂಗಿಕಾಭಿನಯ ಕೃತಿಗಳಿಗೆ ಮೆರಗು ತಂದು ನೋಡುಗರನ್ನು ಸೆರೆಹಿಡಿಯಿತು. ನಂತರ 'ಜತಿಸ್ವರ' ಮನಮೋಹಕ ನೃತ್ತವಲ್ಲರಿಯಿಂದ ರಂಜಿಸಿತು. ಇದು ಶುದ್ಧ ನೃತ್ತಬಂಧ ಎಂದರೂ ಅಭಿನಯ ಕುಶಲೆಯ ಅಂತಃಸ್ಫುರಣದ ಸತ್ವ ಅವಳ ಪ್ರತಿ ಹೆಜ್ಜೆ-ಗೆಜ್ಜೆಯಲ್ಲೂ ಸ್ಫುರಿಸಿತು.

ಶ್ರೀರಮಣ ಮಹರ್ಷಿಗಳು ತಮಿಳಿನಲ್ಲಿ ರಚಿಸಿದ ಈ 'ವರ್ಣ'ವನ್ನು ಡಾ. ಶಾರದಾ ನಟರಾಜನ್ ಕನ್ನಡಕ್ಕೆ ಅನುವಾದಿಸಿದ್ದರು. ಅಚಲನೇ ಆದರೂ ಚಿತ್ಸಭೆಯಲ್ಲಿ ಅಚಲ ಶಿವನು ಶಕ್ತಿಯ ಎದುರು ನರ್ತಿಸುವ, ಆ ಅಗಣಿತ ಮಹಿಮೆಯೊಂದಿಗೆ ಶಿವನೇ ಭವ್ಯ ಅರುಣಾಚಲನಾಗಿ ನಿಲ್ಲುವ, ಅನಂತರ ಅದ್ಭುತವಾಗಿ ನರ್ತಿಸುವ ಬೆರಗಿನ ಸಂದರ್ಭವೊಂದು ಪರಿಣಾಮಕಾರಿಯಾಗಿ ಅನಾವರಣವಾಯಿತು. ತಾಯಿ ಪಾರ್ವತಿಯ ದೈವೀಕ ಸನ್ನಿಧಿಯಲ್ಲಿ ಅನಂತರ ನಟರಾಜನ ದಿವ್ಯ ನರ್ತನವು ಸಂಚಾರಿ ಭಾಗದಲ್ಲಿ ಹೃದಯಸ್ಪರ್ಶಿಯಾಗಿ ಅಭಿವ್ಯಕ್ತಿಸಿ, ಅರುಣಾಚಲದ ಮೇರು ವ್ಯಕ್ತಿತ್ವವನ್ನು ತನ್ನ ಸಮ್ಮೋಹಕ ಭಾವ- ಭಂಗಿಗಳಿಂದ ಸಾಕಾರಗೊಳಿಸಿದಳು ಕಲಾವಿದೆ. ಸಂಚಾರಿಯಲ್ಲಿ ಮೂಡಿಬಂದ ಪ್ರಸಂಗ ನಿಜಕ್ಕೂ ರೋಮಾಂಚಿತವಾಗಿತ್ತು. ನಡುನಡುವೆ ಝೇಂಕರಿಸಿದ ಕಲಾವಿದೆಯ ನೃತ್ಯವೈವಿಧ್ಯ ಮನತಣಿಸಿದರೆ, ಗುರು ವಿನ್ಸೆಂಟ್ ನಟುವಾಂಗದ ಭೋರ್ಗರೆತ ಕಲಾವಿದೆಯ ಕಲಾನೈಪುಣ್ಯಕ್ಕೆ ಮತ್ತಷ್ಟು ಪ್ರೇರಣೆ ನೀಡಿತು. ಮನಸ್ಪರ್ಶೀ 'ಪದಂ' ಕೃತಿಯನ್ನು ನರ್ತಿಸಿದಳು ಗೌರೀ. ಎಲ್ಲವನ್ನೂ ಸೃಷ್ಟಿಸಿದ ಜಗತ್ಕಾರಣನಾದ, ಪರಬ್ರಹ್ಮನು ಮಗುವಿನ ರೂಪದಲ್ಲಿ ಬಂದು ಯಶೋದೆಯನ್ನು ಓ! ನನ್ನ ತಾಯಿ! ಎಂದು ಕರೆಯುವುದು ಸಾಮಾನ್ಯವೇ? ಇಂಥ ಪುಣ್ಯವಂತೆ ಯಶೋದೆ ಮಾಡಿದ ತಪಸ್ಸಾದರೂ ಏನು? ಎನ್ನ ತವಂ ಸೆಯ್ದಾನ್ಸೈ ಎಂದು ಕವಿ ಪಾಪನಾಶಂ ಶಿವನ್ ಬೆರಗಾಗುತ್ತಾರೆ. ಈ ಭಾವಸ್ಪರ್ಶವನ್ನು ಹೃದಯಂಗಮವಾಗಿ ಅಭಿನಯಿಸಿ ಕಲಾವಿದೆ ' ಸೈ ' ಎನಿಸಿಕೊಂಡಳು. ಅಂತ್ಯದಲ್ಲಿ ಸೊಲ್ಲುಕಟ್ಟುಗಳಿಂದ ಕೂಡಿದ 'ತಿಲ್ಲಾನ'ವನ್ನು ಗೌರೀ ಉತ್ಸಾಹಭರಿತವಾಗಿ ಪ್ರದರ್ಶಿಸಿ ಗುರುವಿನೊಂದಿಗೆ ನರ್ತಿಸಿ, ಅವರ ಸಾಂಗತ್ಯದ ಸ್ಫೂರ್ತಿ ಪಡೆದು ಎಲ್ಲರ ಕಣ್ಮನ ತಣಿಸಿದಳು.




# ಪೈಲ್ವಾನರ ತೋಳ್ಬಲಕ್ಕೆ ಒಣ ಹಣ್ಣಿನ ಬಲ



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ಹಳ್ಳಿಯ ಗರಡಿ ಮನೆಗಳಲ್ಲಿ ಮಣ್ಣು ಮುಸುಕಿದ ಮೈಕಟ್ಟು, ಬಿಗಿದಿರುವ ಸ್ನಾಯುಗಳು ಮತ್ತು ಆನೆಯ ನಡಿಗೆಯಂತಹ ಗತ್ತು ಕುಸ್ತಿ ಮಲ್ಲರ ಗುರುತು. ಕೆಮ್ಮಣ್ಣಿನ ಅಖಾಡದಲ್ಲಿ ಮಲ್ಲರು ಪ್ರದರ್ಶಿಸುವ ಈ ಅಪ್ರತಿಮ ತೋಳ್ಬಲದ ಹಿಂದೆ ಕೇವಲ ಕಠಿಣ ಶ್ರಮವಷ್ಟೇ ಇಲ್ಲ; ಅದರ ಹಿಂದೆ ಪ್ರಕೃತಿ ನೀಡಿದ ಒಣ ಹಣ್ಣುಗಳ ಪೌಷ್ಟಿಕ ರಹಸ್ಯವೂ ಅಡಗಿದೆ. ಕಬ್ಬಿಣವನ್ನು ಕಾಯಿಸಿ ಹದಗೊಳಿಸಿದಂತೆ ದೇಹವನ್ನು ದಂಡಿಸುವ ಪೈಲ್ವಾನರಿಗೆ, ಇವು ಕಳೆದುಹೋದ ಶಕ್ತಿಯನ್ನು ಮರುತುಂಬುವ ನೈಸರ್ಗಿಕ ಸಂಜೀವಿನಿಯಾಗಿವೆ. ತಾಸುಗಟ್ಟಲೆ ನಡೆಯುವ ಕುಸ್ತಿಯ ತಾಲೀಮು ಶರೀರದ ಶಕ್ತಿಯನ್ನು ಶೀಘ್ರವಾಗಿ ಬರಿದು ಮಾಡುತ್ತದೆ.

ಇಂತಹ ಸಮಯದಲ್ಲಿ ಖರ್ಜೂರ, ಒಣದ್ರಾಕ್ಷಿ ಮತ್ತು ಅಂಜೂರದಂತಹ ಹಣ್ಣುಗಳು ಸಿದ್ಧೌಷಧವಾಗಿ ಕೆಲಸ ಮಾಡುತ್ತವೆ. ಇವುಗಳಲ್ಲಿರುವ ನೈಸರ್ಗಿಕ ಶರ್ಕರಗಳು ರಕ್ತಕ್ಕೆ ತಕ್ಷಣವೇ ಸೇರಿ ಸ್ನಾಯುಗಳಿಗೆ ಗ್ಲೂಕೋಸ್ ಒದಗಿಸುತ್ತವೆ. ಇದು ದೈಹಿಕ ದಣಿವನ್ನಷ್ಟೇ ನೀಗಿಸದೆ, ಮಲ್ಲನಿಗೆ ಕುಸ್ತಿನ ಪಟ್ಟುಗಳನ್ನು ಹೂಡಲು ಬೇಕಾದ ಮಾನಸಿಕ ಏಕಾಗ್ರತೆಯನ್ನೂ ನೀಡುತ್ತದೆ. ಬಾದಾಮಿ ಮತ್ತು ಗೋಡಂಬಿಗಳು ಪ್ರೋಟೀನ್ ಹಾಗೂ ಆರೋಗ್ಯಕರ ಕೊಬ್ಬಿನಾಮ್ಲಗಳ ಗಣಿ. ಕಠಿಣ ತಾಲೀಮಿನಿಂದ ಸ್ನಾಯುಗಳಲ್ಲಿ ಉಂಟಾಗುವ ಸವಕಳಿಗಳನ್ನು ಸರಿಪಡಿಸಲು ಇವು ನೆರವಾಗುತ್ತವೆ.



ಉದಯವಾಹಿನಿ ಚಿತ್ರ

ಇವುಗಳಲ್ಲಿರುವ ಮ್ಯಾಗ್ನೀಸಿಯಮ್ ಮತ್ತು ಪೊಟ್ಯಾಸಿಯಮ್ ಅಂಶಗಳು ದೇಹಕ್ಕೆ ಸ್ಥಿತಿಸ್ಥಾಪಕತ್ವ ನೀಡಿ, ಸ್ನಾಯು ಸೆಳೆತದಂತಹ ಸಮಸ್ಯೆಗಳಿಂದ ರಕ್ಷಿಸುತ್ತವೆ. ಇನ್ನು ಒಣ ಹಣ್ಣುಗಳಲ್ಲಿ ಹೇರಳವಾಗಿರುವ ಕ್ಯಾಲ್ಸಿಯಂ ಮತ್ತು ವಿಟಮಿನ್ ಕೆ ಅಂಶಗಳು ಅಸ್ಥಿಪಂಜರವನ್ನು ವಜ್ರದಂತೆ ಸದೃಢಗೊಳಿಸಿ, ಮಲ್ಲನಿಗೆ ಅಖಾಡದಲ್ಲಿ ಅಚಲವಾದ ಸ್ಥಿರತೆಯನ್ನು ಒದಗಿಸುತ್ತವೆ. ಒಣ ಹಣ್ಣುಗಳನ್ನು ಒಂದು ನಿರ್ದಿಷ್ಟ ಲಯದಲ್ಲಿ ಸೇವಿಸುವುದು ಪೈಲ್ವಾನರ ಪದ್ಧತಿ.

ಸಾಮಾನ್ಯವಾಗಿ ರಾತ್ರಿ ನೀರಿನಲ್ಲಿ ನೆನೆಸಿಟ್ಟು ಬೆಳಿಗ್ಗೆ ಸೇವಿಸುವುದರಿಂದ ಅವುಗಳ ಜೀರ್ಣಶಕ್ತಿ ಹೆಚ್ಚುತ್ತದೆ ಮತ್ತು ದೇಹಕ್ಕೆ ತಂಪು ನೀಡುತ್ತದೆ. ಬೆಳಗಿನ ತಾಲೀಮು ಮುಗಿದ ನಂತರ 4-5 ಬಾದಾಮಿ,2-3 ಖರ್ಜೂರ, ಅಲ್ಪ ಪ್ರಮಾಣದ ಒಣದ್ರಾಕ್ಷಿಗಳನ್ನು ಸೇವಿಸುವುದು ಸೂಕ್ತ.

**ಎಚ್ಚರಿಕೆ:** ಇವುಗಳಲ್ಲಿ ಕ್ಯಾಲೊರಿ ಹೆಚ್ಚಿರುವುದರಿಂದ ಮಿತಿಮೀರಿದ ಸೇವನೆ ತೂಕ ಹೆಚ್ಚಿಸಬಹುದು. ಮಧುಮೇಹ ಅಥವಾ ಅಲರ್ಜಿ ಇರುವವರು ವೈದ್ಯರ ಸಲಹೆ ಪಡೆಯಬೇಕು. ಶಿಲೀಂಧ್ರ ಬಾಧಿತ, ಕೃತಕ ಬಣ್ಣ ಬೆರೆಸಿದ ಹಣ್ಣುಗಳನ್ನು ವರ್ಜಿಸಿ, ನೈಸರ್ಗಿಕವಾಗಿ ಒಣಗಿಸಿದ ಹಣ್ಣುಗಳನ್ನೇ ಆಯ್ದುಕೊಳ್ಳಬೇಕು.

ನಮ್ಮ ಪೂರ್ವಜರು ರೂಪಿಸಿದ ಈ ಆಹಾರ ಪದ್ಧತಿಯು ಆಧುನಿಕ ಕ್ರೀಡಾ ವಿಜ್ಞಾನಕ್ಕೂ ಸವಾಲೆಸೆಯುವಂತಿದೆ. ಇಂದಿನ ಯುವಕರು ಕೃತಕ ಶಕ್ತಿವರ್ಧಕಗಳ ಮೊರೆ ಹೋಗದೆ ಪ್ರಕೃತಿ ನೀಡಿರುವ ಈ ರತ್ನಗಳನ್ನು ಬಳಸಿಕೊಂಡರೆ, ಪೈಲ್ವಾನರಂತಹ ದೃಢಕಾಯ ಪಡೆದು ನಾಡಿನ ಹೆಮ್ಮೆಯ ಕ್ರೀಡಾ ಸಂಸ್ಕೃತಿಯನ್ನು ಎತ್ತಿ ಹಿಡಿಯಬಹುದು.


# ಸುಲಭವಾಗಿ ಮಾಡಿ ಮ್ಯಾಂಗೋ ಐಸ್ ಕ್ರೀಂ..

ಐಸ್ ಕ್ರೀಂ ಅಂದರೆ ಯಾರಿಗೆ ತಾನೇ ಇಷ್ಟವಿಲ್ಲ ಹೇಳಿ. ಅದರಲ್ಲೂ ಸೀಸನ್‌ನಲ್ಲಿ ಬರುವ ಮ್ಯಾಂಗೋ ಐಸ್ ಕ್ರೀಂ ಅಂತೂ ಎಲ್ಲರಿಗೂ ಅಚ್ಚುಮೆಚ್ಚು. ಹೀಗಾಗಿ ಮ್ಯಾಂಗೋ ಐಸ್ ಕ್ರೀಂ ಮಾಡುವ ಸರಳ ಹಾಗೂ ಸುಲಭ ವಿಧಾನ ಇಲ್ಲಿದೆ.

**ಬೇಕಾಗುವ ಸಾಮಾಗ್ರಿಗಳು:**. ಮಾವಿನ ಹಣ್ಣು, ಸಕ್ಕರೆ ಚಮಚ, ಫ್ರೆಶ್ ಕ್ರೀಮ್

## ಮಾಡುವ ವಿಧಾನ

- ಒಂದು ಮಿಕ್ಸರ್ ಜಾರ್ ಗೆ ಸಿಪ್ಪೆ ತೆಗೆದ ಮಾವಿನಹಣ್ಣಿನ ಪಲ್ಪ್ ಹಾಗೂ ಸಕ್ಕರೆ ಸೇರಿಸಿ ರುಬ್ಬಿಕೊಳ್ಳಿ.
- ಈಗ ಒಂದು ಮಿಕ್ಸಿಂಗ್ ಬೌಲ್ ಗೆ ಫ್ರಿಜ್ಡ್ ನಲ್ಲಿಟ್ಟಿದ್ದ ಫ್ರೆಶ್ ಕ್ರೀಮ್ ಅನ್ನು ಹಾಕಿ ಚೆನ್ನಾಗಿ ಬ್ಲೆಂಡ್ ಮಾಡಿ.
- ಬ್ಲೆಂಡ್ ಮಾಡಿದ ಫ್ರೆಶ್ ಕ್ರೀಮ್ ಗೆ ರುಬ್ಬಿದ ಮಿಶ್ರಣವನ್ನು ಸೇರಿಸಿ ಚೆನ್ನಾಗಿ ಬ್ಲೆಂಡ್ ಮಾಡಿ.
- ಈಗ ಒಂದು ಫ್ರೀಜರ್ ಬೌಲ್ ಗೆ ಮಿಶ್ರಣವನ್ನು ಹಾಕಿ 6-7 ಗಂಟೆ ಕಾಲ ಫ್ರೀಜ್ ಮಾಡಿ.
- ಬಳಿಕ ಸರ್ವ್ ಮಾಡಿ. ಎಂಜಾಯ್ ಮಾಡಿ
- ಜೊತೆಗೆ ಐಸ್ ಕ್ರೀಂ ಗೆ ಟುಟಿ, ಫ್ರೂಟಿ, ಸಣ್ಣಗೆ ಕಟ್ ಮಾಡಿದ ಡ್ರೈ ಫ್ರೂಟ್ಸ್, ಕ್ಯಾರಮಲ್ ಪೀಸಸ್ ಸೇರಿಸಬಹುದು.



# ಮಾನಿನಿಗಾಗಿ ಒಂದು ದಿನ

ಮಾನಿನಿ ಎಂದರೇ ಹೆಣ್ಣು ಆಕೆಗೆ ಒಂದು ದಿನದಲ್ಲಿ ಕೃತಜ್ಞತೆ ಹೇಳಲು ಸಾಧ್ಯವಿಲ್ಲ ಮಾನಿನಿಯ ಹೆಸರಲ್ಲೇ ಇದೆ ಆಕೆಯ ತ್ಯಾಗ, ಸಂಬಂಧಗಳ ಉಳಿವಿಗಾಗಿ ನಾ ಆಕೆಯ ಕಾರ್ಯಪ್ರವೃತ್ತಿಯ ಪಟ್ಟಿಗಳು ಮನುಜ ಕುಲದಲ್ಲಿ ಹೆಣ್ಣಿನ ಸ್ಥಾನವನ್ನು ಪ್ರಥಮಕ್ಕೆ ಏರಿಸಲು ಉದಾಹರಣೆಯಾಗಿ ನಿಂತಿದೆ. ಇಂದಿನ ಪ್ರಸ್ತುತ ದಿನಮಾನಗಳಲ್ಲಂತೂ ಯಾವ ಕಾರ್ಯವು ಚಿಕ್ಕದಲ್ಲ ಎಂಬಂತೆ ಕಾರ್ಯನಿರ್ವಹಿಸಿ ಸೈಯನಿಸಿಕೊಳ್ಳುತ್ತಿರುವುದನ್ನು ಉದಾಹರಣೆ ಸಹಿತವಾಗಿ ನಾವು ಕಾಣುತ್ತಿದ್ದೇವೆ. ಏನೇ ಆಗಲಿ ಆಕೆಯ ಕಾರ್ಯ ಪ್ರವೃತ್ತಿಗೆ ಒಂದು ದಿನದಲ್ಲಿ ಕೃತಜ್ಞತೆಯನ್ನು ತೋರಿಸಿದರೆ ಅದು ಅವರವರಿಗೆ ಅವಮಾನವೇ. ಆಕೆಯನ್ನು ಜೀವಮಾನವಿಡಿ ಕೃತಜ್ಞತೆ ಸಲ್ಲಿಸುತ್ತಾ ಆಕೆಯ ಆರೋಗ್ಯದತ್ತ ಕವನವನ್ನು ಹರಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.




ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

ಮಹಿಳೆ ತನ್ನ ಜೀವನದಲ್ಲಿ ಮನೆಯ ನಿರ್ವಹಣೆಗಾಗಿ ಮನೆಯಲ್ಲೂ ಕೆಲಸವನ್ನು ಮಾಡುತ್ತಾ, ಹೊರಗಡೆಯೂ ದುಡಿಯುತ್ತಾ, ತನ್ನದೇ ಆದಂತಹ ಸೇವೆಯನ್ನು ನಿಷ್ಕಲ್ಮಶವಾಗಿ ಎಲ್ಲಾ ಕಡೆಯಲ್ಲೂ ಮಾಡುತ್ತಾಳೆ. ಅವಳ ಹುಟ್ಟು ಸೇವೆಗಾಗಿ ಎಂಬುದನ್ನು ತೋರಿಸುತ್ತಾಳೆ ಜಗದ ನಿಯಮದಲ್ಲಿ ಜೀವನದ ಕಷ್ಟ ಸುಖಗಳನ್ನು ಎದುರಿಸುತ್ತ ಬಾಳುವವಳು ಹೆಣ್ಣು. ಎಷ್ಟೆಂದು ಹೇಳುವುದು ಅವಳ ಕಾರ್ಯದ ಉದಾಹರಣೆಯನ್ನು ಮನೆಯ ನಿರ್ವಹಣೆಗಾಗಿ ಮನೆಯಲ್ಲಿಯೇ ಎಷ್ಟು ವಿದ್ಯಾವಂತ ಮಹಿಳೆಯರು ಹೊರಗೂ ದುಡಿದು, ಮನೆಯಲ್ಲೂ ಸಹ ದುಡಿಯುತ್ತಾರೆ. ಮನೆಯಲ್ಲಿ ಇರುವಂತಹ ಅವಿದ್ಯಾವಂತ ಮಹಿಳೆಯರು ಸಹ ತಮ್ಮ ಕೈಯಲ್ಲಿ ಆಗುವ ಕರಕುಶಲ ಕೆಲಸಗಳನ್ನು ಮಾಡಿ ದುಡಿಯುತ್ತಿದ್ದಾರೆ . ಬಟ್ಟೆ ಹೊಲಿಯುವುದಾಗಿರಬಹುದು, ತೋರಣಗಳನ್ನು ಹಾಕುವುದಾಗಿರಬಹುದು, ಮೇಣಗಳನ್ನು ಮಾಡುವುದಾಗಿರಬಹುದು, ವಸ್ತುಗಳನ್ನು ಕಟ್ಟಿಕೊಡುವುದಾಗಿರಬಹುದು, ಊಟದ ಎಲೆಗಳನ್ನು ತಯಾರು ಮಾಡುವುದು ಹೀಗೆ ಹಲವಾರು ವಿಧದಲ್ಲಿ ಅವಿದ್ಯಾವಂತ ಮಹಿಳೆಯರು ಸಹ ದುಡಿಯುತ್ತಾರೆ. ವಿದ್ಯಾವಂತ ಮಹಿಳೆಯರು ತಮ್ಮ ಕೈಲಾದಷ್ಟು ಅವರು ದುಡಿಯುತ್ತಾ ಕಾರ್ಖಾನೆಗಳಿಗೆ ಹೋಗುತ್ತಾರೆ. ಎಷ್ಟೇ ಮುಜುಗರದ ಪರಿಸ್ಥಿತಿ ಇದ್ದರೂ. ಯಾವುದಕ್ಕೂ ಹೆದರದೆ ಅಂಜದೆ ಕೆಲಸವನ್ನು ಮಾಡುತ್ತಾರೆ. ಒಟ್ಟಾರೆ ಹೆಣ್ಣಿಗೆ ಎಷ್ಟು ವಿಮರ್ಶೆಮಾಡಿ ಪಟ್ಟಿ ಮಾಡಿ ವಿಶೇಷತೆಗಳನ್ನು ಹೇಳಿದರು ಕಡಿಮೆಯೆ. ನಾರಿ ನಿನಗೆ ಯಾರು ಸಮ ನಿನ್ನ ತ್ಯಾಗಕ್ಕೆ ಬೆಲೆಯೇ ಇಲ್ಲ ಎಂಬ ಮಾತಿಗೆ ಸರಿಯಾದ ಅರ್ಥವನ್ನು ನೀಡುವವಳು ನಾರಿಯೆ . ಹೆಣ್ಣೆ ನಿನಗೆ ನನ್ನದೊಂದು ನಮಸ್ಕಾರ. ಹೆಣ್ಣಿನ ಬಗ್ಗೆ ಹೇಳುತ್ತಾ ಹೋದರೆ ಎಷ್ಟು ಹೇಳಿದರು ಕಡಿಮೆಯೆ ಎಂದು ಹೇಳುಬಹುದು. ಧನ್ಯವಾದಗಳು ಜೈ ಹಿಂದ್ ಜೈ ಭಾರತ ಮಾತೆ.

# ಟೀ ಸ್ಟ್ರೈನರ್, ಪಾತ್ರೆ ಕ್ಲೀನ್ ಮಾಡೋದು ಈಗ ಈಸಿ

ನಮ್ಮ ದೇಶದಲ್ಲಿ ಚಹಾ ಕೇವಲ ಪಾನೀಯವಲ್ಲವಾಗಿ ಉಳಿದಿಲ್ಲ ಅದೊಂದು ಸಂಪ್ರದಾಯವಾಗಿ ಬೆಳೆದುಬಿಟ್ಟಿದೆ. ಮನೆಗೆ ಯಾರೇ ಬಂದರೂ ಚಹಾ ಮಾಡಿಕೊಂಡುವುದು ನಮ್ಮ ಹಿರಿಯರ ಕಾಲದಿಂದಲೂ ಕೂಡ ಅನುಸರಿಸಿಕೊಂಡು ಬರಲಾಗುತ್ತಿದೆ.ಅಂದರೆ ಮನೆಗೆ ಬರುವ ಅತಿಥಿಗಳಿಗೆ ಸಂಬಂಧಿಕರಿಗೆ ಅಥವಾ ಸ್ನೇಹಿತರಿಗೆ ಚಹಾ ನೀಡುವುದು ಗೌರವ ಮತ್ತು ಪ್ರೀತಿಯ ಸಂಕೇತವನ್ನು ಸೂಚಿಸುತ್ತದೆ.

ಇನ್ನೂ ಚಹಾ ತಯಾರಿಸುವುದು ಸುಲಭವಾದರೂ ಚಹಾ ಪಾತ್ರೆಗಳನ್ನು ಸ್ವಚ್ಛಗೊಳಿಸುವುದು ನಿಜಕ್ಕೂ ಸವಾಲಿನ ಕೆಲಸ! ಯಾಕೆಂದ್ರೆ, ಚಹಾ ಸ್ಟ್ರೈನರ್ ಹಾಗೂ ಚಹಾದ ಪಾತ್ರೆಗಳ ಅಡಿಯಲ್ಲಿ ಅಂಟಿಕೊಂಡಿರುವ ಕಪ್ಪು ಕಲೆಗಳನ್ನು ತೆಗೆಯುವುದು ಅಷ್ಟು ಸುಲಭದ ಕೆಲಸವಲ್ಲ.ಹಾಗಂತ ಅಸಾಧ್ಯವೇನಲ್ಲ! ಈ ಸಮಯದಲ್ಲಿ ಕೆಲವೊಂದು ಸರಳ ಸಲಹೆಗಳನ್ನು ಅನುಸರಿಸುವ ಮೂಲಕ, ಕಪ್ಪಾದ ಚಹಾ ಸ್ಟ್ರೈನರ್ ಅನ್ನು ಮೊದಲಿನಂತೆ ಹೊಳೆಯುವ ಹಾಗೆ ಮಾಡಬಹುದು



**ಅಡುಗೆ ಸೋಡಾ ಮತ್ತು ವಿನೆಗರ್:** ಪಾತ್ರೆಗಳನ್ನು ಸ್ವಚ್ಛಗೊಳಿಸಲು ಅಡುಗೆ ಸೋಡಾ ಮತ್ತು ವಿನೆಗರ್ ಅನ್ನು ಬಳಸ ಬಹುದು. ಮೊದಲು, ಒಂದು ಟೀಪಾಟ್ ಅನ್ನು ನೀರಿನಿಂದ ತುಂಬಿಸಿ. ಪಾತ್ರೆಗೆ 2 ಚಮಚ ಅಡಿಗೆ ಸೋಡಾ ಮತ್ತು ಸ್ವಲ್ಪ ವಿನೆಗರ್ ಸೇರಿಸಿ. ನಂತರ, ಒಲೆ ಆನ್ ಮಾಡಿ ಮತ್ತು ಮಿಶ್ರಣವನ್ನು ಕುದಿಸಿ. ಮಿಶ್ರಣವು ತಣ್ಣಗಾದ ಬಳಿಕ, ನೀವು ಸ್ಪಾಂಜ್ ಅಥವಾ ಸ್ಕಬ್ಬರ್‌ನಿಂದ ಟೀಪಾಟ್ ಅನ್ನು ಸುಲಭವಾಗಿ ಸ್ವಚ್ಛಗೊಳಿಸಬಹುದು. ಇಲ್ಲಾಂದ್ರೆ, ಒಂದು ಟೀ ಚಮಚದಷ್ಟು ಅಡುಗೆ ಸೋಡಾವನ್ನು ನೇರವಾಗಿ ಪಾತ್ರೆಗಳ ಮೇಲೆ ಸಿಂಪಡಿಸಿ, ಇದರ ಮೇಲೆ ಸ್ವಲ್ಪ ವಿನೆಗರ್ ಹಾಕಿ, 15 ನಿಮಿಷಗಳ ನಂತರ ಉಜ್ಜಿದರೆ ಕಠಿಣ ಜಿಡ್ಡು ಮತ್ತು ಕಲೆಗಳು ಸುಲಭವಾಗಿ ಹೋಗುತ್ತವೆ.

**ಅಧ್ಯಾಯನದ ಪ್ರಕಾರ:** ಪಬ್‌ಮೆಡ್ ಮತ್ತು ಸಂಬಂಧಿತ ಪಿಎಂಸಿ ಡೇಟಾಬೇಸ್‌ಗಳಲ್ಲಿ ಸೂಚಿಸಲಾದ ಅಧ್ಯಯನಗಳ ಆಧಾರದ ಮೇಲೆ, ಅಡುಗೆ ಸೋಡಾ, ವಿನೆಗರ್ ಸುರಕ್ಷಿತ, ಪರಿಸರ ಸ್ನೇಹಿ ಮನೆಯ ಕ್ಲೀನರ್‌ಗಳಾಗಿ ಗುರುತಿಸಲ್ಪಟ್ಟಿವೆ ಇವೆರಡರ ಸಂಯೋಜನೆಯು ಶುಚಿಗೊಳಿಸು ವಿಕೆಯನ್ನು ಸುಲಭಗೊಳಿಸುತ್ತದೆ ಮತ್ತು ಕಠಿಣ ಕಲೆಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ

**ಬಿಸಿನೀರು ಮತ್ತು ಡಿಟರ್ಜೆಂಟ್ ಸಹಾಯ ಮಾಡುತ್ತದೆ:** ಟೀಪಾಟ್ ತುಂಬಾ ಸುಟ್ಟಾಗ, ಅದನ್ನು ಸ್ವಚ್ಛಗೊಳಿಸಲು ಬಿಸಿನೀರು ಮತ್ತು ಡಿಟರ್ಜೆಂಟ್ ಬಳಸಿ ಸ್ವಚ್ಛಗೊಳಿಸಬಹುದು ಮೊದಲಿಗೆ ಟೀಪಾಟ್‌ಗೆ ಬಿಸಿನೀರನ್ನು ಸುರಿದು, ಸ್ವಲ್ಪ ಡಿಶ್ ವಾಶ್ ಲಿಕ್ವಿಡ್ ಹಾಕಿ ಅಂತಿಮವಾಗಿ ನೀರಿಗೆ ಸ್ವಲ್ಪ ಅಡುಗೆ ಸೋಡಾ ಸೇರಿಸಿ.

ಉತ್ತಮ ಫಲಿತಾಂಶಗಳಿಗಾಗಿ, ಪ್ಯಾನ್ ಅನ್ನು ಕೆಲವು ಗಂಟೆಗಳ ಕಾಲ ಹಾಗೆಯೇ ಬಿಡಿ. ನಂತರ ಸ್ಕಬ್ಬರ್‌ನಿಂದ ಉಜ್ಜಿದರೆ ಕಲೆಗಳು ಸುಲಭವಾಗಿ ಹೋಗುತ್ತವೆ.

**ಉಪ್ಪು ಮತ್ತು ನಿಂಬೆಹಣ್ಣು :** ಉಪ್ಪು ಮತ್ತು ನಿಂಬೆಹಣ್ಣಿನ ಸಂಯೋಜನೆಯು ಅತ್ಯಂತ ಕೊಳಕಾದ ಪಾತ್ರೆಗ ಳನ್ನು ಸಹ ಹೊಳೆಯುವಂತೆ ಮಾಡುವಲ್ಲಿ ಅತ್ಯಂತ ಪರಿಣಾಮಕಾರಿ ನೈಸರ್ಗಿಕ ಕ್ಲೀನರ್ ಆಗಿದೆ. ನಿಂಬೆಯಲ್ಲಿರುವ ಸಿಟ್ರಿಕ್ ಆಸಿಡ್ ಅಂಶವು ಪಾತ್ರೆಯಲ್ಲಿರುವ ಜಿಡ್ಡು ಮತ್ತು ಕಲೆಗಳನ್ನು ತೆಗೆದು ಹಾಕಿದರೆ, ಉಪ್ಪಿನಲ್ಲಿ ಕಂಡು ಬರುವ ಅಬ್ರಾಸಿವ್ ಪಾತ್ರೆಗಳ ಮೇಲಿನ ಹೊಳಪನ್ನು ಹೆಚ್ಚಿಸಲು ನೆರವಿಗೆ ಬರುತ್ತದೆ. ಮೊದಲು, ಸುಟ್ಟ, ಕಪ್ಪು ಬಣ್ಣದ ಪ್ರದೇಶದ ಮೇಲೆ ಉಪ್ಪನ್ನು ಸಿಂಪಡಿಸಿ. ಈಗ, ಆ ಪ್ರದೇಶವನ್ನು ನಿಂಬೆ ಹೋಳಿನಿಂದ ಚೆನ್ನಾಗಿ ಉಜ್ಜಿ ನಂತರ ಶುದ್ಧ ನೀರಿನಿಂದ ತೊಳೆಯಿರಿ. ಅದು ಉಕ್ಕಿನ ಪಾತ್ರೆಯಾಗಿರಲಿ ಅಥವಾ ತಾಮ್ರದ ಪಾತ್ರೆಯಾಗಿರಲಿ, ಅದು ಹೊಳೆಯುವಂತೆ ಸ್ವಚ್ಛವಾಗಿರುತ್ತದೆ.

# ಲೋಕಕಲ್ಯಾಣಕ್ಕಾಗಿ ಶ್ರೀ ರಾಜಮಾತಂಗಿ ಮಹಾಯಜ್ಞ


• ಶ್ರೀ. ಅಭಯ್ ವರ್ತಕ್

ಯಜ್ಞವು ಸನಾತನ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿದೆ. ಧರ್ಮಗ್ರಂಥಗಳಲ್ಲಿ ವಿವರಿಸಲಾದ ಯಜ್ಞಗಳ ಲಾಭವು ಸಮಾಜಕ್ಕೆ ದೊರೆಯಲಿ ಎಂಬ ಉದ್ದೇಶದಿಂದ ಅನೇಕ ಸಂತರು ಶ್ರಮಿಸುತ್ತಿದ್ದಾರೆ. ಸಂತರ ಈ ಅವಿರತ ಪ್ರಯತ್ನದಿಂದಾಗಿಯೇ ಯಜ್ಞ ಸಂಸ್ಕೃತಿಯು ಇಂದು ಜೀವಂತವಾಗಿದೆ. ವಿಶ್ವಕಲ್ಯಾಣಕ್ಕಾಗಿ ಯಜ್ಞ-ಯಾಗಾದಿಗಳನ್ನು ಮಾಡುವುದು ನಮ್ಮ ಪರಂಪರೆಯಾಗಿದೆ. ಪ್ರಸ್ತುತ ಸಮಯದಲ್ಲಿ ಇಡೀ ವಿಶ್ವದ ಮೇಲೆ ಮೂರನೇ ಮಹಾಯುದ್ಧದ ಸಂಕಟವು ಎದುರಾಗಿದೆ. ರಾಜಕೀಯ ಮತ್ತು ಬೌದ್ಧಿಕ ಮಟ್ಟದಲ್ಲಿ ಪ್ರಯತ್ನಗಳು ನಡೆಯುತ್ತಿದ್ದರೂ, ಆಧ್ಯಾತ್ಮಿಕ ಬಲವು ಅತ್ಯಂತ ಮಹತ್ವದ್ದಾಗಿದೆ. ಇದೇ ಹಿನ್ನೆಲೆಯಲ್ಲಿ ಮುಂಬೈನಲ್ಲಿ ಸನಾತನ ಸಂಸ್ಥೆಯ ವತಿಯಿಂದ 'ಶ್ರೀ ರಾಜಮಾತಂಗಿ ಮಹಾಯಜ್ಞ'ವನ್ನು ಆಯೋಜಿಸಲಾಗಿದೆ, ಈ ಕುರಿತಾದ ಲೇಖನ ಇಲ್ಲಿದೆ.

**ಯಜ್ಞ ಸಂಸ್ಕೃತಿ:** ಭಾರತೀಯ ಸಂಸ್ಕೃತಿಯಲ್ಲಿ ಯಜ್ಞವನ್ನು 'ಬ್ರಹ್ಮಾಂಡದ ನಾಭಿ' ಎಂದು ಪರಿಗಣಿಸಲಾಗಿದೆ. ಅಂದರೆ ಯಜ್ಞವು ಸೃಷ್ಟಿಯ ಕೇಂದ್ರಬಿಂದುವಾಗಿದೆ, ಆದ್ದರಿಂದಲೇ ವೈದಿಕ ಕಾಲದಿಂದಲೂ ಯಜ್ಞಗಳಿಗೆ ವಿಶೇಷ ಮಹತ್ವವಿದೆ. ಯಜ್ಞಗಳ ಮೂಲಕ ದೇವತೆಗಳ ಆಶೀರ್ವಾದವನ್ನು ಪಡೆದು ಇಚ್ಛಿತ ಗುರಿಯನ್ನು ಸುಲಭವಾಗಿ ಸಾಧಿಸಬಹುದು. ರಾಜಸೂಯ, ಅಶ್ವಮೇಧ, ಪುತ್ರಕಾಮೇಷ್ಟಿ ಮುಂತಾದ ಯಜ್ಞಗಳ ವಿವರವಾದ ವರ್ಣನೆಯು ಹಿಂದೂ ಧರ್ಮಗ್ರಂಥಗಳಲ್ಲಿ ಕಂಡುಬರುತ್ತದೆ. ಯಜ್ಞದಲ್ಲಿ ಅಗ್ನಿ ಮತ್ತು ಮಂತ್ರೋಚ್ಚಾರಣೆಯ ಮೂಲಕ ಪರಿಸರದ ನಕಾರಾತ್ಮಕತೆಯನ್ನು ಹೋಗಲಾಡಿಸಲಾಗುತ್ತದೆ. ಯಜ್ಞದಿಂದ ಪರಿಸರದ ಸಮತೋಲನವಾಗುತ್ತದೆ ಮತ್ತು ಶುದ್ಧಿಯಾಗುತ್ತದೆ. ಯಜ್ಞವು ಪರಿಸರ ಮತ್ತು ಮನುಕುಲದ ಮೇಲೆ ಅತ್ಯಂತ ಸಕಾರಾತ್ಮಕ ಪ್ರಭಾವ ಬೀರುತ್ತದೆ ಎಂಬುದು ಈಗ ವೈಜ್ಞಾನಿಕ ಸಂಶೋಧನೆಗಳಿಂದಲೂ ಸಾಬೀತಾಗಿದೆ.

ಸನಾತನ ಸಂಸ್ಥೆಯ ಆಶ್ರಮದಲ್ಲಿ ಇದುವರೆಗೆ ರಾಮರಾಜ್ಯದ ಸ್ಥಾಪನೆ ಮತ್ತು ಸಮಾಜದ ಕಲ್ಯಾಣಕ್ಕಾಗಿ 300 ಕ್ಕೂ ಹೆಚ್ಚು ಯಜ್ಞಗಳು ಮತ್ತು 1,000 ಕ್ಕೂ ಹೆಚ್ಚು ಧಾರ್ಮಿಕ ವಿಧಿಗಳನ್ನು ನೆರವೇರಿಸಲಾಗಿದೆ. ಇದರಲ್ಲಿ ಸಾಗ್ನಿಚಿತ್ ಅಶ್ವಮೇಧ ಮಹಾಸೋಮಯಾಗ, ಉಚ್ಛಿಷ್ಟ ಗಣಪತಿ ಯಜ್ಞ, ಚಂಡಿ ಯಾಗ, ಧನ್ವಂತರಿ ಯಾಗ, ಸಂಜೀವಿನಿ ಹೋಮ, ಪಂಚಮಹಾಭೂತ ಯಾಗ ಮುಂತಾದವುಗಳು ಸೇರಿವೆ. ಈ ಯಜ್ಞಗಳ ಸಂಕಲ್ಪವು ಧರ್ಮಕಾರ್ಯದಲ್ಲಿ ಬರುವ ಅಡೆತಡೆಗಳ ನಿವಾರಣೆ ಮತ್ತು ರಾಮರಾಜ್ಯದಂತಹ ಹಿಂದೂ ರಾಷ್ಟ್ರದ ಸ್ಥಾಪನೆ, ಅಂದರೆ ಸಮಷ್ಟಿ ಕಲ್ಯಾಣದ್ದಾಗಿತ್ತು. ಮೇ 2025 ರಲ್ಲಿ ಗೋವಾದಲ್ಲಿ ಆಯೋಜಿಸಲಾದ 'ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ'ದಲ್ಲಿ ಭಾರತದ ರಕ್ಷಣೆ ಮತ್ತು ವಿಜಯಕ್ಕಾಗಿ ಶತಚಂಡಿ ಯಜ್ಞ ಹಾಗೂ ಇಡೀ ಮಾನವಕುಲದ ಕಲ್ಯಾಣಕ್ಕಾಗಿ 'ಶ್ರೀ ಮಹಾಧನ್ವಂತರಿ ಯಾಗ'ವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ದೇಶ-ವಿದೇಶಗಳ ಸಂತರು ಸೇರಿದಂತೆ 30 ಸಾವಿರಕ್ಕೂ ಹೆಚ್ಚು ಭಕ್ತರು ಮತ್ತು ಹಿಂದೂ ಧರ್ಮಪ್ರೇಮಿಗಳು ಉಪಸ್ಥಿತರಿದ್ದರು.

ಉದಯವಾಹಿನಿ ಚಿತ್ರ



ರಾಜಮಾತಂಗಿಯನ್ನು 'ವಿಜಯಪ್ರದಾ' ಎಂದು ಕರೆಯಲಾಗುತ್ತದೆ. ಪ್ರಸ್ತುತ ಯುದ್ಧಕಾಲದ ಪರಿಸ್ಥಿತಿಯಲ್ಲಿ ಭಾರತಕ್ಕೆ ಸಂರಕ್ಷಣಾ ಕವಚವು ದೊರೆಯಲಿ ಮತ್ತು ಭಾರತವು ಸರ್ವತೋಮುಖ ಪ್ರಗತಿಯನ್ನು ಸಾಧಿಸಲಿ ಎಂಬ ಉದ್ದೇಶದಿಂದ ಸನಾತನ ಸಂಸ್ಥೆಯು 'ಶ್ರೀ ರಾಜಮಾತಂಗಿ ಮಹಾಯಜ್ಞ'ವನ್ನು ಹಮ್ಮಿಕೊಂಡಿದೆ.

ಈ ಸಂದರ್ಭದಲ್ಲಿ ಶ್ರೀ ರಾಜಮಾತಂಗಿ ದೇವಿಯನ್ನು ಸ್ತುತಿಸಿ ಭಾರತದ ರಕ್ಷಣೆ ಮತ್ತು ಸರ್ವತೋಮುಖ ಅಭಿವೃದ್ಧಿಗಾಗಿ ಸಾಮೂಹಿಕ ಪ್ರಾರ್ಥನೆ ಮಾಡಲಾಗುವುದು. ಸನಾತನ ಸಂಸ್ಥೆಯ ಸಂಸ್ಥಾಪಕರಾದ ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆ ಅವರು ಯಾವ ಮುಂಬೈ ನಗರಿಯಲ್ಲಿ ಧರ್ಮಕಾರ್ಯವನ್ನು ಪ್ರಾರಂಭಿಸಿದರೋ, ಅದೇ ಮುಂಬಾದೇವಿಯ ನಗರಿಯಲ್ಲಿ ಆಯೋಜಿಸಲಾದ ಈ ಮಹಾಯಜ್ಞವು 'ರಾಮರಾಜ್ಯ ನಿರ್ಮಾಣ'ದ ದಿಶೆಯಲ್ಲಿ ಇಡಲಾದ ಒಂದು ಐತಿಹಾಸಿಕ ಹೆಜ್ಜೆಯಾಗಿದೆ. ಈ ಯಜ್ಞದ ಆಧ್ಯಾತ್ಮಿಕ ಲಾಭವನ್ನು ನಿಮ್ಮ ಕುಟುಂಬದೊಂದಿಗೆ ಉಪಸ್ಥಿತರಿದ್ದು ಪಡೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇವೆ.

## ಶ್ರೀ ರಾಜಮಾತಂಗಿ ದೇವಿಯ ಕಾರ್ಯ ಮತ್ತು ಮಹಾಯಜ್ಞದ ಉದ್ದೇಶ

**ಆದಿಶಕ್ತಿ ಸತೀ ದೇವಿಯ ಕೋಪದಿಂದ ಉದ್ಭವಿಸಿದ ಶಕ್ತಿಯ ಹತ್ತು ಸ್ವರೂಪಗಳನ್ನು 'ದಶಮಹಾವಿದ್ಯಾ' ಎಂದು ಕರೆಯಲಾಗುತ್ತದೆ. ಕಾಳಿ, ತಾರಾ, ಷೋಡಶಿ, ಭುವನೇಶ್ವರಿ, ತ್ರಿಪುರಭೈರವಿ, ಛಿನ್ನಮಸ್ತ, ಧೂಮಾವತಿ, ಬಗಲಾಮುಖಿ, ಮಾತಂಗಿ ಮತ್ತು ಕಮಲಾ ಇವು ದಶಮಹಾವಿದ್ಯೆಗಳಾಗಿವೆ. ಮಾತಂಗಿಯನ್ನು ಆದಿಶಕ್ತಿಯ ಪ್ರಧಾನ ಮಂತ್ರಿ (ಸಲಹೆಗಾರ್ತಿ) ಎಂದು ಪರಿಗಣಿಸಲಾಗುತ್ತದೆ, ಆದ್ದರಿಂದ ಅವರನ್ನು 'ಶ್ರೀ ರಾಜಮಾತಂಗಿ' ಎಂದು ಕರೆಯಲಾಗುತ್ತದೆ. ಈ ದೇವಿಯ ಉಪಾಸನೆಯಿಂದ ಶತ್ರುಗಳ ಮೇಲೆ ನಿಯಂತ್ರಣ ಸಾಧಿಸಬಹುದು, ಆದ್ದರಿಂದ ಪ್ರಸ್ತುತ ಯುದ್ಧದಂತಹ ಪರಿಸ್ಥಿತಿಯಲ್ಲಿ ತಪೋಭೂಮಿ ಭಾರತದ ರಕ್ಷಣೆಗಾಗಿ ಶ್ರೀ ರಾಜಮಾತಂಗಿ ದೇವಿಯ ಸಂರಕ್ಷಣಾ ಕವಚವು ಅವಶ್ಯಕವೆಂದು ಪರಿಗಣಿಸಲಾಗಿದೆ. ಭಗವಾನ್ ವಿಷ್ಣುವಿನ ವಿವಿಧ ದಶಾವತಾರಗಳ ಸಮಯದಲ್ಲಿಯೂ ದಶಮಹಾವಿದ್ಯೆಗಳು ಕಾರ್ಯನಿರ್ವಹಿಸುತ್ತವೆ. ತ್ರೇತಾಯುಗದಲ್ಲಿ ಭಗವಾನ್ ಶ್ರೀರಾಮನ ಅವತಾರ ಕಾಲದಲ್ಲಿ ಶ್ರೀ ರಾಜಮಾತಂಗಿ ದೇವಿಯ ತತ್ವವು ಸಕ್ರಿಯವಾಗಿದ್ದರಿಂದಲೇ ಆದರ್ಶ ರಾಮರಾಜ್ಯದ ಸ್ಥಾಪನೆಯಾಯಿತು. ಪ್ರಸ್ತುತ ಸಮಯದಲ್ಲಿಯೂ ರಾಮರಾಜ್ಯದ ಸ್ಥಾಪನೆಗೆ ಶ್ರೀ ರಾಜಮಾತಂಗಿ ದೇವಿಯ ಕೃಪೆ ಅತ್ಯಗತ್ಯವಾಗಿದೆ.**

ಉದಯ ವಾಹಿನಿ

ಪ್ರಾದೇಶಿಕ

ಗುರುವಾರ
14 ಮೇ 2026

05

• ಇಲಾಖೆಯ ಮಾಹಿತಿಯಲ್ಲಿ ಜೀವಂತವಿರುವ ಗೃಹಲಕ್ಷ್ಮಿ ಫಲಾನುಭವಿಯು ಮರಣ ಹೊಂದಿರುವುದಾಗಿ ದಾಖಲು

# ಮೃತ ಫಲಾನುಭವಿಗಳ ಖಾತೆಗೆ ಹಣ ಜಮೆ: ಸೂಕ್ತ ಕ್ರಮಕ್ಕೆ ಸೂಚನೆ

• ಉದಯವಾಹಿನಿ, ಮಂಗಳೂರು

ಮೃತ ಗೃಹಲಕ್ಷ್ಮಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಇನ್ನೂ ಹಣ ಜಮೆಯಾಗುತ್ತಿದ್ದು, ಮೃತಪಟ್ಟ ಫಲಾನುಭವಿಗಳ ಖಾತೆಗೆ ಜಮೆಯಾಗಿರುವ ಹಣವನ್ನು ಮರಳಿ ಪಡೆಯಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮವಹಿಸಬೇಕೆಂದು ದ.ಕ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ ಸೂಚಿಸಿದರು. ಅವರು ದ.ಕ ಜಿಲ್ಲಾ ಪಂಚಾಯತ್ನಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಈಗಾಗಲೇ ಮರಣ ಹೊಂದಿದ ಗೃಹಲಕ್ಷ್ಮಿ ಫಲಾನುಭವಿಗಳ ಖಾತೆಗೆ ರೂ.22 ಕೋಟಿ ಅನುದಾನ ವರ್ಗಾವಣೆ ಆಗಿದೆ ಎಂಬ ಮಾಹಿತಿಯನ್ನು ರಾಜ್ಯ ಕಛೇರಿಯಿಂದ ತಿಳಿಸಿರುವ ಬಗ್ಗೆ ಅವರು ವಿಷಾದ ವ್ಯಕ್ತಪಡಿಸಿ, ಫಲಾನುಭವಿಗಳ ಖಾತೆಗೆ ಜಮೆಯಾಗಿರುವ ಸಹಾಯಧನ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡುವ ಬಗ್ಗೆ ಫಲಾನುಭವಿಗಳ ಮಾಹಿತಿಯನ್ನು ಪಡೆಯಲು ಕ್ರಮವಹಿಸಬೇಕು ಎಂದು ಅವರು ಹೇಳಿದರು.

ಇಲಾಖೆಯ ಮಾಹಿತಿಯಲ್ಲಿ ಜೀವಂತವಿರುವ ಗೃಹಲಕ್ಷ್ಮಿ ಫಲಾನುಭವಿಯು ಮರಣ ಹೊಂದಿರುವುದಾಗಿ ದಾಖಲಾಗಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಮುಂದಿನ ಸಭೆಗೆ ವರದಿ ಸಲ್ಲಿಸುವಂತೆ ಅಧ್ಯಕ್ಷರು ಸೂಚಿಸಿದರು.

ಗೃಹಲಕ್ಷ್ಮಿ ಯೋಜನೆಯಡಿ 425759 ಒಟ್ಟು ಪಡಿತರ ಚೀಟಿ ಹೊಂದಿರುವ ಫಲಾನುಭವಿಗಳ ಪೈಕಿ ಈವರೆಗೆ ಒಟ್ಟು 1548 ಫಲಾನುಭವಿಗಳು ನೊಂದಾಯಿಸಿಕೊಂಡಿದ್ದು, ಒಟ್ಟು 3,82,178 ಫಲಾನುಭವಿಗಳು ನೊಂದಾಯಿಸಿಕೊಂಡಿರುತ್ತಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಮರಣ ಹೊಂದಿದ ಫಲಾನುಭವಿಯ ಹೆಸರು, ಖಾತೆ ಸಂಖ್ಯೆ ಹಾಗೂ ಬ್ಯಾಂಕಿನ ವಿವರಗಳು ಇದ್ದಲ್ಲಿ ಬ್ಯಾಂಕ್ ಮುಖಾಂತರ ಕ್ರಮಕ್ಕೈಗೊಳ್ಳಬಹುದು. ಇಲ್ಲವಾದಲ್ಲಿ ಗ್ರಾಮದಲ್ಲಿ ಮರಣಹೊಂದಿದವರ ಮಾಹಿತಿ ಗ್ರಾಮ ಕರಣಿಕರ ಕಚೇರಿಯಲ್ಲಿ ಲಭ್ಯವಿರುತ್ತದೆ. ಅಂತಹ ಮಾಹಿತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪಡೆದಲ್ಲಿ ಮರಣ ಹೊಂದಿದ ಫಲಾನುಭವಿಯ ಖಾತೆಗೆ ಸಹಾಯಧನ ಬಿಡುಗಡೆ ಮಾಡುವುದನ್ನು ತಡೆಹಿಡಿಯಬಹುದು.

ಮೃತ ಫಲಾನುಭವಿಯ ಮರಣ ಪ್ರಮಾಣ ಪತ್ರ ಬಂದ ತಕ್ಷಣ ಫಲಾನುಭವಿಗಳ ಪಟ್ಟಿಯಿಂದ ಹೆಸರನ್ನು ತೆಗೆಯಬೇಕು. ಅವರ ಹೆಸರು, ಬ್ಯಾಂಕ್ ವಿವರಗಳಿದ್ದಲ್ಲಿ ಬ್ಯಾಂಕ್ ಮುಖಾಂತರ ಖಾತೆಯನ್ನು ಸ್ಥಗಿತಗೊಳಿಸಲು ಕ್ರಮವಹಿಸಬೇಕು ಎಂದು ಅವರು ಸೂಚಿಸಿದರು.

ನೆಲ್ಯಾಡಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಜಾಗವನ್ನು ಒತ್ತುವರಿ ಮಾಡಲಾಗಿದ್ದು, ಬಸ್ ನಿಲ್ದಾಣ ಆದ ನಂತರ 2 ಮನೆಗಳಿಗೆ 94 ಸಿ ನೀಡಲಾಗಿದೆ. 3 ಮನೆಗಳಿಗೆ ರಸ್ತೆ ನಿರ್ಮಿಸಲು ಸದರಿ ಜಾಗವನ್ನು ಉಪಯೋಗಿಸಿಕೊಳ್ಳಲಾಗಿದೆ. ಸುಮಾರು 30 ಸೆಂಟ್ಸ್ ಜಾಗ ಕೆಎಸ್‌ಆರ್‌ಟಿಸಿಗೆ ಅನುಮೋದನೆಯಾದ ನಂತರ ಒತ್ತುವರಿಯಾಗಿದೆ. ಜಾಗವನ್ನು ಒತ್ತುವರಿ ಮಾಡಿರುವವರಿಗೆ ಸೂಕ್ತ ಕ್ರಮವಾಗಬೇಕೆಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾತನ ಪ್ರಾಧಿಕಾರದ ಸದಸ್ಯರು ತಿಳಿಸಿದಾಗ ಈ ಬಗ್ಗೆ ಪರಿಶೀಲನೆ ಮಾಡಲಾಗುವುದೆಂದು ಇಲಾಖಾಧಿಕಾರಿಗಳು ತಿಳಿಸಿದರು. ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸುವಂತೆ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು ಸೂಚಿಸಿದರು.

ಯುವನಿಧಿ ಯೋಜನೆಯಡಿಯಲ್ಲಿ ಲಭ್ಯವಿರುವ ಉದ್ಯೋಗ ತರಬೇತಿಯ ಬಗ್ಗೆ ಮಾಹಿತಿ ನೀಡಬೇಕು. ತಾಲ್ಲೂಕು ಮಟ್ಟದಲ್ಲಿ ಯುವಕರಿಗೆ ಕೌಶಲ ತರಬೇತಿಗಳನ್ನು ನೀಡಬೇಕು ಎಂದು ಅಧ್ಯಕ್ಷರು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಯೋಜನಾ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿ ಸುಮ ಕೆ. ಎಸ್, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಜೋಕಿಂ ಡಿಸೋಜಾ, ನಾರಾಯಣ ನಾಯಕ್, ಸದಸ್ಯರಾದ ಅರುಣ್ ಕುಮಾರ್ ಶೆಟ್ಟಿ, ಆಲ್ವಿನ್ ಕ್ಲೆಮೆಂಟ್ ಕುಟಿನ್ಹ, ಜಯಂತಿ ಬಿ.ಎ, ಶಾಹುಲ್ ಹಮೀದ್, ಉಮಾನಾಥ್ ಶೆಟ್ಟಿ, ಪದ್ಮನಾಭ ಸಾಲ್ಯಾನ್, ಸುಧೀರ್ ಕುಮಾರ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

### ಗಂಭೀರವಾಗಿ ಪರಿಗಣಿಸಿ

**ಪಡಿತರ ಚೀಟಿ ಸೇವೆಗಳಿಗಾಗಿ ಬಯೋಮೆಟ್ರಿಕ್ ಅಥವಾ ಹೆಬ್ಬೆರಳು ಗುರುತನ್ನು ನೀಡಲು ಸಂಬಂಧಪಟ್ಟ ಕೇಂದ್ರಗಳಿಗೆ ಭೇಟಿ ನೀಡಿದಾಗ ಹೆಬ್ಬೆರಳು ಗುರುತು ಮ್ಯಾಚ್ ಆಗದಂತಹ ಪರಿಸ್ಥಿತಿ ಬಂದಿದೆ. ಇಂತಹ ಸಮಸ್ಯೆ ತುಂಬಾ ವಯಸ್ಸಾದ, ನಡೆಯಲು ಅಸಾಧ್ಯವಾದ ಪಡಿತರ ಚೀಟಿದಾರರಿಗೆ ತುಂಬಾ ತೊಂದರೆಯಾಗುತ್ತಿದ್ದು, ಈ ಬಗ್ಗೆ ಗಂಭೀರವಾಗಿ ಪರಿಗಣಿಸಿ ಇಂತಹ ಸಮಸ್ಯೆಗೆ ವಿನಾಯಿತಿ ನೀಡುವಂತೆ ಅಧ್ಯಕ್ಷರು ತಿಳಿಸಿದರು.**

### ಹಲವು ತಿಂಗಳಿನಿಂದ ಸಮಸ್ಯೆ ಬಗೆಹರಿದಿರುವುದಿಲ್ಲ

**ಅನ್ನಭಾಗ್ಯ ಯೋಜನೆಯಡಿ ಅರ್ಕುಳ ಪಡಿತರ ಅಂಗಡಿಯನ್ನು ತೆರೆಯುವ ಬಗ್ಗೆ ವಿಷಯವು ಪ್ರಸ್ತಾಪವಾಗಿ 7 ತಿಂಗಳಾಗಿದ್ದರೂ, ಇನ್ನೂ ಸಮಸ್ಯೆ ಬಗೆಹರಿದಿರುವುದಿಲ್ಲ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಸದಸ್ಯರು ವಿಚಾರಿಸಿದಾಗ ಸರ್ಕಾರದ ಆದೇಶದ ಪ್ರಕಾರ ಜಿಲ್ಲಾಧಿಕಾರಿಗಳ ಸಮಿತಿಯಲ್ಲಿ ಅನುಮೋದನೆಯಾದ ನಂತರ ಪಡಿತರ ಅಂಗಡಿಯನ್ನು ತೆರೆಯಲಾಗುವುದೆಂದು ಇಲಾಖಾಧಿಕಾರಿಗಳು ತಿಳಿಸಿದಾಗ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಲ್ಲಿ ಸದರಿ ಸಭೆಯಲ್ಲಿ ಚರ್ಚೆಯಾಗುತ್ತಿದ್ದ ವಿಷಯಗಳಿಗೆ ಹಲವು ತಿಂಗಳಿನಿಂದ ಸಮಸ್ಯೆ ಬಗೆಹರಿದಿರುವುದಿಲ್ಲ. ಜಿಲ್ಲಾಧಿಕಾರಿಗಳ ಸಮಿತಿಯಲ್ಲಿ ಅನುಮೋದನೆಯಾಗಬೇಕಾದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಇಂತಹ ಸಮಸ್ಯೆಯನ್ನು ಬಗೆಹರಿಸಲು ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಸೂಚಿಸಿದರು.**

ಹಲವು ತಿಂಗಳಿನಿಂದ ಸಮಸ್ಯೆ

---

## ಪಂಚ ಗ್ಯಾರಂಟಿ ಯೋಜನೆಗಳು ನಾಡಿನ ಜನತೆಗೆ ಆಶಾಕಿರಣ: ಶಾಸಕ

• ಉದಯವಾಹಿನಿ, ವಿಜಯಪುರ

ನಮ್ಮ ಸರಕಾರದ ಪಂಚ ಗ್ಯಾರಂಟಿ ಯೋಜನೆಗಳು ನೇರವಾಗಿ ಜನರನ್ನು ತಲುಪುತ್ತಿವೆ. ಹಾಗಾಗಿ ಐದು ಗ್ಯಾರಂಟಿ ಯೋಜನೆಗಳು ನಾಡಿನ ಬಡವರು, ದೀನ-ದುರ್ಬಲರ ಬದುಕಿಗೆ ಆಶಾಕಿರಣವಾಗಿವೆ ಎಂದು ನಾಗಠಾಣ ಮತಕ್ಷೇತ್ರದ ಶಾಸಕ ವಿಠ್ಠಲ ಕಟಕದೊಂಡ ಹೇಳಿದರು. ನಗರದ ಡಾ.ಬಿ.ಆರ್. ಅಂಬೇಡ್ಕರ ಕ್ರೀಡಾಗಂಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿ 32 ಫಲಾನುಭವಿಗಳಿಗೆ ಇಂಧನ ಚಾಲಿತ ತ್ರಿಚಕ್ರವಾಹನ ಕೀ ಹಸ್ತಾಂತರಿಸಿ ಅವರು ಮಾತನಾಡಿದರು.

ನಮ್ಮ ಸರ್ಕಾರ ಜನರ ಹಿತದಿಂದ ಇಂತಹ ಜನಪ್ರಿಯ ಹಾಗೂ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಸಾರ್ವಜನಿಕರು ಯೋಜನೆಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಯಾವುದೇ ಕಾರ್ಯ ಶುದ್ಧ ಹಾಗೂ ನಿಷ್ಕಲ್ಮಷ ಮನಸ್ಸಿನಿಂದ ಮಾಡಿದರೆ ಅದು ಫಲ ಕೊಟ್ಟೇ ಕೊಡುತ್ತದೆ. ನಮ್ಮ ಸರಕಾರ ಶುದ್ಧ ಮನಸ್ಸಿನಿಂದ ಈ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರಿಂದ ರಾಜ್ಯದ ಬಹುತೇಕ ಬಡವರಿಗೆ ಈ ಯೋಜನೆಗಳು ವರದಾನವಾಗಿವೆ ಎಂದರು.


ಉದಯವಾಹಿನಿ ಚಿತ್ರ

ನಮ್ಮ ಸಂವಿಧಾನವು ಎಲ್ಲರ ಏಳಿಗೆಗೆ ವಿಶೇಷ ಅವಕಾಶ ಕಲ್ಪಿಸಿದೆ. ಈ ಸಂವಿಧಾನದಡಿ ವಿಕಲಚೇತನರಿಗೆ ಸಾಕಷ್ಟು ಸೌಲಭ್ಯಗಳಿವೆ. ಈ ಪೈಕಿ ನಿಮಗೆ ತ್ರಿಚಕ್ರ ವಾಹನ ಸೌಲಭ್ಯ ನೀಡಲಾಗುತ್ತದೆ. ಈ ಸೌಲಭ್ಯದಿಂದ ವಿಕಲಚೇತನರಿಗೆ ಬಹಳಷ್ಟು ಅನುಕೂಲವಾಗುವುದು ಎಂದರು. ನಿಮ್ಮ ಪ್ರತಿ ಕೆಲಸ ಕಾರ್ಯಗಳಿಗೆ ಈ ವಾಹನ ನಿಮಗೆ ಆಧಾರವಾಗಲಿದೆ. ನಿಮ್ಮ ಸಶಕ್ತೀಕರಣಕ್ಕೆ ಕಾರಣವಾಗಲಿದೆ. ನೀವೂ ಬೇರೆ ಯಾರನ್ನೂ ಅವಲಂಬಿಸದೇ ಜೀವನದಲ್ಲಿ ಅಭಿವೃದ್ಧಿ ಹೊಂದುವ ಮೂಲಕ ಸರ್ಕಾರದ ಯೋಜನೆಗಳನ್ನು ಹಾಗೂ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಸ್ವಾವಲಂಬಿ ಜೀವನ ನಡೆಸಬಹುದಾಗಿದೆ ಎಂದರು.

ಚಡಚಣ ವಿಭಾಗದ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ರವಿದಾಸ ಜಾಧವ ಅವರು ಮಾತನಾಡಿ, ಈ ಕ್ಷೇತ್ರದ ವಿಕಲಚೇತನ 32 ಜನರಿಗೆ ತ್ರಿಚಕ್ರ ವಾಹನ ನೀಡಿದ್ದು, ವಿಶೇಷಚೇತನರಿಗಿರುವ ಸರ್ಕಾರದ ಸೌಲಭ್ಯ ಉಪಯೋಗಿಸಿಕೊಳ್ಳಿ ಎಂದರು. ಮಾಸಾಶನ ಪಿಂಚಣಿ, ಬಸ್ ಪಾಸ್, ಉಚಿತ ಶಿಕ್ಷಣ, ಶೈಕ್ಷಣಿಕ ಉನ್ನತಿಗಾಗಿ ಸರ್ಕಾರ ಸೌಲಭ್ಯ ಒದಗಿಸಿದೆ. ಈ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

> **ವಿಕಲಚೇತನರಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ತ್ರಿಚಕ್ರವಾಹನ ನೀಡಲಾಗುತ್ತಿದೆ. ಜೊತೆಗೆ ನಿಮ್ಮ ಆತ್ಮವಿಶ್ವಾಸ ಇಮ್ಮಡಿಗೊಳಿಸುವ ಕೆಲಸವನ್ನು ಸರಕಾರ ಮಾಡುತ್ತಿದೆ. ಶಾಸಕರ ಅನುದಾನದಡಿ ನಿಯಮಾನುಸಾರ ಅರ್ಜಿ ಸಲ್ಲಿಸಿದವರಿಗೆ ವಿಕಲಚೇತನರಿಗೆ ವಾಹನ ನೀಡಲಾಗುತ್ತದೆ ಎಂದರು. ಈ ಯೋಜನೆಗಳ ಬಗ್ಗೆ ತಿಳಿದುಕೊಂಡು ಅವುಗಳ ಸದುಪಯೋಗಪಡಿಸಿಕೊಳ್ಳಬೇಕು.**
> - ವಿಠ್ಠಲ ಕಟಕದೊಂಡ, ಶಾಸಕ

---

## ಕುಡಿಯುವ ನೀರು ಸಮರ್ಪಕ ಪೂರೈಕೆಗೆ ಮೊದಲ ಆದ್ಯತೆ

• ಉದಯವಾಹಿನಿ, ಗದಗ

ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಉಷ್ಣಾಂಶದ ಹಿನ್ನೆಲೆಯಲ್ಲಿ ಜನ ಹಾಗೂ ಜಾನುವಾರುಗಳಿಗೆ ಸಮರ್ಪಕ ಕುಡಿಯುವ ನೀರು ಪೂರೈಕೆ ಮಾಡಲು ಪ್ರಥಮ ಆದ್ಯತೆ ನೀಡಬೇಕು ಎಂದು ರಾಜ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿಗಳಾದ ಡಾ. ಎಂ.ವಿ. ವೆಂಕಟೇಶ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕಳೆದ ವರ್ಷಕ್ಕಿಂತ ಈ ಬಾರಿ ಜಿಲ್ಲೆಯಲ್ಲಿ ಅಧಿಕ ಉಷ್ಣಾಂಶ ದಾಖಲಾಗುತ್ತಿರುವ ಹಿನ್ನೆಲೆಯಲ್ಲಿ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ಎಲ್ಲಾ ತಾಲ್ಲೂಕು ಪಂಚಾಯತಿ ಇಓಗಳು ತಮ್ಮ ವ್ಯಾಪ್ತಿಯ ಗ್ರಾಮಗಳಲ್ಲಿ ಸಮರ್ಪಕ ಕುಡಿಯುವ ನೀರು ಪೂರೈಕೆ ಆಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಅನಗತ್ಯ ನೀರಿನ ಪೋಲು ಹಾಗೂ ಅಪವ್ಯಯ ತಡೆಗಟ್ಟಿ ವರ್ಷಪೂರ್ತಿ ಸಮರ್ಪಕ ನೀರು ನಿರ್ವಹಣೆಗೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ತಿಮ್ಮಾಪೂರ ಗ್ರಾಮ ಸೇರಿದಂತೆ ನೀರು ಸರಬರಾಜಿನಲ್ಲಿ ಸಮಸ್ಯೆ ಇರುವ ಪ್ರದೇಶಗಳನ್ನು ಗುರುತಿಸಿ ತಕ್ಷಣ ಕ್ರಮ ಕೈಗೊಳ್ಳಬೇಕು. ಜಿಲ್ಲೆಯಲ್ಲಿ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆ ಇರುವ ಗ್ರಾಮಗಳು ಹಾಗೂ ವಾರ್ಡುಗಳನ್ನು ಗುರುತಿಸಿ ಖಾಸಗಿ ಬೋರ್‌ವೆಲ್ ಮೂಲಕ ನೀರು ಪೂರೈಸಲು ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದರು. ಜಿಲ್ಲೆಯಲ್ಲಿ ಇರುವ ಕೆರೆಗಳಲ್ಲಿ ನೀರು ಸಂಗ್ರಹಕ್ಕೆ ಆದ್ಯತೆ ನೀಡಬೇಕು. ಜಿಲ್ಲೆಯಲ್ಲಿರುವ ಆರೋ ಘಟಕಗಳ ಸಮರ್ಪಕ ನಿರ್ವಹಣೆ ಕುರಿತು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲನೆ ನಡೆಸಿ ವರದಿ ಸಲ್ಲಿಸಬೇಕು ಎಂದು ಡಾ. ಎಂ ವಿ ವೆಂಕಟೇಶ ಸೂಚಿಸಿದರು. ಮುಂಗಾರು ಹಂಗಾಮು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಪೂರೈಕೆ ಸಮರ್ಪಕವಾಗಿ ನಡೆಯಬೇಕು, ಯಾವುದೇ ಕಾರಣಕ್ಕೂ ಬೀಜ ಹಾಗೂ ಗೊಬ್ಬರ ವಿತರಣೆಯಲ್ಲಿ ಅವ್ಯವಸ್ಥೆ ನಡೆಯಬಾರದು ಎಂದು ಎಚ್ಚರಿಸಿದರು.

ತೋಟಗಾರಿಕೆ ಬೆಳೆಗಳ ಕ್ಷೇತ್ರ ವಿಸ್ತರಣೆಗೆ ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶಗಳಿದ್ದು, ರೈತರಿಗೆ ಅಗತ್ಯ ಮಾರ್ಗದರ್ಶನ ಹಾಗೂ ಸೌಲಭ್ಯ ಒದಗಿಸಿ ಕ್ಷೇತ್ರ ವಿಸ್ತರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.



ಉದಯವಾಹಿನಿ ಚಿತ್ರ

---

## ಬೋಗಸ್ ದಾಖಲೆಯಡಿ ಭೂ ಒಡೆತನ ಯೋಜನೆ ಸೌಲಭ್ಯ
## ತನಿಖೆಗೆ ಜೈ ಕನ್ನಡಿಗರ ಸೇನೆ ಆಗ್ರಹ

• ಉದಯವಾಹಿನಿ, ಕಲಬುರಗಿ

ಜಿಲ್ಲೆಯ ಯಡ್ರಾಮಿ ತಾಲ್ಲೂಕಿನ ಬೀಳವಾರ ಗ್ರಾಮ ಪಂಚಾಯತ್ ವ್ಯಾಪ್ತಿಯ ಜಮಖಂಡಿ ಗ್ರಾಮದಲ್ಲಿ ಬೋಗಸ್ ದಾಖಲಾತಿ ಪಡೆದು ಭೂ ಒಡೆತನ ಯೋಜನೆಯಡಿ ಜಮೀನು ಮಂಜೂರು ಮಾಡಿರುವ ಪ್ರಕರಣದ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಜೈ ಕನ್ನಡಿಗರ ಸೇನೆ ಜಿಲ್ಲಾ ಸಮಿತಿಯ ವತಿಯಿಂದ ಕಲಬುರಗಿಯ ನೂತನ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಲಾಯಿತು. ಸಂಘಟನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ. ದತ್ತು ಹೆಚ್. ಭಾಸಗಿ ನೇತೃತ್ವದಲ್ಲಿ ನೂತನ ಜಿಲ್ಲಾಧಿಕಾರಿಯನ್ನು ಸನ್ಮಾನಿಸಿ ಸ್ವಾಗತಿಸಲಾಯಿತು, ನಂತರ ಸಲ್ಲಿಸಲಾದ ಮನವಿಯಲ್ಲಿ, ಭೂ ಒಡೆತನ ಯೋಜನೆಯಡಿ ಕೆಲವರು ಸಫಾಯಿ ಕರ್ಮಚಾರಿಗಳೆಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಕ್ಕೆ ಅರ್ಜಿ ಸಲ್ಲಿಸಿ ಭೂ ಒಡೆತನ ಯೋಜನೆಯ ಸೌಲಭ್ಯ ಪಡೆದಿದ್ದಾರೆ ಈ ಬಗ್ಗೆ ತನಿಖೆ ಕೈಗೊಳ್ಳುವಂತೆ ಮನವಿಯಲ್ಲಿ ದೂರಲಾಗಿದೆ. ಈ ಕುರಿತು ಈ ಹಿಂದೆಯೇ ಕೆಲವು ಸಂಘಟನೆ ಸಂಬಂಧಿಸಿದ ನಿಗಮಕ್ಕೆ ದೂರು ನೀಡಿದ್ದರೂ ಜಿಲ್ಲಾ ವ್ಯವಸ್ಥಾಪಕರು ಯಾವುದೇ ಕ್ರಮ ಕೈಗೊಂಡಿಲ್ಲ. ಅಲ್ಲದೇ ಒಂದೇ ಗ್ರಾಮದಲ್ಲಿ ಆರು ಜನ ಫಲಾನುಭವಿಗಳಿಗೆ ಭೂ ಒಡೆತನ ಯೋಜನೆಯಡಿ ಜಮೀನು ನೋಂದಣಿ ಮಾಡಿರುವುದು ಸರ್ಕಾರಕ್ಕೆ ವಂಚನೆ ಮಾಡುವಂತಾಗಿದೆ ಎಂದು ಸಂಘಟನೆ ಆರೋಪಿಸಿದೆ.



ಉದಯವಾಹಿನಿ ಚಿತ್ರ

---

## ಯುವಪೀಳಿಗೆ ಮಾದಕ ವ್ಯಸನಕ್ಕೆ ಬಲಿಯಾಗದಂತೆ
## ಜಾಗೃತಿ ಮೂಡಿಸಲು ಜಿಲ್ಲಾಧಿಕಾರಿ ಸೂಚನೆ

• ಉದಯವಾಹಿನಿ, ಮಂಗಳೂರು

ಯುವಪೀಳಿಗೆ ಮಾದಕ ದ್ರವ್ಯಗಳಿಗೆ ಬಲಿಯಾಗುವ ಸಾಧ್ಯತೆ ಹೆಚ್ಚಾಗಿರುವುದರಿಂದ ಚಿಕಿತ್ಸೆ ನೀಡುವುದರ ಜೊತೆಗೆ ಮಕ್ಕಳಿಗೆ ಮುಂದೆ ಸಂಭವಿಸುವ ಅನಾಹುತಗಳ ಬಗ್ಗೆ ಅರಿವು ಮೂಡಿಸಲು ಅಧಿಕಾರಿಗಳು ಹೆಚ್ಚಿನ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ. ಸೂಚಿಸಿದರು. ಶಾಲಾ ಕಾಲೇಜುಗಳಲ್ಲಿ ಮಾದಕ ದ್ರವ್ಯಗಳ ಆಕರ್ಷಣೆಗೊಳಗಾಗುವ ಸಾಧ್ಯತೆ ಹೆಚ್ಚಾಗಿರುವುದರಿಂದ ಇದರ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಬೇಕು. ಮಕ್ಕಳಲ್ಲಿ ಶಿಕ್ಷಣ, ಜಾಗೃತಿ, ಪ್ರೀತಿಯ ಕುಟುಂಬದ ವಾತಾವರಣ, ಕಠಿಣ ಕಾನೂನುಗಳು ಮತ್ತು ಯುವಜನರಲ್ಲಿ ಆರೋಗ್ಯಕರ ಜೀವನ ಶೈಲಿಯನ್ನು ಉತ್ತೇಜಿಸುವ ಮೂಲಕ ಮಾದಕ ವ್ಯಸನವನ್ನು ತಡೆಗಟ್ಟಬಹುದು ಎಂದರು.

ಅಪ್ರಾಪ್ತ ವಯಸ್ಸಿನಲ್ಲಿ ಮಾದಕ ವ್ಯಸನಕ್ಕೆ ತುತ್ತಾದಲ್ಲಿ ಆರೋಗ್ಯದ ಮೇಲೆ ಪರಿಣಾಮ ಬೀರಿ ಮಕ್ಕಳು ಖಿನ್ನತೆಗೆ ಒಳಗಾಗುತ್ತಾರೆ. ಮಕ್ಕಳ ಚಲನವಲನಗಳ ಬಗ್ಗೆ ಪೋಷಕರು ಹಾಗೂ ಶಿಕ್ಷಕರು ನಿಗಾವಹಿಸಬೇಕು. ಇಲ್ಲವಾದಲ್ಲಿ ಕುಟುಂಬದ ಸ್ವಾಸ್ಥ್ಯ ಹಾಳಾಗಲು ಪ್ರಾರಂಭವಾಗುತ್ತದೆ. ಮಕ್ಕಳು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಪ್ರಗತಿ ಹೊಂದಲು ಸಾಧ್ಯವಾಗುವುದಿಲ್ಲ. ಈ ಬಗ್ಗೆ ಪೋಷಕರು, ಶಾಲಾ-ಕಾಲೇಜುಗಳು ಹಾಗೂ ಹಾಸ್ಟೆಲ್‌ಗಳಲ್ಲಿ ಮಕ್ಕಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು. ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಮಾತನಾಡಿ, ಮಾದಕ ವ್ಯಸನವು ವ್ಯಕ್ತಿಯ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಜೀವನವನ್ನು ನಾಶಪಡಿಸುವ ಒಂದು ಗಂಭೀರ ಪಿಡುಗು. ಮಾದಕ ವಸ್ತುವಿನ ಚಟವು ಮೆದುಳಿನ ಮೇಲೆ ದೀರ್ಘಕಾಲದ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ಮಕ್ಕಳಲ್ಲಿ ಅರಿವು ಮೂಡಿಸಬೇಕು. ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಎಲ್ಲಾ ಕಾಲೇಜುಗಳಲ್ಲಿ ಪ್ರತೀ ತಿಂಗಳಿಗೊಮ್ಮೆ ತಪಾಸಣೆ ನಡೆಸಿ ಕೌನ್ಸಿಲಿಂಗ್ ನಡೆಸುವುದರೊಂದಿಗೆ, ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು ಎಂದರು.


ಉದಯವಾಹಿನಿ ಚಿತ್ರ

**ಹಾಸ್ಟೆಲ್‌ಗಳಲ್ಲಿ ಮಕ್ಕಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು**

---

## ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ: ಕುಡಿಯುವ ನೀರಿನ ಸಮಸ್ಯೆಗಳಿದಲ್ಲಿ ಬಾಡಿಗೆ ಕೊಳವೆ ಬಾವಿ ಮೂಲಕ ನೀರು ಪೂರೈಸಿ: ಇಕ್ರಮ್ ಶರೀಫ್

• ಉದಯವಾಹಿನಿ, ಕಲಬುರಗಿ

ಜಿಲ್ಲೆಯ ಯಾವುದೇ ಗ್ರಾಮೀಣ ಮತ್ತು ನಗರ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಕೂಡಲೆ ಬಾಡಿಗೆ ಮೇಲೆ ಕೊಳವೆ ಬಾವಿ ಪಡೆದು ಜನವಸತಿ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಕೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಳೆದ 3-4 ವರ್ಷಗಳ ಸಮಸ್ಯಾತ್ಮಕ ಗ್ರಾಮಗಳನ್ನು ಮೊದಲ ಪಟ್ಟಿ ಮಾಡಿ ಅಲ್ಲಿ ಹೆಚ್ಚು ನಿಗಾ ವಹಿಸಬೇಕು ಮತ್ತು ಎಲ್ಲಿಯೂ ಕುಡಿಯುವ ನೀರಿನ ತೊಂದರೆಯಾಗದಂತೆ ಎಚ್ಚರದಿಂದ ಕಾರ್ಯನಿರ್ವಹಿಸಿ ಎಂದರು. 21ನೇ ಶತಮಾನದಲ್ಲಿ ನಾವಿದ್ದೇವೆ. ಇಂದಿಗೂ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆ ಮಾಡದಿದ್ದರೆ ಅದು ನಮ್ಮ ಆಡಳಿತದ ವೈಫಲ್ಯ ಎಂಬುದನ್ನು ಮರೆಯದಿರಿ. ಗ್ರಾಮೀಣ ಮತ್ತು ನಗರ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿದಲ್ಲಿ ಕೂಡಲೆ ಜಿಲ್ಲಾ ಪಂಚಾಯತ್ ಸಿ.ಇ.ಓ ಮತ್ತು ಡಿ.ಯು.ಡಿ.ಸಿ ಅವರ ಗಮನಕ್ಕೆ ತರಬೇಕು. ಹಳೇ ಬೋರವೆಲ್‌ಗಳಿದಲ್ಲಿ ಅದನ್ನು ಫ್ಲಶ್ ಮಾಡಬೇಕು. ಟ್ಯಾಂಕರ್ ಮೂಲಕ ನೀರು ಪೂರೈಕೆ ನಮ್ಮ ಕೊನೆ ಆದ್ಯತೆಯಾಗಿರಲಿ ಎಂದರು.

ಈಗಾಗಲೆ ಅರ್ಧ ಬೇಸಿಗೆ ಕಳೆದು ಹೋಗಿದೆ. ಇನ್ನು ಒಂದು ತಿಂಗಳ ಕಾಲ ಸವಾಲು ನಮ್ಮ ಮುಂದಿದೆ. ನೀರು ಜೀವ ಜಲ. ಅದಿಲ್ಲದಿದ್ದರೆ ಸಕಲ ಪ್ರಾಣಿಗೂ ಸಂಕಟ ಇದ್ದಂತೆ. ಇನ್ನು ಬೇಸಿಗೆ ಕಾಲದ ಕ್ರಾಪ್ ಸಮೀಕ್ಷೆ ವಾರಾಂತ್ಯದಲ್ಲಿ ಪೂರ್ಣಗೊಳಿಸುವಂತೆ ತಹಶೀಲ್ದಾರರಿಗೆ ಸೂಚನೆ ನೀಡಿದರು. ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಇ.ಇ. ಜಗದೇವ ಜೀವಣಗಿ ಮಾತನಾಡಿ ಜಿಲ್ಲೆಯಲ್ಲಿ 26 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದು, ಬಾಡಿಗೆ ಕೊಳವೆ ಬಾವಿ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ ಎಂದಾಗ ಡಿ.ಸಿ. ಅವರು ಮಾತನಾಡಿ, ರೈತರೊಂದಿಗೆ ಬಾವಿ ಬಾಡಿಗೆ ಒಪ್ಪಂದ ಪತ್ರಕ್ಕೆ ಸಹಿ ಹಾಕಿಸಿಕೊಂಡು ದಾಖಲಾತಿ ನಿರ್ವಹಣೆ ಮಾಡಬೇಕು ಎಂದರು. ಕೆ.ಯು.ಡಿ.ಐ.ಎಫ್.ಸಿ. ಅಧೀಕ್ಷಕ ಅಭಿಯಂತ ಆರ್.ಪಿ.ಜಾಧವ ಮಾತನಾಡಿ, ಕಲಬುರಗಿ ಮಹಾನಗರಕ್ಕೆ ಭೀಮಾದಿಂದ 60 ಎಂ.ಎಲ್.ಡಿ, ಬೆಣ್ಣೆತೋರಾದಿಂದ 22 ಎಂ.ಎಲ್.ಡಿ. ಪಡೆದು ನೀರು ಪೂರೈಸಲಾಗುತ್ತಿದೆ. ಭೀಮಾ ನದಿಯಿಂದ ಮುಂದಿನ 22 ದಿನಕ್ಕೆ ಆಗುವಷ್ಟು ಮಾತ್ರ ನೀರು ಶೇಖರಣೆ ಇದ್ದು, ಮುಂಗಾರು ಮಳೆ ತಡವಾದರೆ ಕುಡಿಯುವ ನೀರಿಗೆ ತೊಂದರೆಯಾಗುತ್ತದೆ. ಹೀಗಾಗಿ ನಾರಾಯಣಪುರ ಜಲಾಶಯದಿಂದ ಮುಂಜಾಗ್ರತೆಯಾಗಿ ನೀರು ಬಿಡಿಸಿಕೊಳ್ಳಬೇಕು ಎಂದರು.


ಉದಯವಾಹಿನಿ ಚಿತ್ರ

---

## ಮಿನಿ ನ್ಯೂಸ್

### ಮೇ 16ರಂದು ಉಚಿತ ಮೂತ್ರಕೋಶ ತಪಾಸಣೆ ಶಿಬಿರ

• ಉದಯವಾಹಿನಿ, ಚಿತ್ರದುರ್ಗ

ಚಿತ್ರದುರ್ಗ ಜಿಲ್ಲಾ ಆಸ್ಪತ್ರೆ ಮತ್ತು ದಾವಣಗೆರೆಯ ಎಸ್.ಎಸ್.ನಾರಾಯಣ ಹೆಲ್ತ್ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಇದೇ ಮೇ 16ರಂದು ನಗರದ ಜಿಲ್ಲಾ ಆಸ್ಪತ್ರೆಯ ಕೊಠಡಿ ಸಂಖ್ಯೆ 15ರಲ್ಲಿ ಉಚಿತ ಮೂತ್ರಕೋಶ ತಪಾಸಣಾ ಶಿಬಿರ ನಡೆಯಲಿದೆ. ಎಸ್.ಎಸ್.ನಾರಾಯಣ ಹೆಲ್ತ್ ಆಸ್ಪತ್ರೆಯ ಮೂತ್ರಕೋಶ ತಜ್ಞ ವೈದ್ಯರಾದ (ಯುರಾಲಾಜಿಸ್ಟ್) ಡಾ.ಯು.ಎಸ್.ಕಾರ್ತಿಕ್ ಅವರು ಅಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವೆಗೆ ಶಿಬಿರದಲ್ಲಿ ಲಭ್ಯವಿದ್ದು, ಮೂತ್ರಕೋಶ ತಪಾಸಣೆ ನಡೆಸುವರು.

ಮೂತ್ರಪಿಂಡದಲ್ಲಿ ಕಲ್ಲು, ಹರಳು (ಕಿಡ್ನಿಸ್ಟೋನ್), ಪದೇ ಪದೇ ಮೂತ್ರ ವಿಸರ್ಜನೆ, ಮೂತ್ರದ ತೊಂದರೆ, ಮೂತ್ರ ವಿಸರ್ಜನೆಯಲ್ಲಿ ತೊಂದರೆ, ಮೂತ್ರದಲ್ಲಿ ಸೋಂಕು, ಉರಿ ಮೂತ್ರ, ಮೂತ್ರದಲ್ಲಿ ರಕ್ತ ಕಾಣಿಸುವುದು, ಪುರುಷರ ಬಂಜೆತನ, ಚಿಕ್ಕ ಮಕ್ಕಳ ಮೂತ್ರದ ತೊಂದರೆಗಳು, ತಡೆದ ಮೂತ್ರ ಇತ್ಯಾದಿ ಮೂತ್ರಕೋಶ ಕಾಯಿಲೆಯ ಲಕ್ಷಣಗಳು ಕಂಡುಬಂದರೆ ಸಾರ್ವಜನಿಕರು ಈ ಸೇವೆಯ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 9535025743, 7259759982 ಗೆ ಸಂಪರ್ಕಿಸಬಹುದು ಎಂದು ಚಿತ್ರದುರ್ಗ ಸಿಎಂಸಿಆರ್‌ಐ ವೈದ್ಯಕೀಯ ಅಧೀಕ್ಷಕ ಡಾ.ಎಸ್.ಪಿ.ರವೀಂದ್ರ ತಿಳಿಸಿದ್ದಾರೆ.

### ಭಾರಿ ಮಳೆ: ಮರ, ವಿದ್ಯುತ್ ಕಂಬ ಧರೆಗೆ

• ಉದಯವಾಹಿನಿ, ಕಲಘಟಗಿ

ಪಟ್ಟಣ ಸೇರಿದಂತೆ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಸಂಜೆ ಭಾರಿ ಮಳೆ ಗಾಳಿಗೆ ಅಲ್ಲಲ್ಲಿ ವಿದ್ಯುತ್ ಕಂಬಗಳು ಉರುಳಿದ್ದು, ಗಿಡ ಮರಗಳು ಬಿದ್ದು ಹಾನಿ ಸಂಭವಿಸಿದೆ. ದ್ಯಾವನಕೊಂಡ ಗ್ರಾಮದಲ್ಲಿ ಮಳೆ ಗಾಳಿಗೆ ಹುಣಸೆ ಮರ ಬಿದ್ದು ಫಕ್ಕೀರಪ್ಪ ಬಡಪ್ಪನವರ ಅವರ ಟ್ರ್ಯಾಕ್ಟರ್‌ಗೆ ಹಾಗೂ ಸಿದ್ದಪ್ಪ ಬಶೆಟ್ಟಪ್ಪನವರ, ಚನ್ನಪ್ಪ ಹರಿಜನ ಅವರ ಮನೆಯ ಹೆಂಚು, ತಗಡು ಹಾಗೂ ಗೋಡೆಗಳಿಗೆ ಹಾನಿಯಾಗಿದೆ. ಅದೇ ಗ್ರಾಮದಲ್ಲಿ ಇನ್ನೊಂದು ಗೊಂಡಚ್ಚಿ ಮರ ಬಿದ್ದು ಶಂಕರಗೌಡ ಬಾವಿಕಟ್ಟಿ ಅವರ ಮನೆಗೆ ಹಾನಿಯಾಗಿದೆ. ಜೋರಾಗಿ ಗಾಳಿ ಬೀಸಿದ್ದರಿಂದ ರೈತರ ಜಮೀನಿನಲ್ಲಿರುವ ಮರಗಳು ಹಾಗೂ ಅಲ್ಲಲ್ಲಿ ವಿದ್ಯುತ್ ಕಂಬಗಳು ಬಿದ್ದು, ತಾಲ್ಲೂಕಿನ ಮಲಕನಕೊಪ್ಪ, ದೇವಿಕೊಪ್ಪ ಗ್ರಾಮ ಸೇರಿದಂತೆ ಹಲವೆಡೆ ವಿದ್ಯುತ್ ಸ್ಥಗಿತವಾಗಿತ್ತು.

### ಮಳೆಯಿಂದ ರೈಲು ಸಂಚಾರ ವ್ಯತ್ಯಯ

• ಉದಯವಾಹಿನಿ, ಹುಬ್ಬಳ್ಳಿ

ಧಾರವಾಡ, ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಿರುಗಾಳಿ, ಗುಡುಗು ಮತ್ತು ಸಿಡಿಲು ಸಹಿತ ಧಾರಾಕಾರ ಮಳೆಯಾಯಿತು. ಹಲವು ಕಡೆ ವಿದ್ಯುತ್ ಕಂಬಗಳಿಗೆ ಹಾನಿಯಾದರೆ, ಕೆಲ ಕಡೆ ಮರಗಳು ಉರುಳಿ ಬಿದ್ದವು. ಬಹುತೇಕ ಕಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿತು.

ಬೆಳಗಾವಿ ಜಿಲ್ಲೆಯ ರಾಮದುರ್ಗ ಮತ್ತು ಖಾನಾಪುರ ತಾಲ್ಲೂಕಿನಲ್ಲಿ ಮಳೆಯಾಯಿತು. ಖಾನಾಪುರ ತಾಲ್ಲೂಕಿನ ನಾಗರಗಾಳಿ-ತಾವರಗಟ್ಟಿ ರೈಲು ನಿಲ್ದಾಣಗಳ ಮಧ್ಯೆ ಇರುವ ಅರಣ್ಯ ಪ್ರದೇಶದಲ್ಲಿನ ಹಳಿ ಮೇಲೆ ಬೃಹತ್ ಮರ ಬಿದ್ದು, ಅಳ್ನಾವರ-ಲೋಂಡಾ ಮಾರ್ಗದಲ್ಲಿ ಸಂಚರಿಸುವ ಕೊಲ್ಲಾಪುರ-ತಿರುಪತಿ ಹರಿಪ್ರಿಯಾ ಎಕ್ಸ್‌ಪ್ರೆಸ್ ರೈಲು ಸೇರಿ ಹಲವು ರೈಲುಗಳ ಸಂಚಾರಕ್ಕೆ ವ್ಯತ್ಯಯ ಉಂಟಾಯಿತು. ನಾಗರಗಾಳಿ ಮತ್ತು ತಾವರಗಟ್ಟಿ ನಿಲ್ದಾಣಗಳ ಸಿಬ್ಬಂದಿ ಘಟನಾ ಸ್ಥಳಕ್ಕೆ ಬಂದು ಪರಿಶೀಲಿಸಿದರು. ಲೋಂಡಾದಲ್ಲಿ ಸಾಂಗ್ಲಿ ಬೆಂಗಳೂರು ಮಾರ್ಗದಲ್ಲಿ ಸಂಚರಿಸುವ ರಾಣಿ ಚನ್ನಮ್ಮ ಎಕ್ಸ್‌ಪ್ರೆಸ್ ರೈಲು, ಖಾನಾಪುರ ನಿಲ್ದಾಣದಲ್ಲಿ ಬೆಳಗಾವಿ-ಮೈಸೂರು ರೈಲು ಸಂಚಾರ ತಡೆಹಿಡಿಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಗರ್ಭಕಂಠ ಕ್ಯಾನ್ಸರ್‌ಗೆ ಎಚ್‌ಪಿವಿ ಲಸಿಕೆ ಸಂಜೀವಿನಿ

• ಉದಯವಾಹಿನಿ, ಚಿಕ್ಕಮಗಳೂರು

ಮಹಿಳೆಯರನ್ನು ಕಾಡುತ್ತಿರುವ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಎಚ್‌ಪಿವಿ ಲಸಿಕೆ ಅತ್ಯಂತ ಪರಿಣಾಮಕಾರಿ. ಪ್ರತಿಯೊಬ್ಬರಿಗೂ ಈ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಚ್.ಎಸ್. ಕೀರ್ತನಾ ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲ್ಲೂಕು ಆರೋಗ್ಯ ಇಲಾಖೆ ವತಿಯಿಂದ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಿದ್ದ ಎಚ್‌ಪಿವಿ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಸ್ವಾತಂತ್ರ್ಯ ಸಿಕ್ಕ ನಂತರ ಭಾರತೀಯರ ಸರಾಸರಿ ಜೀವಿತಾವಧಿ ಕೇವಲ 40ರಿಂದ 50 ವರ್ಷಗಳಷ್ಟಿತ್ತು. ಅಂದು ರೋಗ ನಿರೋಧಕ ಶಕ್ತಿ ಕಡಿಮೆ ಇದ್ದ ಕಾರಣ ಸಾಂಕ್ರಾಮಿಕ ಕಾಯಿಲೆಗಳಿಗೆ ಜನರು ಬಲಿಯಾಗುತ್ತಿದ್ದರು. ಆದರೆ, ಪೋಲಿಯೊ, ಟಿ.ಬಿ ರೀತಿಯ ರೋಗಗಳನ್ನು ಲಸಿಕೆಗಳ ಮೂಲಕ ಯಶಸ್ವಿಯಾಗಿ ತಡೆಗಟ್ಟಲಾಗಿದೆ. ಇದರ ಪರಿಣಾಮ ಜೀವಿತಾವಧಿ 60-70 ವರ್ಷಕ್ಕೆ ಏರಿಕೆಯಾಗಿದೆ. ಹಾಗೆಯೇ ಪ್ರಸ್ತುತ ಮಹಿಳೆಯರಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿರುವ ಗರ್ಭಕಂಠದ ಕ್ಯಾನ್ಸರ್ ತಡೆಯಲು ಈ ಎಚ್‌ಪಿವಿ ಲಸಿಕೆ ಶ್ರೀರಕ್ಷೆ ಎಂದರು.


ಉದಯವಾಹಿನಿ ಚಿತ್ರ

---

# ಹೆಚ್‌ಪಿವಿ ಲಸಿಕಾಕರಣ ಅಭಿಯಾನ: ಶೇ.100 ಪ್ರಗತಿ ಸಾಧಿಸಿ: ಜಿ.ಪಂ ಸಿಇಒ

### ಹೆಣ್ಣು ಮಕ್ಕಳಲ್ಲಿ ಕಾಣಿಸಿಕೊಳ್ಳುವ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿರುವ ಲಸಿಕಾಕರಣ

• ಉದಯವಾಹಿನಿ ಚಿತ್ರದುರ್ಗ

ಹೆಣ್ಣು ಮಕ್ಕಳಲ್ಲಿ ಕಾಣಿಸಿಕೊಳ್ಳುವ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿರುವ ಹೆಚ್‌ಪಿವಿ (ಹ್ಯೂಮನ್ ಪ್ಯಾಪಿಲೋಮಾ ವೈರಸ್) ಲಸಿಕಾಕರಣ ಅಭಿಯಾನವನ್ನು ಯಶಸ್ವಿಗೊಳಿಸುವ ಮೂಲಕ ನಿಗಧಿತ ಸಮಯದೊಳಗೆ ಶೇ.100ರಷ್ಟು ಪ್ರಗತಿ ಸಾಧಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎಸ್.ಆಕಾಶ್ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಮಟ್ಟದ ಹೆಚ್‌ಪಿವಿ ಲಸಿಕಾಕರಣದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹೆಚ್‌ಪಿವಿ ಲಸಿಕಾಕರಣದ ಅಭಿಯಾನ ಯಶಸ್ವಿಗೆ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ಮಾಡುವ ಮೂಲಕ ಲಸಿಕಾ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಯಾವುದೇ ಅರ್ಹ ಫಲಾನುಭವಿಯು ಲಸಿಕೆಯಿಂದ ವಂಚಿತರಾಗಬಾರದು ಎಂದು ತಾಕೀತು ಮಾಡಿದರು.

**ಶಿಕ್ಷಕರ ಹಾಗೂ ಪೋಷಕರ ಸಭೆ ನಡೆಸಿ:** ಹೆಚ್‌ಪಿವಿ ಲಸಿಕೆಯ ಮಹತ್ವ ಹಾಗೂ ಜಾಗೃತಿ ಕುರಿತಂತೆ ಇದೇ ಮೇ 25ರಿಂದ 30 ರವರೆಗೆ ಶಿಕ್ಷಕರು ಹಾಗೂ ಪೋಷಕರ ಸಭೆ ನಡೆಸಬೇಕು ಎಂದು ಜಿ.ಪಂ ಸಿಇಒ ಡಾ.ಎಸ್. ಆಕಾಶ್ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಆರ್. ಮಂಜುನಾಥ್ ಅವರಿಗೆ ಸೂಚನೆ ನೀಡಿದರು.

14 ವರ್ಷದೊಳಗಿನ ಅರ್ಹ ಹೆಣ್ಣು ಮಕ್ಕಳ ಸಂಖ್ಯೆಯನ್ನು ಗುರುತಿಸಲು ಶಾಲೆಗಳ ಲೈನ್‌ಲಿಸ್ಟ್ ಮಾಡಿಕೊಂಡು, ವಿದ್ಯಾರ್ಥಿನಿಯರ ಪಟ್ಟಿ ಸಿದ್ದಪಡಿಸಿಕೊಳ್ಳಬೇಕು ಹಾಗೂ ಜಿಲ್ಲೆಯ ಎಲ್ಲಾ ಸರ್ಕಾರಿ ಉನ್ನತೀಕರಿಸಿದ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಪ್ರೌಢಶಾಲೆಗಳು ಹಾಗೂ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 8 ಮತ್ತು 9ನೇ ತರಗತಿ ವಿದ್ಯಾರ್ಥಿನಿಯರ ಪೋಷಕರು ಹಾಗೂ ಶಿಕ್ಷಕರ ಸಭೆ ನಡೆಸಿ ಜಾಗೃತಿ ಮೂಡಿಸಲು ಸಲಹೆ ನೀಡಿದರು. ಶಿಕ್ಷಕರು ಹಾಗೂ ಪೋಷಕರ ಸಭೆಗೂ ಮುನ್ನ ಇದೇ ಮೇ 16ರಂದು ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರೌಢಶಾಲೆ ಮುಖ್ಯ ಶಿಕ್ಷಕರಿಗೆ ಓರಿಯಂಟೇಷನ್ ಕಾರ್ಯಾಗಾರ ಆಯೋಜನೆ ಮಾಡುವಂತೆ ತಿಳಿಸಿದರು.

ಲಸಿಕಾಕರಣದ ಪಾರದರ್ಶಕತೆಗಾಗಿ ಯು-ವಿನ್ ಪೋರ್ಟಲ್ ಮತ್ತು ಇ-ವಿನ್ ತಂತ್ರಜ್ಞಾನ ಬಳಸಲಾಗುತ್ತಿದೆ. ಇದರಿಂದ ಲಸಿಕೆಯ ದಾಸ್ತಾನು ಮತ್ತು ಫಲಾನುಭವಿಗಳ ವಿವರಗಳನ್ನು ಡಿಜಿಟಲ್ ರೂಪದಲ್ಲಿ ಮೇಲ್ವಿಚಾರಣೆ ಮಾಡಲು ಸಾಧ್ಯವಾಗುತ್ತಿದೆ. ಜಿಲ್ಲೆಯ ಅಂದಾಜು ಶೇ.1ರಷ್ಟು ಜನಸಂಖ್ಯೆ ಈ ವಯೋಮಿತಿಯಲ್ಲಿದ್ದು, ಅಂದಾಜು 18 ಸಾವಿರ ಫಲಾನುಭವಿಗಳ ಗುರಿ ಹೊಂದಲಾಗಿದೆ. ಪ್ರಸ್ತುತ ಶೇ.43ರಷ್ಟು ಪ್ರಗತಿ ಸಾಧಿಸಲಾಗಿದ್ದು, ರಾಜ್ಯದಲ್ಲಿ ಜಿಲ್ಲೆಯು 15ನೇ ಸ್ಥಾನದಲ್ಲಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಬೇಸಿಗೆ ರಜೆಯ ಅವಧಿಯಿಂದಾಗಿ ಹೆಚ್‌ಪಿವಿ ಲಸಿಕಾಕರಣ ಅಭಿಯಾನ ಸ್ವಲ್ಪ ಮಂದಗತಿಯಲ್ಲಿ ಸಾಗಿದ್ದು, ಜೂನ್ ಮೊದಲ ವಾರದೊಳಗೆ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಡಾ.ರಂಗಸ್ವಾಮಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಜಿ.ಪಿ.ರೇಣುಪ್ರಸಾದ್, ಜಿಲ್ಲಾ ಸಾಂಖ್ಯಿಕ ಅಧಿಕಾರಿ ರವಿಕುಮಾರ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಆರ್.ಮಂಜುನಾಥ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರೇಖಾ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಹೆಚ್.ದಿವಾಕರ್, ಜಿಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಕಾಶೀ, ಚಿತ್ರದುರ್ಗ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬಿ.ವಿ.ಗಿರೀಶ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ಪ್ರಗತಿ ಪರಿಶೀಲನಾ ಸಭೆ


ಉದಯವಾಹಿನಿ ಚಿತ್ರ

> **ಹೆಚ್‌ಪಿವಿ ಲಸಿಕಾ ಅಭಿಯಾನ ಈಗಾಗಲೇ ಜಿಲ್ಲೆಯಲ್ಲಿ ಕಳೆದ ಮಾರ್ಚ್ ಮಾಹೆಯಿಂದ ಪ್ರಾರಂಭವಾಗಿದ್ದು, ಪ್ರಸ್ತುತ 14 ವರ್ಷ ಪೂರೈಸಿದ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಈ ಲಸಿಕೆ ನೀಡಲಾಗುತ್ತಿದೆ. ಪ್ರತಿ ಫಲಾನುಭವಿಗೆ 0.5 ಎಂಲ್‌ನಷ್ಟು ಲಸಿಕೆಯನ್ನು ಎಡಗೈ ಮೇಲ್ಭಾಗಕ್ಕೆ ಸ್ನಾಯುಗಳ ಮೂಲಕ ನೀಡಲಾಗುತ್ತಿದೆ. ಲಸಿಕೆಯನ್ನು 2 ರಿಂದ 8 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಸಂರಕ್ಷಿಸಲಾಗುತ್ತಿದೆ. ರಾಜ್ಯ ಮತ್ತು ಪ್ರಾದೇಶಿಕ ಲಸಿಕಾ ಕೇಂದ್ರಗಳ ಮೂಲಕ ಜಿಲ್ಲೆಗೆ ಸರಬರಾಜು ಮಾಡಲಾಗುತ್ತಿದೆ.**
> -ಡಾ.ಡಿ.ಎಂ.ಅಭಿನವ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ. ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ. ಹಣದ ಪ್ರಯೋಜನವನ್ನು ಪಡೆಯುವ ಸಾಧ್ಯತೆ ಇದೆ

**ವೃಷಭ** ಇಂದು ನೀವು ಸೀಮಿತ ತಾಳ್ಮೆ ಹೊಂದಿರುತ್ತೀರಿ ಆದರೆ ಕಠಿಣ ಅಥವಾ ಅಸಮತೋಲಿತ ಪದಗಳು ನಿಮ್ಮ ಸುತ್ತಲಿನ ಜನರ ಅಸಮಾಧಾನಕ್ಕೆ ಕಾರಣವಾಗಬಹುದಾದ್ದರಿಂದ ಎಚ್ಚರಿಕೆಯಿಂದಿರಿ.

**ಮಿಥುನ** ನಿಮ್ಮ ಅಹಾರಕ್ರಮದ ಬಗ್ಗೆ ವಿಶೇಷವಾಗಿ ಮೈಗ್ರೇನ್ ರೋಗಿಗಳು ಸೂಕ್ತ ಎಚ್ಚರ ತೆಗೆದುಕೊಳ್ಳಬೇಕು. ಅವರು ತಮ್ಮ ಊಟ ತಪ್ಪಿಸಿಕೊಂಡಲ್ಲಿ ಅದು ಅವರಿಗೆ ಅನಗತ್ಯ ಭಾವನಾತ್ಮಕ ಒತ್ತಡವನ್ನು ಉಂಟುಮಾಡಬಹುದು.

**ಕರ್ಕಾಟಕ** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು.

**ಸಿಂಹ** ನಿಮ್ಮಲ್ಲಿ ಕೆಲವರು ಇದು ಬಲವಂತವಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬೇಕಾಗಬಹುದು, ಇದು ನಿಮ್ಮನ್ನು ಉದ್ವೇಗಭರಿತರನ್ನಾಗಿಯೂ ಹಾಗೂ ಗಾಬರಿಯಿರುವವರನ್ನಾಗಿಯೂ ಮಾಡಬಹುದು.

**ಕನ್ಯಾ** ನಗು ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ಬ್ಯಾಂಕ್ ವ್ಯವಹರಗಳಲ್ಲಿ ಕಾಳಜಿ ವಹಿಸಬೇಕು. ನಿಮ್ಮ ಸಂಗಾತಿಯ ಆರೋಗ್ಯದ ನಿಮ್ಮನ್ನು ಚಿಂತೆಗೀಡುಮಾಡಬಹುದು.

**ತುಲಾ** ನಿಮ್ಮ ಸಂಬಂಧಿಗಳೊಂದಿಗೆ ಏನಾದರೂ ವಿಶೇಷವಾದದ್ದನ್ನು ಯೋಜಿಸಿ. ಅವರು ಅದನ್ನು ಮೆಚ್ಚುತ್ತಾರೆ. ನಿಮ್ಮ ಶಕ್ತಿ ಮತ್ತು ಉತ್ಸಾಹವನ್ನು ಮರಳಿ ತರುವ ಒಂದು ಆನಂದಮಯ ಪ್ರವಾಸಕ್ಕೆ ಹೋಗುವ ಸಾಧ್ಯತೆಯಿದೆ.

**ವೃಶ್ಚಿಕ** ಮನೆಯ ಅಗತ್ಯಗಳನ್ನು ನೋಡುತ್ತಾ, ಇಂದು ನೀವು ನಿಮ್ಮ ಜೀವನ ಸಂಗಾತಿಯೊಂದಿಗೆ ಯಾವುದೇ ಅಮೂಲ್ಯ ವಸ್ತುವನ್ನು ಖರೀದಿಸಬಹುದು, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು.

**ಧನಸ್ಸು** ನೀವು ಇತರರೊಡನೆ ಖುಷಿಯ ಕ್ಷಣಗಳನ್ನು ಹಂಚಿಕೊಳ್ಳುತ್ತಿದ್ದಂತೆ ನಿಮ್ಮ ಆರೋಗ್ಯ ಅರಳುತ್ತದೆ. ಆದರೆ ಇದನ್ನು ನಿರ್ಲಕ್ಷಿಸುವುದು ನಿಮಗೆ ತೊಂದರೆ ತರುತ್ತದೆ.

**ಮಕರ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ವಿದೇಶದಲ್ಲಿ ಮಲಗಿರುವ ನಿಮ್ಮ ಭೂಮಿಯನ್ನು ಉತ್ತಮ ಬೆಲೆಗೆ ಮಾರಾಟ ಮಾಡಬಹುದು, ಅದು ನಿಮಗೆ ಲಾಭದಾಯಕವಾಗಲಿದೆ.

**ಕುಂಭ** ಸೃಜನಶೀಲ ಕ್ಷೇತ್ರಗಳಲ್ಲಿರುವವರು ಬಹಳ ದಿನಗಳಿಂದ ಕಾಯುತ್ತಿದ್ದ ಪ್ರಸಿದ್ಧಿ ಮತ್ತು ಗುರುತಿಸುವಿಕೆಯನ್ನು ಪಡೆಯುವ ಒಂದು ಯಶಸ್ವಿ ದಿನ. ನಿಮ್ಮ ಗತಕಾಲದ ಯಾರೋ ನಿಮ್ಮನ್ನು ಸಂಪರ್ಕಿಸಬಹುದು.

**ಮೀನ** ನಿಮ್ಮಲ್ಲಿ ಶಕ್ತಿಯ ಕೊರತೆಯಿರದೇ ಆತ್ಮವಿಶ್ವಾಸದ ಕೊರತೆಯಿರುವುದರಿಂದ ನಿಮ್ಮ ನಿಜವಾದ ಸಾಮರ್ಥ್ಯವನ್ನು ಅರಿತುಕೊಳ್ಳಿ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ.

### ವಚನ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಡಾ.ಚನ್ನಬಸವ ಪಟ್ಟದೇವರ ವಿದ್ಯಾರ್ಥಿ ನಿಧಿ 2026 ನೇ ಸಾಲಿನ ಪ್ರತಿಭಾ ಪುರಸ್ಕಾರ

# ಪ್ರತಿಭಾವಂತರಿಗೆ ಅವಕಾಶಗಳಿವೆ; ಸದುಪಯೋಗ ಪಡೆದುಕೊಳ್ಳಿ

• ಉದಯವಾಹಿನಿ ಔರಾದ

ಪ್ರತಿಭಾವಂತರಿಗೆ ಹಲವು ಕ್ಷೇತ್ರಗಳಲ್ಲಿ ಅವಕಾಶಗಳಿವೆ, ತಮ್ಮ ಪ್ರತಿಭೆಗೆ ತಕ್ಕ ಕ್ಷೇತ್ರ ಆಯ್ಕೆ ಮಾಡಿಕೊಂಡರೆ ಉತ್ತಮ ಸಾಧನೆ ಸಾಧಿಸಬಹುದೆಂದು ಉದ್ಯಮಿ ಅವರ ಎಡವೆ ನುಡಿದರು.

ಇತ್ತಿಚಿಗೆ ಪಟ್ಟಣದ ಅನುಭವ ಮಂಟಪದಲ್ಲಿ ವಚನ ಚಾರಿಟೇಬಲ್ ಟ್ರಸ್ಟ್ ಔರಾದ ಆಯೋಜಿಸಿರುವ ಡಾ.ಚನ್ನಬಸವ ಪಟ್ಟದ್ದೇವರ ವಿದ್ಯಾರ್ಥಿ ನಿಧಿ 2026 ನೇ ಸಾಲಿನ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಚನ ಚಾರಿಟೇಬಲ್ ಟ್ರಸ್ಟ್ ಔರಾದ ಶಾಖೆ ಅದ್ಬುತ ಕಾರ್ಯ ಮಾಡುತ್ತಿದ್ದೆ ವರ್ಷ ಪೂರ್ತಿ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ, ವೈಜ್ಞಾನಿಕ, ವೈಚಾರಿಕ ಕಾರ್ಯಕ್ಕೆ ಕೈ ಜೊಡಿಸುತ್ತಿರುವದು ಶ್ಲಾಘನೀಯ ಕಾರ್ಯ. ತಾಲ್ಲೂಕಿನ ಪ್ರತಿಭಾವಂತ ಮಕ್ಕಳಿಗೆ ಗುರುತಿಸಿ ವಚನ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಪ್ರೋತ್ಸಾಹಿಸಿ ನಗದು ಬಹುಮಾನ ನೀಡುತ್ತಿರುವುದು ಸಂತೋಷದ ವಿಷಯ ಎಂದು ಕಾರ್ಯಕ್ರಮದ ಮುಖ್ಯ ಅತಿಥಿ ತಾಲ್ಲೂಕು ಪಂಚಾಯತ ಸಹಾಯಕ ನಿರ್ದೇಶಕ ಶಿವಕುಮಾರ್ ಘಾಟೆ ನುಡಿದರು.

**5 ಸಾವಿರ ಕುಟುಂಬಗಳಿಗೆ ಆರ್ಥಿಕ ಸದೃಢ**

ವಚನ ಚಾರಿಟೇಬಲ್ ಟ್ರಸ್ಟ್ ಜಿಲ್ಲಾ ಅಧ್ಯಕ್ಷ ಶಿವಶಂಕರ ಟೊಕರೆ ಮಾತನಾಡಿ ವಚನ ಸಂಸ್ಥೆ ಹೊಸ ಪರಿಕಲ್ಪನೆ ಇಟ್ಟುಕೊಂಡು ಜಿಲ್ಲೆಯಲ್ಲಿ ಸುಮಾರು 5 ಸಾವಿರ ಕುಟುಂಬಗಳಿಗೆ ಆರ್ಥಿಕ ಸದೃಢ ನೀಡುತ್ತ ಅನೇಕ ಸಮಾಜಿಕ ,ದಾಸೋಹ, ಮಕ್ಕಳ ಶೈಕ್ಷಣಿಕ, ಸಮಾಜದಲ್ಲಿ ನೈತಿಕ ಹೊಣೆಗಾರಿಕೆಯ ಕಾರ್ಯ ಹೇಗೆ ನಿರ್ವಹಿಸಬೇಕು ಎಂಬುದನ್ನು ವಚನ ಸಂಸ್ಥೆ ಮಾಡುತ್ತಿದೆ ಆಶ್ರಯ ಇಲ್ಲದ ಪ್ರತಿಭಾವಂತ ಮಕ್ಕಳಿಗೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ನಮ್ಮ ಸಂಸ್ಥೆ ವತಿಯಿಂದ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಧನ ಸಹಾಯ ಹಾಗೂ ಪ್ರಮಾಣ ಪತ್ರ ನೀಡಿ ಗೌರವಿಸುತ್ತಿದ್ದೆವೆ ಎಂದು ಹೇಳಿದರು.ಡಿ.ಡಿ ಬೊಳೆಗಾವೆ ಅಧ್ಯಕ್ಷೀಯ ನುಡಿ ನುಡಿದರು ಔರಾದ ವಚನ ಚಾರಿಟೇಬಲ್ ಟ್ರಸ್ಟ್ ಔರಾದ ಶಾಖೆ ವತಿಯಿಂದ ನಮ್ಮ ಕೇಲವು ಸದಸ್ಯರು ಸೇರಿ ಪ್ರತಿ ತಿಂಗಳು 5 ನೂರು ರೂಪಾಯಿ ಸಂಗ್ರಹಿಸಿ ತಾಲ್ಲೂಕಿನ ಬಡತನದಲ್ಲಿ ಕೊರಗುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ,ಆರೋಗ್ಯದಿಂದ ಬಳಲುತ್ತಿರುವ ರೋಗಿಗಳಿಗೆ, ಅತಿ ಕಷ್ಟದಲ್ಲಿ ಪರಿವಾರ ನಮ್ಮ ಕೈಲಾದ ಸಹಾಯಹಸ್ತ ಚಾಚುತ್ತಿದ್ದೇವೆಂದು ಹೇಳಿದರು.

ವಚನ ಸಮೂಹ ಸಂಸ್ಥೆಯ ಮುಖ್ಯಸ್ಥ ಅಲ್ಲಮಪ್ರಭು ನಾವದಗೀರೆ ಮಾತನಾಡಿ ವಿದ್ಯಾರ್ಥಿ ಜೀವನದಲ್ಲಿ ಮೌಲ್ಯಗಳ ಜೊತೆಯಲ್ಲಿ ಸಾಮಾಜಿಕ ಜ್ಞಾನ ಮುಖ್ಯ. ನಿಮ್ಮ ಅಂಕಗಳಿಂದ ನಿಮ್ಮ ಮುಂದಿನ ಪ್ರಯತ್ನ ನಿಲ್ಲಿಸದಿರಿ ಅಂಕಗಳಿಗಿಂತ ಜ್ಞಾನ ಸಾಮಾಜಿಕ ಹೊಣೆಗಾರಿಕೆ ಮುಖ್ಯವಾದದ್ದು, ನಿಮ್ಮ ಪ್ರಾಮಾಣಿಕ ಅಧ್ಯಯನ ನಿರಂತರ ಮುಂದುವರಿಯಲಿ, ಸಾಧನೆಗೆ ಅಂಕಗಳೇ ಅಂತಿಮವಲ್ಲ, ಅದೆಷ್ಟೋ ಸಲ ಹೆಚ್ಚಿನ ಅಂಕ ಪಡೆದವರು ವಿಫಲರಾಗಿದ್ದು, ಕಡಿಮೆ ಅಂಕ ಪಡೆದವರು ಉನ್ನತ ಸಾಧನೆ ಮಾಡಿದವರನ್ನು ಕಂಡಿದ್ದೇವೆ. ನಿರಂತರ ಪ್ರಯತ್ನ ಒಂದಿದ್ದರೇ ಯಾವುದೇ ಕ್ಷೇತ್ರದಲ್ಲಾದರೂ ಸಾಧನೆ ಮಾಡಬಹುದೆಂದು ತಿಳಿಸಿದರು.

ಅಮರೇಶ್ವರ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ ಪ್ರೇಮಾ ಹೂಗಾರ, ವಚನ ಸಂಸ್ಥೆಯ ಪ್ರಮುಖರಾದ ಪ್ರಕಾಶ ಗಂದಿಗುಡೆ, ಮತ್ತು ವಚನ ಚಾರಿಟೇಬಲ್ ಸೊಸೈಟಿ ಸದಸ್ಯರಾದ ಮಲ್ಲಿಕಾರ್ಜುನ ಟಂಕಸಾಲೆ, ಡಿ ಡಿ ಬೊಳೆಗಾವೆ, ಜಗನಾಥ ಮುಲಗೆ, ಸೂರ್ಯಕಾಂತ ವಲ್ಲೆಪೂರೆ, ಶಿವರಾಜ ಶೆಟಕಾರ, ಮಲ್ಲಿಕಾರ್ಜುನ ಹಿಪ್ಪಳಗಾವೆ, ಗಜಾನನ್ ಮಳ್ಳಾ, ಧನರಾಜ ಪೀತ್ರೆ, ಉಪಸ್ಥಿತರಿದ್ದರು.

ವಚನ ಚಾರಿಟೇಬಲ್ ಸೊಸೈಟಿ, ಔರಾದ ವತಿಯಿಂದ ಡಾ.ಚನ್ನಬಸವ ಪಟ್ಟದ್ದೇವರ ಹೆಸರಿನಲ್ಲಿ ವಿದ್ಯಾರ್ಥಿ ನಿಧಿ ಸ್ಥಾಪಿಸಿ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವ ಸಮಾಜಮುಖಿ ಕಾರ್ಯ ಶ್ಲಾಘನೀಯವಾದದೆಂದು ಭಾಲ್ಕಿ ಹಿರೇಮಠ ಸಂಸ್ಥಾನ ಪೂಜ್ಯರಾದ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ಮತ್ತು ಗುರುಬಸವ ಪಟ್ಟದ್ದೇವರು ಹರ್ಷ ವ್ಯಕ್ತಪಡಿಸಿದ್ದಾರೆ.



ಉದಯವಾಹಿನಿ ಚಿತ್ರ

> ಔರಾದ ತಾಲ್ಲೂಕಿನ ಸಮಾನ ಮನಸ್ಕರು ಸೇರಿ ಸಾಮಾಜಿಕ, ಶೈಕ್ಷಣಿಕ, ಹಾಗೇ ವೈಜ್ಞಾನಿಕ, ವೈಚಾರಿಕ ವಿಚಾರಧಾರೆ ಬಿತ್ತುವ ಉದ್ದೇಶದಿಂದ ಪ್ರತಿಯೊಬ್ಬರು ತಿಂಗಳಿಗೆ ಐದು ನೂರು ಜಮಾ ಮಾಡಿ, ಈ ಹಣದಿಂದಲೇ ಇಂತಹ ಸಮಾಜಮುಖಿ ಕಾರ್ಯ ಮಾಡುತ್ತಿದ್ದೇವೆ. ಪ್ರತಿ ವರ್ಷ ವಿದ್ಯಾರ್ಥಿಗಳಿಗೆ ಪ್ರೇರಣೆ ಆಗಲಿ ಎನ್ನುವ ಉದ್ದೇಶದಿಂದ ಶೈಕ್ಷಣಿಕ ಕ್ರಾಂತಿಗೆ ಮುನ್ನುಡಿ ಬರೆದಿರುವ ಭಾಲ್ಕಿಯ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರ ವಿದ್ಯಾರ್ಥಿ ನಿಧಿ ಎಂದು ಹೆಸರಿಡಲಾಗಿದೆ. ಇನ್ನೂ ಮುಂದೆ ಪ್ರತಿವರ್ಷ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗುವುದು. -ಡಿ.ಡಿ.ಬೋಳೆಗಾವೆ ತಾಲ್ಲೂಕ ಅಧ್ಯಕ್ಷರು ಔರಾದ

**ವಿದ್ಯಾರ್ಥಿ ನಿಧಿಗೆ ಆಯ್ಕೆಗೊಂಡವರು**

1. ಸಿದ್ದಮ್ಮಾ ಬಸಪ್ಪ ಸಿದ್ಧರಾಮೇಶ್ವರ ಕಾಲೇಜು ಔರಾದ
2. ವಚನಶ್ರೀ ವಿಜಯಕುಮಾರ (ಆದರ್ಶ ಶಾಲೆ ಔರಾದ್)
3. ಸಂಜನಾ ಸಂತೋಷ ಬಿರಾದಾರ (ಪತ್ರಿಸ್ವಾಮಿ ಕಾಲೇಜುಔರಾದ)
4. ಗುರುಬಸವ ಚಂದ್ರಕಾಂತ (ನವಚೇತನ ಗುರುಕುಲ ಔರಾದ)
5. ಶೇಖರ ಹಣಮಂತ (ಸರ್.ಎಂ.ವಿಶ್ವೇಶ್ವರಯ್ಯ ಶಾಲೆ ಔರಾದ)
6. ಅಂಬಿಕಾ ರಾಜಕುಮಾರ (ಸ.ಪ್ರೌ.ಶಾಲೆ ಧೂಪತಮಾಹಾಗಾಂವ)
7. ಅಸ್ಮಿತಾ ಶಾಮಸುಂದರ (ಆದರ್ಶ ಶಾಲೆ ಔರಾದ ಔರಾದ)
8. ಅಪೂರ್ವ ಮಾರುತಿ (ಸ.ಪ್ರೌ.ಶಾ ಯನಗುಂದಾ)
9. ಭಾಗ್ಯವತಿ ಅಶೋಕ (ಸ.ಪ್ರೌ. ಶಾಲೆ ಏಕಲಾರ ಔರಾದ)
10. ಅನುಷ್ಕಾ ತಂದೆ ರಾಮಣ್ಣಾ (ಸುಭಾಷ್ ಚಂದ್ರಭೋಸ ಶಾಲೆ)


## ಬಗರ್ ಹುಕ್ಕುಂ ಸಾಗುವಳಿ ಸಕ್ರಮಿಕರಣ ಸಭೆ ಕರೆಯಲು
## ಶಾಸಕರಿಗೆ ಮನವಿ ಸಲ್ಲಿಸಿ ಶರಣುಪಾಟೀಲ್ ಒತ್ತಾಯ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಬಗರ್ ಹುಕುಂ ಸಾಗುವಳಿ ಸಕ್ರಮಿಕರಣಗೋಳಿಸಲು ಸಾಕಷ್ಟು ಅರ್ಜಿಗಳು ಬರುತ್ತಿದ್ದು ಬಡಜನರ ಅನುಕೂಲಕ್ಕಾಗಿ ಬಗರ್ ಹುಕುಂ ಸಾಗುವಳಿ ಸಕ್ರಮಿಕರಣ ಸಭೆ ಕರೆದು ಬಡಜನರ ಅರ್ಜಿಗಳು ಇತ್ಯರ್ಥಪಡಿಸಬೇಕು ಎಂದು ಕಾಂಗ್ರೆಸ್ ಪಕ್ಷದ ವಕ್ತಾರ ಶರಣುಪಾಟೀಲ್ ಮೋತಕಪಳ್ಳಿ ಒತ್ತಾಯಿಸಿದರು.

ಪಟ್ಟಣದ ತಹಶೀಲ್ ಕಛೇರಿಯಲ್ಲಿ ತಾಲ್ಲೂಕಿನ ಮೇವು,ನೀರು ನಿರ್ವಾಹಣೆ ಸಭೆಗೆ ಆಗಮಿಸಿದ ಶಾಸಕ ಡಾ.ಅವಿನಾಶ ಜಾಧವ ಅವರಿಗೆ ತಾಲ್ಲೂಕಾ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ವಕ್ತಾರ ಶರಣುಪಾಟೀಲ್ ನೇತೃತ್ವದಲ್ಲಿ ಬಗರ್ ಹುಕುಂ ಸಭೆ ನಡೆಸಲು ಒತ್ತಾಯಿಸಿ ಮನವಿಪತ್ರ ಸಲ್ಲಿಸಿದ ಅವರು, ಶಾಸಕರ ಅಧ್ಯಕ್ಷತೆಯಲ್ಲಿ ನಡೆಯುವ ಅಕ್ರಮ ಸಾಗುವಳಿ ಜಮೀನುಗಳು ಸಕ್ರಮಗೋಳಿಸಲು ಸಮಿತಿಯಿದ್ದು, ಬಂದಿರುವ ಅರ್ಜಿಗಳು ವಿಲೇವಾರಿಗೋಳಿಸತ್ತದೆ ಆದರೆ ಮಾರ್ಚ ತಿಂಗಳಲ್ಲಿ ಸಮಿತಿಯ ಆದೇಶ ಸರ್ಕಾರದ ಹೊರಡಿಸಿದರೂ ಇಲ್ಲಿಯವರೆಗೆ ಸಭೆ ಮಾಡದೆ ಬಡಜನರಿಗೆ ಅನಾನೂಕೂಲವಾಗುತ್ತಿದೆ, ಕಳೆದ 9 ವರ್ಷಗಳಿಂದ ಸಮಿತಿಯು ಆಸ್ತಿತ್ವದಲ್ಲಿ ಇರುವುದಿಲ್ಲ ಹಲವಾರು ಅರ್ಜಿಗಳು ಬಂದಿವೆ ಆದರೆ ಈಗ ಸಮಿತಿ ರಚನೆಯಾಗಿದೆ ಸಭೆ ಕರೆದು ಬಡಜನರ ಅಕ್ರಮ ಸಾಗುವಳಿ ಜಮೀನು ಸಕ್ರಮಗೋಳಿಸಿ ಜನರಿಗೆ ಅನುಕೂಲ ಕಲ್ಪಿಸಿಕೋಡಬೇಕು ಎಂದು ಶರಣುಪಾಟೀಲ್ ಒತ್ತಾಯಿಸಿದರು.

**ಪ್ರಮುಖರು:** ಪುರಸಭೆ ಮಾಜಿ ಉಪಾಧ್ಯಕ್ಷ ಶಬ್ಬೀರ ಅಹೇಮದ್, ಸುಭಾಶ್ಚಂದ್ರ ಪಾಟೀಲ್, ಖಲೀಲ್ ಪಟೆಲ್ ಮತ್ತು ಅನೇಕರಿದ್ದರು.



ಉದಯವಾಹಿನಿ ಚಿತ್ರ

## ಯುಐಡಿಎಐ ಆಧಾರ್ ಸೇವಾ ಕೇಂದ್ರದ ಉದ್ಘಾಟನೆ

• ಉದಯವಾಹಿನಿ, ಬೀದರ

ಬೀದರ ಜಿಲ್ಲೆಯ ಸಾರ್ವಜನಿಕರು ಆಧಾರ್ ಆಪ್ ಮೂಲಕ ಮನೆಯಲ್ಲಿ ಕುಳಿತಲ್ಲಿಯೇ ತಮ್ಮ ಆಧಾರ್ ಕಾರ್ಡ್ ಅಪ್ಡೇಟ್ ಮಾಡಿಸಿಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಹೇಳಿದರು. ಅವರು ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (ಯುಐಡಿಎಐ) ಬೆಂಗಳೂರು ಆಯೋಜಿಸಿದ್ದ ಬೀದರ್ನ ಶಿವನಗರದಲ್ಲಿ ಹೊಸ ಯುಐಡಿಎಐ ಆಧಾರ್ ಸೇವಾ ಕೇಂದ್ರ (ಎಎಸ್‌ಕೆ)ನ್ನು ಉದ್ಘಾಟನೆಗೊಳಿಸಿ ಮಾತನಾಡಿದರು.

ಇದು ಜಿಲ್ಲೆಯ ನಿವಾಸಿ ಕೇಂದ್ರಿತ ಆಧಾರ್ ಸೇವೆಗಳನ್ನು ಬಲಪಡಿಸುವತ್ತ ಮತ್ತೊಂದು ಮಹತ್ವದ ಹೆಜ್ಜೆಯನ್ನು ಇಟ್ಟಿದೆ. ಜಿಲ್ಲೆಯಲ್ಲಿ ಇವತ್ತು ಆಧಾರ್ ಕಾರ್ಡ್ ಸೇವಾ ಕೇಂದ್ರದ ಉದ್ಘಾಟನೆ ಮಾಡಲಾಗಿದೆ. ಆಧಾರ್ ಕಾರ್ಡ್‌ಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಸಮಸ್ಯೆಗಳನ್ನು ಇಲ್ಲಿ ಪರಿಹರಿಸಲಾಗುವುದು. ಈ ಆಧಾರ್ ಸೇವಾ ಕೇಂದ್ರವು ಆಧಾರ್ ದಾಖಲಾತಿ, ಜನಸಂಖ್ಯಾ ಮತ್ತು ಬಯೋಮೆಟ್ರಿಕ್ ನವೀಕರಣಗಳು, ದೋಷ ತಿದ್ದುಪಡಿ ಮತ್ತು ಕುಂದುಕೊರತೆ ಪರಿಹಾರ ಸೇವೆಗಳನ್ನು ಒಂದೇ ಸೂರಿನಡಿ ನೀಡುತ್ತದೆ. ಈ ಕೇಂದ್ರವು ಸಾರ್ವಜನಿಕ ರಜಾದಿನಗಳನ್ನು ಹೊರತುಪಡಿಸಿ ಎಲ್ಲಾ ದಿನಗಳಲ್ಲಿ ಕಾರ್ಯನಿರ್ವಹಿಸುತ್ತದೆ, ಇದರಿಂದಾಗಿ ಅನುಕೂಲತೆಯನ್ನು ಹೆಚ್ಚಿಸುತ್ತದೆ ಮತ್ತು ನಿವಾಸಿಗಳ ಅನುಭವವನ್ನು ಸುಧಾರಿಸುತ್ತದೆ. ಕರ್ನಾಟಕವು ಪ್ರಸ್ತುತ ಬೀದರ್ ಕೇಂದ್ರ ಸೇರಿದಂತೆ ಏಳು ಆಧಾರ್ ಸೇವಾ ಕೇಂದ್ರಗಳನ್ನು ಹೊಂದಿದೆ ಎಂದರು.



ಉದಯವಾಹಿನಿ ಚಿತ್ರ

## ದಂಡ ಪಾವತಿಸದೇ ಕಾರಾಗೃಹದಲ್ಲಿ ಉಳಿದ ಬಂದಿಗೆ ನೆರವಿನ ಹಸ್ತ

• ಉದಯವಾಹಿನಿ, ಕಲಬುರಗಿ

ದಂಡದ ಹಣ ಪಾವತಿಸದೇ ಕಾರಾಗೃಹದಲ್ಲಿಯೇ ಉಳಿದ ಬಂದಿಗೆ ಮಾನವೀಯತೆ ಮೇರೆಗೆ ಹಣ ಪಾವತಿಸಿ ಸಹಕರಿಸಿದ ಘಟನೆ ನಡೆದಿದೆ. ಕೇಂದ್ರ ಕಾರಾಗೃಹದ ಶಿಕ್ಷಾ ಬಂದಿ ರಮೇಶ್ ಶಿವರಾಯ ಕಲಗೂರ್ತಿ ಎಂಬಾತನು ದಂಡದ ಹಣ ಕಟ್ಟಲು ಆರ್ಥಿಕವಾಗಿ ದುರ್ಬಲರಾದ ಕಾರಣ ಹಣ ಹೊಂದಿಸಲು ಸಾಧ್ಯವಾಗಿರಲಿಲ್ಲ. ಇದನ್ನು ಈ ಸಂಸ್ಥೆಯ ಪ್ರಭಾರಿ ಮುಖ್ಯ ಅಧೀಕ್ಷಕ ರಾಕೇಶ್ ಕಾಂಬಳೆ ಗಮನಿಸಿ ಸ್ಥಳೀಯ ಸಂಸ್ಥೆ ಜಮೀಯತ್ ಉಲಮಾ ಸೊಸೈಟಿಯನ್ನು ಸಂಪರ್ಕಿಸಿ ದಂಡ ಮೊತ್ತ ರೂ. 18 ಸಾವಿರ ರೂ ಮೊತ್ತವನ್ನು ಪಾವತಿಸಲು ಕೋರಲಾಗಿತ್ತು. ಅದರಂತೆ ಅವರುಗಳು ಆರ್ಥಿಕವಾಗಿ ದುರ್ಬಲರಾದ ಬಂದಿಗಳ ದಂಡದ ಹಣ ಪಾವತಿಸಿ ಸಹಕರಿಸಿ ಮಾನವೀಯತೆ ಮೆರೆದಿದ್ದಾರೆ.

## 35 ಲಕ್ಷ ಮೌಲ್ಯದ ಹೈಡ್ರೊವಿಡ ಗಾಂಜಾ ವಶ; ಕಾಲೇಜು ವಿದ್ಯಾರ್ಥಿನಿ ಬಂಧನ

• ಉದಯವಾಹಿನಿ ಮಂಗಳೂರು

ನಗರದ ಮುಲ್ಕಿ ಪೊಲೀಸರು ನಡೆಸಿದ ಭರ್ಜರಿ ಕಾರ್ಯಾಚರಣೆಯಲ್ಲಿ, ಮಾರಾಟಕ್ಕೆ ಯತ್ನಿಸುತ್ತಿದ್ದ ಸುಮಾರು 35 ಲಕ್ಷ ರೂಪಾಯಿ ಮೌಲ್ಯದ ಹೈಡ್ರೊವಿಡ್ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದ್ದು, ಈ ಸಂಬಂಧ ಕಾಲೇಜು ವಿದ್ಯಾರ್ಥಿನಿಯೊಬ್ಬಳನ್ನು ಬಂಧಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹುಲಿದೇವರ ಬನದ ನಿವಾಸಿ, ಪ್ರಸ್ತುತ ಕುಂದಾಪುರದ ಕಾಲೇಜೊಂದರಲ್ಲಿ ಅಂತಿಮ ವರ್ಷದ ಬಿ.ಸಿ.ಎ ವ್ಯಾಸಂಗ ಮಾಡುತ್ತಿರುವ ಸುಹಾನ (21) ಬಂಧಿತ ಆರೋಪಿತೆ. ಈಕೆ ದಿನಾಂಕ 12-05-2026ರಂದು ಮುಲ್ಕಿ ರೈಲ್ವೇ ಸ್ಟೇಷನ್ ರಸ್ತೆಯಲ್ಲಿ ಮಾದಕ ದ್ರವ್ಯವನ್ನು ಮಾರಾಟ ಮಾಡಲು ಸಾಗಿಸುತ್ತಿದ್ದ ವೇಳೆ ಪೊಲೀಸರ ಬಲೆಗೆ ಬಿದ್ದಿದ್ದಾಳೆ. ಬಂಧಿತಳಿಂದ ಸುಮಾರು 1 ಕೆಜಿ 42 ಗ್ರಾಂ ತೂಕದ ಹೈಡ್ರೊವಿಡ ಗಾಂಜಾ, ಮೊಬೈಲ್ ಫೋನ್ ಹಾಗೂ ಇತರ ಸೊತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರಾಥಮಿಕ ತನಿಖೆಯ ಪ್ರಕಾರ, ಆರೋಪಿತೆಯು ಈ ಮಾದಕ ವಸ್ತುವನ್ನು ಚೆನ್ನೈಯಿಂದ ತರಿಸಿಕೊಂಡು ಮಂಗಳೂರಿನಲ್ಲಿ ಅಕ್ರಮವಾಗಿ ಪೂರೈಸಿ ಹಣ ಗಳಿಸುವ ಉದ್ದೇಶ ಹೊಂದಿದ್ದಳು ಎಂದು ತಿಳಿದುಬಂದಿದೆ.

## 2028ರ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ: ಬಿವೈವಿ

• ಉದಯವಾಹಿನಿ ಸುಬ್ರಹ್ಮಣ್ಯ

ಪಶ್ಚಿಮ ಬಂಗಾಳದಲ್ಲಿ ಗೂಂಡಾ ಸರ್ಕಾರ ಇದ್ದು ಅದನ್ನು ಜನ ಕಿತ್ತೊಗೆದರು. ಹಿಂದೂ ವಿರೋಧಿ ಸರ್ಕಾರವನ್ನು ಕಿತ್ತೊಗೆದರು. ಅಲ್ಲಿನ ಮಕ್ಕಳು ಕೂಡ ಜೈ ಶ್ರೀರಾಮ್ ಘೋಷಣೆ ಕೂಗಿರುವುದನ್ನು ನೋಡಿದರೆ ಅಲ್ಲಿನ ವಾಸ್ತವ ಅರ್ಥವಾಗುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿದರು.



**ತೊಂದರೆ ಅರ್ಥ ಮಾಡಿಕೊಳ್ಳಬೇಕು:** ಸುಬ್ರಹ್ಮಣ್ಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಚಿನ್ನ ಖರೀದಿಸಬೇಡಿ ಎಂದು ಮೋದಿ ಹೇಳಿರುವ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ ಇರಾನ್ ಅಮೆರಿಕದ ಯುದ್ಧದಿಂದ ಆಗಿರುವ ತೊಂದರೆ ಅರ್ಥ ಮಾಡಿಕೊಳ್ಳಬೇಕು. ಮೋದಿ ವಾಸ್ತವಿಕವಾಗಿ ಹೇಳಿಕೆ ನೀಡಿದ್ದಾರೆ. ಆದರೆ ಅದರ ವಾಸ್ತವಿಕತೆ ಕಾಂಗ್ರೆಸ್‌ನ ಮೂರ್ಖರಿಗೆ ಅರ್ಥವಾಗುವುದಿಲ್ಲ ಆದ್ದರಿಂದ ಟೀಕಿಸುತ್ತಾರೆ ಎಂದರು. ಉಪ ಚುನಾವಣೆ ಸೋಲು ಒಪ್ಪಿಕೊಳ್ಳತ್ತೇವೆ, 2028 ರ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದರು.

## ರಸ್ತೆ ಅಪಘಾತ ತಡೆಯಲು ಸಂಚಾರ ನಿಯಮ ಕಟ್ಟುನಿಟ್ಟಾಗಿ ಪಾಲಿಸಿ: ಬೆಳಗಾವಿ ಲೋಕಾಯುಕ್ತ ಎಸ್ಪಿ ದೇಸಾಯಿ

• ಉದಯವಾಹಿನಿ, ವಿಜಯಪುರ

ದೇಶದಲ್ಲಿ ರಸ್ತೆ ಅಪಘಾತಗಳಲ್ಲಿ ಸಾವಿಗೀಡಾಗುವವರ ಸಂಖ್ಯೆ ಪ್ರತಿ ವರ್ಷ ಹೆಚ್ಚಾಗುತ್ತಿದ್ದು, ಸಂಚಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಅಗತ್ಯವಾಗಿದೆ ಬೆಳಗಾವಿ ಲೋಕಾಯುಕ್ತ ಕಚೇರಿ ಎಸ್ಪಿ ಪ್ರಸನ್ನ ದೇಸಾಯಿ ಹೇಳಿದ್ದಾರೆ.

ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಕಾನೂನು ಶಾಲೆಯಲ್ಲಿ ಆಯೋಜಿಸಲಾದ ಅಪಘಾತಗಳನ್ನು ಹೇಗೆ ನಿಯಂತ್ರಿಸಬೇಕು ಎಂಬ ವಿಷಯ ಕುರಿತು ವಿಶೇಷ ಉಪನ್ಯಾನ ನೀಡಿದರು. ಕರ್ನಾಟಕ ಪೊಲೀಸ್ ಕಾಯ್ದೆ, 1963ರ ಕುರಿತು ಮಾತನಾಡಿ, ಭಾರತದ ಪ್ರತಿ ರಾಜ್ಯಕ್ಕೂ ಪ್ರತ್ಯೇಕ ಪೊಲೀಸ್ ಕಾಯ್ದೆಗಳಿವೆ. ಕ್ರಿಮಿನಲ್ ನ್ಯಾಯ ವ್ಯವಸ್ಥೆ, ಹೆಚ್ಚುತ್ತಿರುವ ಸೈಬರ್ ಅಪರಾಧಗಳು, ಅವುಗಳ ಬಗ್ಗೆ ವಹಿಸಬೇಕಿರುವ ಮುಂಜಾಗ್ರತೆ, ವಿದ್ಯಾರ್ಥಿಗಳು ಡಿಜಿಟಲ್ ವೇದಿಕೆಗಳನ್ನು ಜಾಗರೂಕತೆಯಿಂದ ಬಳಸುವುದು, ಮಾದಕ ದ್ರವ್ಯಗಳ ದುಷ್ಪರಿಣಾಮಗಳು, ಧೂಮ್ರಪಾನದ ದುಷ್ಪರಿಣಾಮಗಳ ಕುರಿತು ಅವರು ಮಾತನಾಡಿದರು.



ಉದಯವಾಹಿನಿ ಚಿತ್ರ

ಬಿ.ಎಲ್.ಡಿ.ಇ ಡೀಮ್ಡ್ ವಿವಿ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ ಮಾತನಾಡಿ, ಸಂಚಾರಿ ನಿಯಮಗಳನ್ನು ಪಾಲಿಸುವುದು, ಹೆಲ್ಮೆಟ್ ಧರಿಸುವುದು ಮತ್ತು ವಾಹನ ಚಾಲನೆ ವೇಳೆ ವೇಗ ನಿಯಂತ್ರಣ ಕಾಪಾಡಿಕೊಳ್ಳುವುದರಿಂದ ಅಪಘಾತಗಳನ್ನು ಕಡಿಮೆ ಮಾಡಲು ಸಾಧ್ಯ. ದುಶ್ಚಟಗಳನ್ನು ಕೆಟ್ಟ ತೊರೆದು ಉತ್ತಮ ಆರೋಗ್ಯ ಮತ್ತು ಶಿಸ್ತಿನ ಜೀವನವನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

## ರೈತರಿಗೆ 7 ಗಂಟೆ ವಿದ್ಯುತ್ ನೀಡಿ: ಬೆಸ್ಕಾಂ ಅಧಿಕಾರಿಗಳಿಗೆ ಸೂಚನೆ

• ಉದಯವಾಹಿನಿ ದಾವಣಗೆರೆ

ಜಿಲ್ಲೆಯಲ್ಲಿ ರೈತರಿಗೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಆಗುತ್ತಿಲ್ಲ. ದಿನಕ್ಕೆ 4 ರಿಂದ 5 ಗಂಟೆ ಮಾತ್ರ ವಿದ್ಯುತ್ ನೀಡಲಾಗುತ್ತಿದ್ದು, ಇದನ್ನು ಕೂಡಲೇ ಸರಿಪಡಿಸಿ ನಿರಂತರವಾಗಿ 7 ಗಂಟೆ ವಿದ್ಯುತ್ ಸರಬರಾಜು ಮಾಡಲು ಕ್ರಮ ವಹಿಸಬೇಕು ಎಂದು ಪಂಚ ಗ್ಯಾರಂಟಿ ಅನುಷ್ಠಾನದ ಜಿಲ್ಲಾ ಸಮಿತಿಯ ಅಧ್ಯಕ್ಷ ಶಾಮನೂರು ಬಸವರಾಜಪ್ಪ ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾ ಪಂಚಾಯಿತಿಯ ಎಸ್.ಎಸ್. ಮಲ್ಲಿಕಾರ್ಜುನ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೃಷಿ ಚಟುವಟಿಕೆಗೆ ತೊಂದರೆಯಾ ಗದಂತೆ ನಿಗದಿತ ಅವಧಿಯವರೆಗೆ ಗುಣಮಟ್ಟದ ವಿದ್ಯುತ್ ಒದಗಿಸಲು ಆದ್ಯತೆ ನೀಡಬೇಕು ಎಂದರು.

ಜಗಳೂರು ತಾಲ್ಲೂಕಿನಲ್ಲಿ 156 ಮನೆಗಳಿಗೆ ಬೆಸ್ಕಾಂ ಅಧಿಕಾರಿಗಳು ವಿದ್ಯುತ್ ಸಂಪರ್ಕ ಕಲ್ಪಿಸಲು ಅನುಮತಿ ನೀಡುತ್ತಿಲ್ಲ ಎಂದು ಸಮಿತಿಯ ಸದಸ್ಯರು ದೂರಿದರು. ಈ ಬಗ್ಗೆ ಪರಿಶೀಲನೆ ನಡೆಸಿ ನಿಯಮಾನುಸಾರ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮವಹಿಸುವುದಾಗಿ ಬೆಸ್ಕಾಂ ಅಧಿಕಾರಿಗಳು ಭರವಸೆ ನೀಡಿದರು.

ಜಗಳೂರಿನಲ್ಲಿ ಪ್ರಯಾಣಿಕರಿಗೆ ಸರಿಯಾಗಿ ನಿಲ್ಲಲು ಸ್ಥಳಾವಕಾಶವಿಲ್ಲದೆ ಬಿಸಿಲಿನಲ್ಲಿಯೇ ಬಸ್‌ಗಳಿಗಾಗಿ ಕಾಯುವಂತಾಗಿದೆ. ಬೇಸಿಗೆಯ ತೀವ್ರತೆ ಹೆಚ್ಚುತ್ತಿರುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಉಂಟಾಗಬಹುದು ಎಂದು ಸದಸ್ಯರು ಆತಂಕ ವಕಪಡಿಸಿದರು.

ಪ್ರಯಾಣಿಕರ ಅನುಕೂಲಕ್ಕಾಗಿ ತಕ್ಷಣವೇ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಬೇಕು. ಪ್ರಯಾಣಿಕರಿಗೆ ಕುಡಿಯುವ ನೀರು ಸೇರಿದಂತೆ ಕನಿಷ್ಠ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಬೇಕು ಎಂದು ಸೂಚಿಸಿದರು.



ಉದಯವಾಹಿನಿ ಚಿತ್ರ

> ಬೇಸಿಗೆಯ ತೀವ್ರತೆಯ ಕಾರಣ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಜಿಲ್ಲೆಯ ನ್ಯಾಯಬೆಲೆ ಅಂಗಡಿಗಳ ಕೆಲಸದ ಅವಧಿಯಲ್ಲಿ ಬದಲಾವಣೆ ಮಾಡಲಾಗಿದೆ. ಜಿಲ್ಲೆಯ ಎಲ್ಲಾ ನ್ಯಾಯಬೆಲೆ ಅಂಗಡಿಗಳು ಬೆಳಿಗ್ಗೆ 6ರಿಂದ 10 ಗಂಟೆ ವರೆಗೆ ಕಾರ್ಯನಿರ್ವಹಿಸುತ್ತಿವೆ.
> -ಮಧುಸೂದನ್, ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕ

## ರಾಜ್ಯದಲ್ಲಿ ಹದಗೆಟ್ಟ ಕಾನೂನು ವ್ಯವಸ್ಥೆ: ವಿಶ್ವೇಶ್ವರ ಹೆಗಡೆ ಕಾಗೇರಿ

• ಉದಯವಾಹಿನಿ, ಅಂಕೋಲಾ

ರಾಜ್ಯ ಸರ್ಕಾರದ ಪಂಚೇಂದ್ರಿಯಗಳು ಕಾರ್ಯನಿರ್ವಹಿಸುತ್ತಿಲ್ಲ. ಅದರ ಕಿವಿ, ಕಣ್ಣು ಮುಚ್ಚಿಹೋಗಿದೆ. ಕೆಲವರು ಮನಸ್ಸಿಗೆ ಬಂದಂತೆ ವರ್ತಿಸುತ್ತ ಸಮಾಜದಲ್ಲಿ ಗೊಂದಲ ಮೂಡಿಸುತ್ತಿದ್ದಾರೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ದೂರಿದರು.

ತಾಲ್ಲೂಕಿನ ವಂದಿಗೆ ಗ್ರಾಮದಲ್ಲಿ ಯಕ್ಷಗಾನ ಕಾರ್ಯಕ್ರಮವೊಂದರಲ್ಲಿ ಇತ್ತೀಚೆಗೆ ನಡೆದಿದ್ದ ಘರ್ಷಣೆಗೆ ಸಂಬಂಧಿಸಿದಂತೆ ಕಳೆದ ನಾಲ್ಕು ದಿನಗಳಿಂದ ಪಟ್ಟಣದ ತಹಶೀಲ್ದಾರ್ ಕಚೇರಿ ಎದುರು ಧರಣಿ ನಡೆಸುತ್ತಿರುವ ವಕೀಲ ನಾಗರಾಜ ನಾಯಕ ಅವರ ವೇದಿಕೆಗೆ ಭೇಟಿ ನೀಡಿ, ಮನವಿ ಸ್ವೀಕರಿಸಿ ಮಾತನಾಡಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ರಾಜ್ಯ ಸರ್ಕಾರದ ಸಚಿವರು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಒತ್ತಡ ಹೇರದೆ ಮುಕ್ತವಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡಬೇಕು. ನಾನು ಕೂಡ ಗೃಹ ಸಚಿವರೊಂದಿಗೆ ಮಾತನಾಡುತ್ತೇನೆ ಎಂದರು. ವಕೀಲ ನಾಗರಾಜ ನಾಯಕ ಮಾತನಾಡಿ, ಸಂಸದ ಕಾಗೇರಿಯವರ ಮಾತಿಗೆ ಬದ್ಧನಾಗಿದ್ದೇನೆ. ಸಮಾಜಘಾತುಕ ವ್ಯಕ್ತಿಗಳಿಗೆ ಹೇಗೆ ಪಾಠ ಕಲಿಸಬೇಕು ಎಂದು ಗೊತ್ತು, ಅದನ್ನು ಮಾಡುತ್ತೇನೆ. ಅಂಕೋಲಾದಲ್ಲಿ ಈ ಹಿಂದೆ ಭಯದ ವಾತಾವರಣ ಇರಲಿಲ್ಲ. ಆದರೆ, ಈಗ ಭಯದ ವಾತಾವರಣ ಕಂಡು ಬರುತ್ತಿದೆ ಎಂದರು. ಹನುಮಂತ ಗೌಡ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಜಗದೀಶ ಮೊಗಟಾ, ನಿತ್ಯಾನಂದ ಗಾಂವಕರ, ಬಿಂದೇಶ ಹಿಚ್ಕಡ, ಉದಯ ನಾಯಕ ಭಾವಿಕೇರಿ, ರಾಮಚಂದ್ರ ಹೆಗಡೆ, ಜಯಾ ನಾಯ್ಕ, ಗಣೇಶ ನಾಯ್ಕ, ಚಂದ್ರಕಾಂತ ನಾಯ್ಕ, ದಾಮೋದರ ರಾಯ್ಕರ, ನಾರಾಯಣ ಹೆಗಡೆ, ಸುಬ್ರಾಯ, ಸಾಯಿಕಿರಣ ಶೇಟ್ಯಾ, ಅಶೋಕ, ಮಹೇಶ ಇದ್ದರು.



ಉದಯವಾಹಿನಿ ಚಿತ್ರ

# ಔರಾದ್ ತಹಶೀಲ್ ಕಛೇರಿಯ ಸಿಬ್ಬಂದಿಗಳಿಗೆ ಹೇಳೋರಿಲ್ಲ ಕೇಳೋರಿಲ್ಲ

### ಸಮಯಕ್ಕೆ ಬಾರದ ಆಹಾರ ನಾಗರಿಕ ಸರಬರಾಜು ಇಲಾಖೆ ಸಿಬ್ಬಂದಿಗಳು | ಸುಡು ಬಿಸಿಲಿನಲ್ಲಿ ನಿಂತು ಜನ ಹೈರಾಣು

• ಪರಮೇಶ.ಡಿ.ವಿಳಸಪೂರೆ

• ಉದಯವಾಹಿನಿ ಔರಾದ್

ಬೇಸಿಗೆಯ ಬಿಸಿಲಿನ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಜಿಲ್ಲೆಯ ಸರ್ಕಾರಿ ಕಚೇರಿಗಳ ಸಮಯದಲ್ಲಿ ಬದಲಾವಣೆ ಮಾಡಲಾಗಿದೆ. ಬೆಳಿಗ್ಗೆ 8 ರಿಂದ ಕಚೇರಿ ಆರಂಭವಾಗಿದ್ದರೂ, 9 ಗಂಟೆಯಾದರೂ ಅರ್ಧದಷ್ಟು ಸಿಬ್ಬಂದಿ ಬಂದಿರುವುದಿಲ್ಲ. ಔರಾದ್ ತಾಲ್ಲೂಕಿನ ತಹಸೀಲ್ ಕಛೇರಿ ಸೇರಿದಂತೆ ಇನ್ನಿತರ ಕಛೇರಿಯಲ್ಲಿ ಸರ್ಕಾರದ ಆದೇಶಕ್ಕೆ ಕವಡೆ ಕಾಸಿನ ಕಿಮ್ಮತ್ತು ನೀಡುತ್ತಿಲ್ಲ.

ಪಟ್ಟಣದ ತಾಲ್ಲೂಕು ತಹಶೀಲ್ದಾರರ ಕಛೇರಿಯ ಆಹಾರ ನಾಗರಿಕ ಸರಬರಾಜು ಸಿಬ್ಬಂದಿಗಳು ಬೆಳಗ್ಗೆ 10:30 ಗಂಟೆಯಾದರೂ ಸಿಬ್ಬಂದಿಗಳು ಮಾತ್ರ ಕಛೇರಿಗೆ ಬರುವುದಿಲ್ಲ.ತಹಶೀಲ್ದಾರ್ ಕಚೇರಿಯ ಬಹುತೇಕ ಸಿಬ್ಬಂದಿ ನಿತ್ಯವೂ ಬೀದರ್‌ಯಿಂದ ಬರುತ್ತಾರೆ. ಬೆಳಿಗ್ಗೆ 11 ಗಂಟೆಯ ನಂತರ ಒಬ್ಬೊಬ್ಬರಾಗಿ ಕಚೇರಿಗೆ ಆಗಮಿಸುತ್ತಾರೆ. ಮಧ್ಯಾಹ್ನ ಸರಿಯಾಗಿ 1:30 ಗಂಟೆಗೆ ಊರಿಗೆ ಮರಳುವ ತರಾತುರಿಯಲ್ಲಿರುತ್ತಾರೆ.

ಕೆಲಸದ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದು, ಪ್ರತಿಯೊಂದು ಸಣ್ಣ-ಪುಟ್ಟ ಕೆಲಸಗಳಿಗೂ ಸಿಬ್ಬಂದಿಗಳಿಗೆ ಹಣ ನೀಡಬೇಕು. ಇಲ್ಲಿ ಸಾವಿರಾರು ಬಾರಿ ದೂರದ ಊರುಗಳಿಂದ ಅಲೆದಾಡಬೇಕಾಗಿರುವ ಪರಿಸ್ಥಿತಿಯಿಂದ ತೀವ್ರ ಸಮಸ್ಯೆಯಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.


ಇಲ್ಲಿನ ತಹಶೀಲ್ದಾರ್ ಕಚೇರಿ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಕುರ್ಚಿಯಲ್ಲಿ ಕುಳಿತುಕೊಳ್ಳುವುದೆಂದರೆ ಅಲರ್ಜಿ. ಎಲ್ಲಾ ವಿಭಾಗಗಳಲ್ಲಿ ಅರ್ಧಕ್ಕರ್ಧ ಸಿಬ್ಬಂದಿಯ ಕುರ್ಚಿಗಳು ಖಾಲಿ ಇರುತ್ತವೆ. ಅವರು ಯಾವಾಗ ಬರುತ್ತಾರೋ, ಯಾವಾಗ ವಾಪಸ್ ಹೋಗುತ್ತಾರೋ ತಿಳಿಯುವುದಿಲ್ಲ. ಹಳ್ಳಿಗಳಿಂದ ಬರುವವರು ಅಹವಾಲು ಕೇಳುವವರಿಲ್ಲದೇ ಬರಿಗೈಲಿ ಹಿಂದಿರುತ್ತಿದ್ದಾರೆ ಎಂಬುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಅಧಿಕಾರಿಗಳು ಎಚ್ಚೆತ್ತುಕೊಂಡು ಸಮಯಕ್ಕೆ ಸರಿಯಾಗಿ ಕಛೇರಿಗೆ ಹಾಜರಾಗಿ ಸಾರ್ವಜನಿಕರ ಕೆಲಸಗಳನ್ನು ಸುಗಮವಾಗಿ ಮಾಡಿಕೊಡದೆ ಇದ್ದಲ್ಲಿ ತಹಶೀಲ್ದಾರ ಕಾರ್ಯಾಲಯಕ್ಕೆ ಬೀಗ ಜಡಿದು ಪ್ರತಿಭಟನೆ ಮಾಡಲಾಗುವುದು ಎಂದು ದಲಿತ ಸಂಘರ್ಷ ಸಮಿತಿ ತಾಲ್ಲೂಕ ಸಂಚಾಲಕ ಸುಭಾಷ ಲಾಧ ಪತ್ರಿಕೆ ಪ್ರಕಟನೆ ಮೂಲಕ ಎಚ್ಚರಿಕೆ ನೀಡಿದ್ದಾರೆ.





ಉದಯವಾಹಿನಿ ಚಿತ್ರ





ಉದಯವಾಹಿನಿ ಚಿತ್ರ

**ಸರ್ಕಾರದ ಆದೇಶಕ್ಕೆ ಕವಡೆ ಕಾಸಿನ ಕಿಮ್ಮತ್ತಿಲ್ಲ**

**ಕಛೇರಿಗೆ ಬರುವುದು ಲೇಟಾಗಿ ಹೋಗುವುದು ಸರಿಯಾದ ಸಮಯಕ್ಕೆ**

ಬೆಳಿಗ್ಗೆ 8 ರಿಂದ ಕಚೇರಿ ಆರಂಭವಾಗಿದ್ದರೂ, 9 ಗಂಟೆಯಾದರೂ ಅರ್ಧದಷ್ಟು ಸಿಬ್ಬಂದಿ ಬಂದಿರುವುದಿಲ್ಲ. ಆದರೆ ಮದ್ಯಾಹ್ನ ಸಮಯ 1.30 ಆದ ಬಳಿಕ ಜನ ಕಛೇರಿಯಲ್ಲಿ ಇದ್ರೂ ಕೂಡಾ ಸಮಯ ಮುಗಿದಿದೆ ನಾಳೆ ಬನ್ನಿ ಎನ್ನುತ್ತಾರೆ. ಜನ ಬಿಸಿಲಿನಲ್ಲಿ ನಿಂತು ಕಾದು ಕಾದು ಹೈರಾಣುಗುತ್ತಿದರು ಅಧಿಕಾರಿಗಳಿಗೆ ಅವರ ಬಗ್ಗೆ ಕಿಂಚಿತ್ತು ಕಾಳಜಿಯಿಲ್ಲ. ನಮ್ಮ ನೀಡಿರುವ ತೇರಿಗೆಯಲ್ಲಿ ಸಂಬಳ ಪಡೆದುಕೊಂಡು ನಮಗೆ ಸಮಯ ನೀಡುವುದಿಲ್ಲ ಎಂಬುದು ಸ್ಥಳದಲ್ಲಿ ಇದಂತಹ ಮಹಿಳೆಯರ ಗೋಳಾಗಿತ್ತು.



# ಗರುಡ 4 ಪ್ರತ್ಯೇಕ ಕಥೆಗಳು

ಇತ್ತೀಚಿನ ದಿನಗಳಲ್ಲಿ ಎಐ ಎಲ್ಲಾ ಕಡೆಗಳಲ್ಲೂ ರಾರಾಜಿಸುತ್ತಿದೆ. ಅದನ್ನೇ ಕಥಾವಸ್ತುವಾಗಿ ಇಟ್ಟುಕೊಂಡು 'ಎಐ' ಸಿನಿಮಾ ಮಾಡಲಾಗಿದೆ. ರಿತ್ವಾನ್ ಶ್ರೀನಿವಾಸ್, ಸೌರವ್ ಪ್ರಶಾಂತ್, ದಿವ್ಯಾ ಚಂದ್ರ ಮುಂತಾದವರು ಈ ಸಿನಿಮಾದಲ್ಲಿ ಪ್ರಮುಖ ಪಾತ್ರಗಳನ್ನು ಮಾಡಿದ್ದಾರೆ. 4 ಬೇರೆ ಬೇರೆ ಕಥೆಗಳು ಈ ಸಿನಿಮಾದಲ್ಲಿ ಇರಲಿವೆ. ಎಲ್ಲಾ ಕ್ಷೇತ್ರಕ್ಕೂ ಈಗ ಎಐ ತಂತ್ರಜ್ಞಾನ ಕಾಲಿಡುತ್ತಿದೆ. ಈಗಾಗಲೇ ಅದು ಹಲವು ಕ್ಷೇತ್ರಗಳಲ್ಲಿ ಹೇರಳವಾಗಿ ಬಳಕೆ ಆಗುತ್ತಿದೆ. ಮುಂಬರುವ ದಿನಗಳಲ್ಲಿ ಜನರ ಮೇಲೆ ಮತ್ತು ಮಕ್ಕಳ ಮೇಲೆ ಎಐ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬ ಕುತೂಹಲ ಸಹಜ. ಎಐ ಎಂಬುದು ಜನರಿಗೆ ಮಾರಕವಾಗುತ್ತಾ ಅಥವಾ ಉಪಯೋಗ ಆಗುತ್ತಾ ಎಂಬ ವಿಷಯವನ್ನು ಇಟ್ಟುಕೊಂಡು ಕನ್ನಡದಲ್ಲಿ 'ಗರುಡ' ಸಿನಿಮಾ ತಯಾರಾಗಿದೆ. ಇತ್ತೀಚೆಗೆ ಈ ಸಿನಿಮಾದ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಆ ವೇಳೆ ಚಿತ್ರತಂಡದವರು ಮಾತನಾಡಿದರು. 'ಶೈವಂ ಫಿಲ್ಮ್ಸ್' ಮೂಲಕ ಕಿರಣ್ ಎಸ್. ಅವರು 'ಗರುಡ' ಸಿನಿಮಾವನ್ನು ನಿರ್ಮಿಸಿದ್ದಾರೆ. ಅಷ್ಟೇ ಅಲ್ಲದೇ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಕೂಡ ಮಾಡಿದ್ದಾರೆ. ಛಾಯಾಗ್ರಹಣದ ಜವಾಬ್ದಾರಿಯನ್ನು ಕೂಡ ಅವರೇ ನಿಭಾಯಿಸಿದ್ದಾರೆ. ಈ ಸಿನಿಮಾ ಈಗ ಬಿಡುಗಡೆಗೆ ಸಿದ್ಧವಾಗಿದೆ. ಪ್ರಚಾರದ ಮೊದಲ ಹಂತವಾಗಿ ಟ್ರೇಲರ್ ರಿಲೀಸ್ ಮಾಡಲಾಗಿದೆ. ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ಕಿರಣ್ ಅವರು ಮಾಹಿತಿ ನೀಡಿದರು. 'ಇದೊಂದು ಆಯಕ್ಷನ್, ಸಸ್ಪೆನ್ಸ್, ಥ್ರಿಲ್ಲರ್ ಸಿನಿಮಾ. 2024ರಲ್ಲಿ ಪೈಲಟ್ ಸಿನಿಮಾ ಮಾಡಲು ಹೊರಟಿದ್ದೆವು. ಅದೇ ಈಗ ಗರುಡ ಆಗಿದೆ. ಇದೊಂದು ಫಿಕ್ಷನಲ್, ನಾನ್ ಲೀನಿಯರ್ ಪ್ರಕಾರದ ಸಿನಿಮಾ. 4 ಕಥೆಗಳು ಬೇರೆ ಬೇರೆಯಾಗಿ ಸಾಗುತ್ತ ಒಂದು ಹಂತದಲ್ಲಿ ಸೇರುತ್ತವೆ. ಶೇಕಡ 30ರಿಂದ 40ರಷ್ಟು ಕಥೆ ಎಐ ಕುರಿತು ಇದೆ' ಎಂದು ಅವರು ಹೇಳಿದರು. ರಿತ್ವಾನ್ ಶ್ರೀನಿವಾಸ್ ಅವರು 'ಗರುಡ' ಸಿನಿಮಾದಲ್ಲಿ ನಾಯಕನಾಗಿ ನಟಿಸಿದ್ದಾರೆ. ಈ ಹಿಂದೆ ಕೆಲವು ಧಾರಾವಾಹಿಗಳಲ್ಲಿ ನಟಿಸಿದ ಅನುಭವ ಅವರಿಗೆ ಇದೆ.



# ಸೀತೆ ಪಾತ್ರಕ್ಕೆ ಸಾಯಿ ಪಲ್ಲವಿ ಧ್ವನಿ ಇಲ್ಲ

ಹಿಂದಿ ಚಿತ್ರರಂಗಕ್ಕೆ ಕಾಲಿಟ್ಟ ಸಾಯಿ ಪಲ್ಲವಿ ಅವರಿಗೆ ಆರಂಭದಲ್ಲೇ ನಿರಾಸೆ ಆಗಿದೆ. ಅವರ ಹಿಂದಿ ಉಚ್ಚಾರಣೆ ಬಗ್ಗೆ ಟೀಕೆ ವ್ಯಕ್ತವಾಗಿದೆ. 'ರಾಮಾಯಣ' ಸಿನಿಮಾದಲ್ಲಿ ಸೀತೆ ಪಾತ್ರಕ್ಕೆ ಸಾಯಿ ಪಲ್ಲವಿ ಸೂಕ್ತವಲ್ಲ ಎಂದು ಅನೇಕರು ಹೇಳುತ್ತಿದ್ದಾರೆ. ಈ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಚರ್ಚೆ ಆಗುತ್ತಿದೆ.

ಬಹುನಿರೀಕ್ಷಿತ 'ರಾಮಾಯಣ' ಚಿತ್ರದ ಸೀತಾ ಪಾತ್ರಧಾರಿ ಸಾಯಿ ಪಲ್ಲವಿ ಅವರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆ ನಡೆಯುತ್ತಿದೆ. ಸಾಯಿ ಪಲ್ಲವಿ ಅವರ ಹಿಂದಿ ಉಚ್ಚಾರಣೆಯ ಬಗ್ಗೆ ಕೇಳಿಬರುತ್ತಿರುವ ಟೀಕೆಗಳ ಹಿನ್ನೆಲೆಯಲ್ಲಿ, ಚಿತ್ರತಂಡವು ಅವರ ಪಾತ್ರಕ್ಕೆ ಬೇರೆಯವರಿಂದ ಡಬ್ ಮಾಡಿಸಲು ನಿರ್ಧರಿಸಿದೆ ಎಂದು ವರದಿಯಾಗಿದೆ. ಇದರಿಂದ ಹಿಂದಿ ಚಿತ್ರರಂಗದಲ್ಲಿ ಸಾಯಿ ಪಲ್ಲವಿ ಅವರಿಗೆ ಕೊಂಚ ಹಿನ್ನಡೆ ಆದಂತೆ ಆಗಲಿದೆ. ಅಲ್ಲದೇ, ಅವರ ಅಭಿಮಾನಿಗಳಿಗೆ ಖಂಡಿತಾ ಬೇಸರ ಆಗಲಿದೆ.

ಸಾಯಿ ಪಲ್ಲವಿ ಅಭಿನಯದ 'ಏಕ್ ದಿನ್' ಚಿತ್ರದ ಪ್ರಚಾರದ ವೇಳೆ ಅವರ ಹಿಂದಿ ಉಚ್ಚಾರಣೆಯಲ್ಲಿ ತಮಿಳು ಶೈಲಿ ಎದ್ದು ಕಾಣುತ್ತಿತ್ತು. ಈ ವಿಡಿಯೋಗಳು ವೈರಲ್ ಆಗುತ್ತಿದ್ದಂತೆಯೇ, ನೆಟ್ಟಿಗರು ಸಾಯಿ ಪಲ್ಲವಿ ಅವರನ್ನು ಟ್ರೋಲ್ ಮಾಡಲು ಶುರು ಮಾಡಿದ್ದರು. 'ಹಿಂದಿಯ ಮೂಲ ಪದಗಳನ್ನೇ ಸರಿಯಾಗಿ ಉಚ್ಚರಿಸಲು ಬಾರದ ನಟಿಯನ್ನು ಸೀತಾ ಮಾತೆಯ ಪಾತ್ರಕ್ಕೆ ಆಯ್ಕೆ ಮಾಡಿದ್ದೇಕೆ' ಎಂದು ಹಲವರು ಪ್ರಶ್ನಿಸಿದ್ದರು. ನಿತೇಶ್ ತಿವಾರಿ ನಿರ್ದೇಶನದ 'ರಾಮಾಯಣ' ಒಂದು ಸಾಂಸ್ಕೃತಿಕ ಮಹತ್ವವಿರುವ ಚಿತ್ರವಾಗಿದೆ. ಇದರಲ್ಲಿ ಭಾಷೆ ಅತ್ಯಂತ ಶುದ್ಧವಾಗಿ ಮತ್ತು ಸ್ಪಷ್ಟವಾಗಿರಬೇಕು ಎಂಬುದು ತಂಡದ ಆಶಯ. 'ಏಕ್ ದಿನ್' ಚಿತ್ರದಲ್ಲಿ ಸಾಯಿ ಪಲ್ಲವಿ ಅವರ ಪಾತ್ರವು ತಮಿಳು ಹಿನ್ನೆಲೆಯದ್ದಾಗಿದ್ದರಿಂದ ಅಲ್ಲಿನ ಉಚ್ಚಾರಣೆ ಹೊಂದಿಕೆಯಾಗಿತ್ತು. ಆದರೆ 'ರಾಮಾಯಣ' ಸಿನಿಮಾದಲ್ಲಿ ಸೀತಾ ದೇವಿಯ ಪಾತ್ರಕ್ಕೆ ಅತ್ಯಂತ ಪರಿಷ್ಕೃತ ಹಿಂದಿ ಬೇಕಿರುವುದರಿಂದ, ವೃತ್ತಿಪರ ಡಬ್ಬಿಂಗ್ ಕಲಾವಿದರಿಂದ ಧ್ವನಿ ಕೊಡಿಸಲು ನಿರ್ಮಾಪಕರು ಚಿಂತಿಸುತ್ತಿದ್ದಾರೆ.

# ಅಲ್ಲು ಅರ್ಜುನ್ 'ಆಸ್ತಿ' ಎಂದವನಿಗೆ ತಕ್ಕ ಉತ್ತರ

ನಟಿಯರನ್ನು ಕೀಳಾಗಿ ನಡೆಸಿಕೊಂಡಿರುವ ಸಾಕಷ್ಟು ಉದಾಹರಣೆಗಳು ಚಿತ್ರರಂಗದಲ್ಲಿ ಇವೆ. ಈ ಸಾಮಾಜಿಕ ಜಾಲತಾಣ ಬಂದ ಬಳಿಕವಂತೂ ನಟಿಯರ ಬಗ್ಗೆ ನಿಂದನೆ, ಕೀಳು ಹೇಳಿಕೆ ಇನ್ನಷ್ಟು ಹೆಚ್ಚಾಗಿದೆ. ಈ ಆನ್‌ಲೈನ್ ಕಿರುಕುಳದಿಂದ ಯಾವ ನಟಿಯರೂ ತಪ್ಪಿಸಿಕೊಳ್ಳಲಾಗಿಲ್ಲ. ಎಷ್ಟೋ ಮಂದಿ ನಟಿಯರು, 'ಇದು ಸಾಮಾನ್ಯ' ಎಂದು ಕೈತೊಳೆದು ಸುಮ್ಮನಾಗಿಬಿಟ್ಟಿದ್ದಾರೆ. ಆದರೆ ಕೆಲವರು ಮಾತ್ರ ಆನ್‌ಲೈನ್ ಕಿರುಕುಳದ ವಿರುದ್ಧ ಗಟ್ಟಿ ದನಿ ಎತ್ತುತ್ತಿದ್ದಾರೆ.


ಸಿನಿಮಾರಂಗ ಪುರುಷ ಪ್ರಧಾನವಾದುದು, ಇಲ್ಲಿ ಮಹಿಳೆಯರು ವಿಶೇಷವಾಗಿ ನಾಯಕಿಯರು ತೀವ್ರ ಟೀಕೆ, ವಿಮರ್ಶೆ, ನಿಂದನೆ, ದೌರ್ಜನ್ಯಕ್ಕೆ ಒಳಗಾಗುತ್ತಾರೆ. ನಟಿಯರನ್ನು ಕೀಳಾಗಿ ನಡೆಸಿಕೊಂಡಿರುವ ಸಾಕಷ್ಟು ಉದಾಹರಣೆಗಳು ಚಿತ್ರರಂಗದಲ್ಲಿ ಇವೆ. ಈ ಸಾಮಾಜಿಕ ಜಾಲತಾಣ ಬಂದ ಬಳಿಕವಂತೂ ನಟಿಯರ ಬಗ್ಗೆ ನಿಂದನೆ, ಕೀಳು ಹೇಳಿಕೆ ಇನ್ನಷ್ಟು ಹೆಚ್ಚಾಗಿದೆ. ಈ ಆನ್‌ಲೈನ್ ಕಿರುಕುಳದಿಂದ ಯಾವ ನಟಿಯರೂ ತಪ್ಪಿಸಿಕೊಳ್ಳಲಾಗಿಲ್ಲ. ಎಷ್ಟೋ ಮಂದಿ ನಟಿಯರು, 'ಇದು ಸಾಮಾನ್ಯ' ಎಂದು ಕೈತೊಳೆದು ಸುಮ್ಮನಾಗಿಬಿಟ್ಟಿದ್ದಾರೆ. ಆದರೆ ಕೆಲವರು ಮಾತ್ರ ಆನ್‌ಲೈನ್ ಕಿರುಕುಳದ ವಿರುದ್ಧ ಗಟ್ಟಿ ದನಿ ಎತ್ತುತ್ತಿದ್ದಾರೆ. ನಟಿ ಸೀರತ್ ಕಪೂರ್ ಇಂಥಹಾ ಒಂದು ಶ್ಲಾಘನೀಯ ಕಾರ್ಯ ಮಾಡಿದ್ದಾರೆ. ಸೀರತ್ ಕಪೂರ್ ಗ್ಲಾಮರಸ್ ಪಾತ್ರಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ. ಕೆಲ ದಿನಗಳ ಹಿಂದೆ ಸೀರತ್ ಅವರು ನಟ ಅಲ್ಲು ಅರ್ಜುನ್ ಜೊತೆಗಿನ ಚಿತ್ರಗಳನ್ನು ಹಂಚಿಕೊಂಡು ಅವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿದ್ದರು. ಖಾಸಗಿ ವಿಮಾನದಲ್ಲಿ ಅಲ್ಲು ಅರ್ಜುನ್ ಪಕ್ಕ ಕೂತು ತೆಗೆಸಿಕೊಂಡಿರುವ ಚಿತ್ರ ಅದಾಗಿತ್ತು. ಚಿತ್ರದಲ್ಲಿ ಸೀರತ್ ಕಪೂರ್ ತುಸು ಹಾಟ್ ಆಗಿ ಕಾಣುತ್ತಿದ್ದರು.

ಅಲ್ಲು ಅರ್ಜುನ್ ಎಂದಿನಂತೆ ಸ್ಟೈಲ್ ಆಗಿ ಸ್ಮೈಲ್ ಮಾಡುತ್ತಾ ಫೋಟೊಗೆ ಪೋಸು ನೀಡಿದ್ದರು. ಆದರೆ ಈ ಚಿತ್ರಕ್ಕೆ ಹಲವರು ಹಲವು ರೀತಿಯ ಕಮೆಂಟ್‌ಗಳನ್ನು ಮಾಡಿದ್ದರು.

ಒಬ್ಬ ವ್ಯಕ್ತಿಯಂತೂ 'ಸೀರತ್, ಅಲ್ಲು ಅರ್ಜುನ್‌ರ 'ಆಸ್ತಿ' ಎಂದು ಕಮೆಂಟ್ ಮಾಡಿದ್ದ. ನೆಟ್ಟಿಗನ ಕಮೆಂಟಿನಿಂದ ಸಿಟ್ಟಿಗೆದ್ದ ನಟಿ, ಆತನಿಗೆ ಅಲ್ಲಿಯೇ ಉತ್ತರ ಕೊಟ್ಟಿದ್ದಾರೆ.



# ನನ್ನನ್ನು ಯಾರೂ ಕಣ್ಣೆತ್ತಿ ನೋಡಲಿಲ್ಲ



ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ 45ನೇ ವರ್ಷಾಚರಣೆ ಮತ್ತು ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರ 70ನೇ ಜನ್ಮದಿನದ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸೂಪರ್ ಸ್ಟಾರ್ ರಜನಿಕಾಂತ್ ಅವರು ಆಶ್ರಮದಲ್ಲಿ ತಮಗಾದ ಒಂದು ಮರೆಯಲಾಗದ ಘಟನೆಯನ್ನು ನೆನಪಿಸಿಕೊಂಡಿದ್ದಾರೆ.

ಆ ಘಟನೆಯು ತಮ್ಮ ಅಹಂಕಾರವನ್ನು ಹೇಗೆ ಮಣ್ಣುಪಾಲಾಗಿಸಿತು ಎಂಬುದನ್ನು ಅವರು ಹಾಸ್ಯಭರಿತವಾಗಿ ವಿವರಿಸಿದ್ದಾರೆ. ವೇದಿಕೆಯಲ್ಲಿ ಅವರು ಮಾತನಾಡಿದ ವಿಡಿಯೋ ವೈರಲ್ ಆಗಿದೆ. ಆರಂಭದಲ್ಲಿ ಕೇವಲ ಎರಡು ದಿನಗಳ ಕಾಲ ಆಶ್ರಮದಲ್ಲಿ ಇರಲು ಯೋಜಿಸಿದ್ದ ರಜನಿಕಾಂತ್, ಅಲ್ಲಿನ ಸುಂದರ ಪರಿಸರಕ್ಕೆ ಮಾರುಹೋಗಿ ಬರೋಬ್ಬರಿ 15 ದಿನಗಳ ಕಾಲ ಅಲ್ಲೇ ಉಳಿದುಕೊಂಡರಂತೆ. 'ಸುತ್ತಲೂ ಹಸಿರು, ಕೆರೆ, ನಗುಮುಖದ ಜನರನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅಲ್ಲಿ ಆನೆ, ಕುದುರೆಗಳು ಮತ್ತು ನೂರಾರು ಹಸುಗಳಿದ್ದವು. ವಿಶೇಷವೆಂದರೆ ಅಲ್ಲಿನ ಒಂದು ಕುದುರೆಯ ಹೆಸರು ರಜಿನಿ ಎಂದಿತ್ತು' ಎನ್ನುವ ಮೂಲಕ ಪ್ರೇಕ್ಷಕರಲ್ಲಿ ನಗೆಹೊನಲು ಹರಿಸಿದರು.

ತಮ್ಮ ವೃತ್ತಿಜೀವನದ ಉತ್ತುಂಗದಲ್ಲಿದ್ದಾಗ ಆಶ್ರಮಕ್ಕೆ ಭೇಟಿ ನೀಡಿದ್ದ ರಜನಿಕಾಂತ್ ಅವರಿಗೆ ಗುರೂಜಿ ಒಮ್ಮೆ ಆಶ್ರಮದ ಸುತ್ತ ಒಂದು ರೌಂಡ್ ಹಾಕೋಣವೇ ಎಂದು ಕೇಳಿದರಂತೆ. 'ನಾನು ದೊಡ್ಡ ನಟನಾಗಿರುವುದರಿಂದ ಅಲ್ಲಿನ ಜನ ನನ್ನನ್ನು ಗುರುತಿಸಿ ಮುತ್ತಿಕೊಳ್ಳಬಹುದು, ಆಟೋಗ್ರಾಫ್‌ಗಾಗಿ ಮುಗಿಬೀಳಬಹುದು ಎಂದು ನಾನು ಸ್ವಲ್ಪ ಹಿಂಜರಿದೆ. ಅಲ್ಲಿ ತಮಿಳುನಾಡಿನ ನೂರಾರು ಜನರಿದ್ದರು. ಆದರೆ ಸತ್ಯ ಏನೆಂದರೆ, ಒಬ್ಬನೇ ಒಬ್ಬ ವ್ಯಕ್ತಿ ಕೂಡ ನನ್ನನ್ನು ಕಣ್ಣೆತ್ತಿಯೂ ನೋಡಲಿಲ್ಲ' ಎಂದು ರಜನಿಕಾಂತ್ ಹೇಳಿದರು.

'ನಾನು ಅಲ್ಲಿದ್ದ ಜನರಿಗೆ ಕೈಬೀಸುತ್ತಿದ್ದರೂ ಯಾರೂ ನನ್ನ ಕಡೆ ಗಮನ ಹರಿಸಲಿಲ್ಲ. ಫೋಟೋ, ಆಟೋಗ್ರಾಫ್ ಬಿಡಿ, ನನ್ನ ಜೊತೆ ಮಾತನಾಡಲೂ ಯಾರೂ ಬರಲಿಲ್ಲ.


ನಾನು ಅನೇಕ ರಾಜಕಾರಣಿಗಳು ಮತ್ತು ಉದ್ಯಮಿಗಳನ್ನು ಭೇಟಿ ಮಾಡಿದ್ದೇನೆ, ಆದರೆ ಈ ಅನುಭವ ನನ್ನ ಅಹಂಕಾರವನ್ನು ಸಂಪೂರ್ಣವಾಗಿ ಮುರಿಯಿತು. ಅಧ್ಯಾತ್ಮದ ಶಕ್ತಿಯ ಮುಂದೆ ನನ್ನ ಸ್ಟಾರ್‌ಡಮ್ ಏನೂ ಅಲ್ಲ ಎಂಬುದು ಅಂದು ನನಗೆ ಅರ್ಥವಾಯಿತು' ಎಂದು ಅವರು ಮನಬಿಚ್ಚಿ ಮಾತನಾಡಿದರು.



# ಕೊನೆಯುಸಿರೆಳೆದ ದಿಲೀಪ್ ರಾಜ್

'ಲವ್ ಮಾಕ್ಟೇಲ್ 3' ಸಿನಿಮಾದಲ್ಲಿ ದಿಲೀಪ್ ರಾಜ್ ಅವರು ಬಹಳ ಗಂಭೀರವಾದ ಮತ್ತು ಜವಾಬ್ದಾರಿಯುತವಾದ ವಕೀಲನ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು.


ಲಾಯರ್ ಪಾತ್ರಕ್ಕೆ ಬೇಕಾದ ಗಾಂಭೀರ್ಯ ಮತ್ತು ಸಂಯಮವನ್ನು ಅವರು ಬಹಳ ಅಚ್ಚುಕಟ್ಟಾಗಿ ತೆರೆಯ ಮೇಲೆ ತಂದಿದ್ದರು. ವೃತ್ತಿಜೀವನದ ಆರಂಭದಲ್ಲಿ ಚಾಕೊಲೇಟ್ ಹೀರೊ ಆಗಿ ಕಾಣಿಸಿಕೊಂಡಿದ್ದರು. ಕನ್ನಡ ಕಿರುತೆರೆ ಮತ್ತು ಬೆಳ್ಳಿತೆರೆಯಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದ ನಟ ದಿಲೀಪ್ ರಾಜ್ ಅವರು ನಿಧನ ಹೊಂದಿದ್ದಾರೆ. ಅವರಿಗೆ ಹೃದಯಾಘಾತವಾಯಿತು ಮತ್ತು ಅವರನ್ನು ಆಸ್ಪತ್ರೆಗೆ ದಾಖಲು ಮಾಡಿದರೂ ಯಾವುದೇ ಪ್ರಯೋಜನ ಆಗಿಲ್ಲ. ಈಗ ಅವರ ಶವವನ್ನು ಮನೆಗೆ ತೆಗೆದುಕೊಂಡು ಹೋಗಲಾಗುತ್ತಿದೆ. ಅಕಾಲಿಕ ನಿಧನವು ಅಭಿಮಾನಿಗಳಿಗೆ ಮತ್ತು ಚಿತ್ರೋದ್ಯಮಕ್ಕೆ ಆಘಾತ ತಂದಿದೆ. ಸುಮಾರು ಎರಡು ದಶಕಗಳ ಕಾಲ ನಟನೆಯಲ್ಲಿ ತೊಡಗಿದ್ದ ಅವರು, ತಮ್ಮ ವೃತ್ತಿಜೀವನದ ಕೊನೆಯ ಹಂತದವರೆಗೂ ಸಿನಿಮಾ ರಂಗದಲ್ಲಿ ಸಕ್ರಿಯರಾಗಿದ್ದರು ಎಂಬುದನ್ನು ಇಲ್ಲಿ ನೆನೆಯಲೇ ಬೇಕು. ವಿಶೇಷವೆಂದರೆ, ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಟನೆಯ ಸಾರ್ವಕಾಲಿಕ ಹಿಟ್ ಚಿತ್ರ 'ಮಿಲನ'ದಲ್ಲಿ ವಿಲನ್ ಪಾತ್ರ ಮಾಡುವ ಮೂಲಕ ಮನೆಮಾತಾಗಿದ್ದ ದಿಲೀಪ್, ತಮ್ಮ ಕೊನೆಯ ದಿನಗಳಲ್ಲಿ 'ಲವ್ ಮಾಕ್ಟೇಲ್ 3 ಚಿತ್ರದಲ್ಲಿ ಅವರು ವಕೀಲರ ಪಾತ್ರ ಮಾಡಿದ್ದರು. 'ಲವ್ ಮಾಕ್ಟೇಲ್ 3' ಸಿನಿಮಾದಲ್ಲಿ ದಿಲೀಪ್ ರಾಜ್ ಅವರು ಬಹಳ ಗಂಭೀರವಾದ ಮತ್ತು ಜವಾಬ್ದಾರಿಯುತವಾದ ವಕೀಲನ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಲಾಯರ್ ಪಾತ್ರಕ್ಕೆ ಬೇಕಾದ ಗಾಂಭೀರ್ಯ ಮತ್ತು ಸಂಯಮವನ್ನು ಅವರು ಬಹಳ ಅಚ್ಚುಕಟ್ಟಾಗಿ ತೆರೆಯ ಮೇಲೆ ತಂದಿದ್ದರು.



# ಕಮ್ಮಿನ್ಸ್‌ಗೆ ಮತ್ತೊಂದು ಶಾಕ್

ಗುಜರಾತ್ ಟೈಟಾನ್ಸ್ ವಿರುದ್ಧ ಹೀನಾಯ ಸೋಲು ಕಂಡ ಸನ್‌ರೈಸರ್ಸ್ ಹೈದರಾಬಾದ್ ನಾಯಕ ಪ್ಯಾಟ್ ಕಮ್ಮಿನ್ಸ್‌ಗೆ ಬಿಸಿಸಿಐ ದಂಡ ವಿಧಿಸಿದೆ. ನಿಧಾನಗತಿಯ ಓವರ್ ದರ ಕಾಯ್ದುಕೊಂಡಿದ್ದಕ್ಕಾಗಿ ಕಮ್ಮಿನ್ಸ್ 12 ಲಕ್ಷ ರೂ. ದಂಡ ತೆರಬೇಕಾಗಿದೆ.

ಕಮ್ಮಿನ್ಸ್ ಐಪಿಎಲ್ ನೀತಿ ಸಂಹಿತೆ ಉಲ್ಲಂಘಿಸಿದ್ದು, ಈ ತಪ್ಪಿಗೆ ಈ ಹಿಂದೆ ಹಲವು ನಾಯಕರು ದಂಡ ತೆತ್ತಿದ್ದಾರೆ. ಗುಜರಾತ್ ಟೈಟಾನ್ಸ್ ವಿರುದ್ಧ ಎರಡಂಕಿ ಮೊತ್ತಕ್ಕೆ ಅಂದರೆ ಕೇವಲ 86 ರನ್‌ಗಳಿಗೆ ಆಲೌಟ್ ಆಗಿ ಹೀನಾಯ ಸೋಲಿನ ಅವಮಾನಕ್ಕೆ ಳಗಾಗಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮ್ಮಿನ್ಸ್‌ಗೆ ಇದೀಗ ಬಿಸಿಸಿಐ ಕೂಡ ಬಿಗ್ ಶಾಕ್ ನೀಡಿದೆ. ಗುಜರಾತ್ ವಿರುದ್ಧದ ಪಂದ್ಯದಲ್ಲಿ ನಿಗದಿತ ಸಮಯಕ್ಕೆ ಓವರ್ ಮುಗಿಸದ ಸನ್‌ರೈಸಸ್ ತಂಡದ ನಾಯಕ ಪ್ಯಾಟ್ ಕಮ್ಮಿನ್ಸ್‌ಗೆ ಪಂದ್ಯ ಶುಲ್ಕವನ್ನು ದಂಡವಾಗಿ ವಿಧಿಸಲಾಗಿದೆ. ಅಂದರೆ ಕಮ್ಮಿನ್ಸ್ 12 ಲಕ್ಷ ರೂ ದಂಡ ಕಟ್ಟಬೇಕಾಗಿದೆ. ಆದಾಗ್ಯೂ, ಐಪಿಎಲ್ 2026 ರಲ್ಲಿ ಕಮ್ಮಿನ್ಸ್‌ಗೂ ಮೊದಲು ಹಲವು ತಂಡಗಳ ನಾಯಕರು ಈ ತಪ್ಪಗೆ ದಂಡ ತೆತ್ತಿದ್ದಾರೆ. ಅದರಲ್ಲೂ ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಈಗಾಗಲೇ ಎರಡು ಬಾರಿ ನಿಧಾನಗತಿಯ ಓವರ್ ದರ ಉಲ್ಲಂಘನೆಗಾಗಿ ದಂಡ ಕಟ್ಟಿದ್ದಾರೆ.



**ಕಮ್ಮಿನ್ಸ್‌ಗೆ 12 ಲಕ್ಷ ರೂ. ದಂಡ**

ಪ್ಯಾಟ್ ಕಮ್ಮಿನ್ಸ್ ಮೊದಲ ಬಾರಿಗೆ ಈ ಶಿಕ್ಷೆಗೆ ಗುರಿಯಾಗಿರುವುದರಿಂದ ಅವರಿಗೆ 12 ಲಕ್ಷ ರೂಪಾಯಿಗಳನ್ನು ದಂಡವಾಗಿ ವಿಧಿಸಲಾಗಿದೆ. ನಿಧಾನಗತಿಯ ಓವರ್ ದರ ಉಲ್ಲಂಘನೆಯು ಐಪಿಎಲ್ ನೀತಿ ಸಂಹಿತೆಯ ಆರ್ಟಿಕಲ್ 2.22 ರ ಉಲ್ಲಂಘನೆಯಾಗಿದೆ, ಇದಕ್ಕಾಗಿ ಕನಿಷ್ಠ ದಂಡ 12 ಲಕ್ಷ ರೂಪಾಯಿಗಳಾಗಿದೆ. ಇನ್ನು ಈ ಶಿಕ್ಷೆಗೆ ಗುರಿಯಾದವರಲ್ಲಿ ಪ್ಯಾಟ್ ಕಮ್ಮಿನ್ಸ್‌ಗೂ ಮೊದಲು ಶ್ರೇಯಸ್ ಅಯ್ಯರ್, ಶುಭ್‌ಮನ್ ಗಿಲ್, ಅಜಿಂಕ್ಯ ರಹಾನೆ, ಹಾರ್ದಿಕ್ ಪಾಂಡ್ಯ, ರುತುರಾಜ್ ಗಾಯಕ್ವಾಡ್ ಮತ್ತು ಅಕ್ಷರ್ ಪಟೇಲ್ ಕೂಡ ಸೇರಿದ್ದಾರೆ.

ಸನ್‌ರೈಸರ್ಸ್‌ಗೆ ಹೀನಾಯ ಸೋಲು ಪಂದ್ಯದ ವಿಚಾರಕ್ಕೆ ಬರುವುದಾದರೆ.. ಮೇಲೆ ಹೇಳಿದಂತೆ ಪ್ಯಾಟ್ ಕಮ್ಮಿನ್ಸ್ ನೇತೃತ್ವದ ಸನ್‌ರೈಸರ್ಸ್ ಹೈದರಾಬಾದ್ ತಂಡ ಗುಜರಾತ್ ಟೈಟಾನ್ಸ್ ವಿರುದ್ಧ 82 ರನ್‌ಗಳ ಸೋಲು ಅನುಭವಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟಾನ್ಸ್, ಸಾಯಿ ಸುದರ್ಶನ್ ಮತ್ತು ವಾಷಿಂಗ್ಟನ್ ಸುಂದರ್ ಅವರ ಬಲಿಷ್ಠ ಇನ್ನಿಂಗ್ಸ್‌ನಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 168 ರನ್ ಗಳಿಸಿತು.

# ಧೋನಿ ಅಭಿಮಾನಿಗಳಿಗೆ ಕೊನೆಗೂ ಸಿಹಿಸುದ್ದಿ

ತವರಿನಲ್ಲಿ ಧೋನಿ ಕೊನೆ ಪಂದ್ಯ



ಐಪಿಎಲ್ 2026ರಲ್ಲಿ ಸಿಎಸ್‌ಕೆ ಪ್ಲೇಆಫ್ ಭವಿಷ್ಯ ಅನಿಶ್ಚಿತವಾಗಿದ್ದು, ಧೋನಿ ಗಾಯದಿಂದಾಗಿ ಇನ್ನೂ ಕಣಕ್ಕಿಳಿದಿಲ್ಲ. ಲಕ್ನೋ ವಿರುದ್ಧದ ಪಂದ್ಯಕ್ಕೆ ಧೋನಿ ತಂಡದೊಂದಿಗೆ ಪ್ರಯಾಣಿಸುತ್ತಿದ್ದರೂ, ಅವರ ಆಡುವಿಕೆ ಖಚಿತವಿಲ್ಲ. ತವರು ನೆಲದಲ್ಲಿ ಮೇ 18 ರಂದು ನಡೆಯುವ ಕೊನೆಯ ಲೀಗ್ ಪಂದ್ಯ ಧೋನಿಯ ಐಪಿಎಲ್ ವಿದಾಯ ಪಂದ್ಯವಾಗುವ ಸಾಧ್ಯತೆಯಿದೆ. ಅಭಿಮಾನಿಗಳಿಗೆ ಧೋನಿ ಆಟ ನೋಡಲು ಕಾತರ.


ಚೆನ್ನೈ ಸೂಪರ್ ಕಿಂಗ್ಸ್ ತಂಡವು ಐಪಿಎಲ್ 2026 ರಲ್ಲಿ ಇದುವರೆಗೆ 11 ಪಂದ್ಯಗಳನ್ನು ಆಡಿದೆ. ಅಂದರೆ ಲೀಗ್ ಹಂತದಲ್ಲಿ ಎಲ್ಲೋ ಆರ್ಮಿಗೆ ಇನ್ನು ಉಳಿದಿರುವುದು ಕೇವಲ ಮೂರೇ ಮೂರು ಪಂದ್ಯಗಳು. ಈ ಮೂರು ಪಂದ್ಯಗಳನ್ನು ಗೆದ್ದರೂ ಸಿಎಸ್‌ಕೆ ಪ್ಲೇಆಫ್‌ಗೇರಬೇಕೆಂದರೆ ಉಳಿದ ತಂಡಗಳ ಫಲಿತಾಂಶವನ್ನು ಅವಲಂಬಿಸಬೇಕಾಗಿದೆ. ಇದೆಲ್ಲದರ ನಡುವೆ ಕೋಟ್ಯಾಂತರ ಅಭಿಮಾನಿಗಳನ್ನು ಕಾಡುತ್ತಿರುವ ಪ್ರಶ್ನೆ ಎಂದರೆ, ಧೋನಿ ಯಾವಾಗ ಆಡುತ್ತಾರೆ ಎಂಬುದು. ಪ್ರಸ್ತುತ ಧೋನಿ, ಗಾಯದಿಂದಾಗಿ ತಂಡದಿಂದ ಹೊರಗುಳಿದಿದ್ದಾರೆ. ಹೀಗಾಗಿ ಧೋನಿ ಇಲ್ಲಿಯವರೆಗೆ ಒಂದೇ ಒಂದು ಪಂದ್ಯವನ್ನು ಆಡಿಲ್ಲ. ಹೀಗಿರುವಾಗ ಸಿಎಸ್‌ಕೆ ತನ್ನ ಮುಂದಿನ ಪಂದ್ಯವನ್ನು ಲಕ್ನೋ ಸೂಪರ್‌ಜೈಂಟ್ಸ್ ವಿರುದ್ಧ ಆಡಲಿದ್ದು, ಈ ಪಂದ್ಯದಲ್ಲಾದರೂ ಧೋನಿ ಕಣಕ್ಕಿಳಿಯುತ್ತಾರಾ ಎಂಬ ಪ್ರಶ್ನೆ ಅಭಿಮಾನಿಗಳಲ್ಲಿ ಮೂಡಿದೆ.

ವಾಸ್ತವವಾಗಿ ಐಪಿಎಲ್ ಆರಂಭಕ್ಕೂ ಮುನ್ನವೇ ಧೋನಿ ಗಾಯಕ್ಕೆ ತುತ್ತಾಗಿದ್ದರು. ಹೀಗಾಗಿ ಧೋನಿ ಆರಂಭಿಕ ಕೆಲವು ಪಂದ್ಯಗಳನ್ನು ಆಡುವುದಿಲ್ಲ ಎಂದು ಫ್ರಾಂಚೈಸಿ ಹೇಳಿತ್ತು. ಆದರೀಗ ಲೀಗ್ ಹಂತ ಮುಗಿಯುವುದಕ್ಕೆ ಬಂದರೂ ಧೋನಿ ಆಡುವುದರ ಬಗ್ಗೆ ಸುಳಿವು ಸಿಕ್ಕಿಲ್ಲ. ಇದೀಗ ಧೋನಿ ಅಭಿಮಾನಿಗಳಿಗೆ ಸಮಾಧಾನಕರ ಸುದ್ದಿ ಸಿಕ್ಕಿದ್ದು, ಲಕ್ನೋ ವಿರುದ್ಧದ ಪಂದ್ಯಕ್ಕೆ ಧೋನಿ ತಂಡದೊಂದಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂಬ ಮಾಹಿತಿ ಇದೆ.

ಸಿಎಸ್‌ಕೆ ಸಿಇಒ ಕಾಶಿ ವಿಶ್ವನಾಥನ್ ಅವರ ಹೇಳಿಕೆಯನ್ನು ಉಲ್ಲೇಖಿಸಿ ಕ್ರಿಕ್‌ಬಜ್ ವರದಿ ಮಾಡಿದ್ದು, ಲಕ್ನೋಗೆ ಸಿಎಸ್‌ಕೆ ತಂಡ ಪ್ರಯಾಣ ಮಾಡಲಿರುವ ಇಂಡಿಗೊ ವಿಮಾನದಲ್ಲಿ ಒಟ್ಟು 60 ಟಿಕೆಟ್‌ಗಳನ್ನು ಬುಕ್ ಮಾಡಲಾಗಿದೆ. ಈ 60 ಪ್ರಯಾಣಿಕರಲ್ಲಿ ಧೋನಿ ಕೂಡ ಸೇರಿದ್ದಾರೆ. ಅಂದರೆ ಧೋನಿ ತಂಡದೊಂದಿಗೆ ಲಕ್ನೋಗೆ ಪ್ರಯಾಣಿಸಲ್ಲಿದ್ದು, ಅಲ್ಲಿ ಅವರು ತಂಡದೊಂದಿಗೆ ಇರಲಿದ್ದಾರೆ. ಆದಾಗ್ಯೂ ಧೋನಿ ಈ ಪಂದ್ಯದಲ್ಲಿ ಆಡುತ್ತಾರಾ ಅಥವಾ ಇಲ್ಲವಾ ಎಂಬುದು ಇನ್ನು ಖಚಿತವಾಗಿಲ್ಲ. ಒಂದು ವೇಳೆ ಧೋನಿ ಲಕ್ನೋ ವಿರುದ್ಧವೂ ಕಣಕ್ಕಿಳಿಯದಿದ್ದರೆ, ಮೇ 18 ರಂದು ನಡೆಯಲಿರುವ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಧೋನಿ ಆಡುವ ಸಾಧ್ಯತೆಗಳಿವೆ.

ಏಕೆಂದರೆ ಸಿಎಸ್‌ಕೆ ತನ್ನ ತವರು ನೆಲವಾದ ಎಂಎ ಚಿದಂಬರಂ ಮೈದಾನದಲ್ಲಿ ಕೊನೆಯ ಲೀಗ್ ಪಂದ್ಯವನ್ನು ಆಡಲಿದೆ. ಈ ಪಂದ್ಯದ ಬಳಿಕ ಸಿಎಸ್‌ಕೆ ಈ ಆವೃತ್ತಿಯಲ್ಲಿ ಯಾವ ಪಂದ್ಯವನ್ನು ಇಲ್ಲಿ ಆಡುವುದಿಲ್ಲ. ಹೀಗಾಗಿ ನಿವೃತ್ತಿ ಅಂಚಿನಲ್ಲಿರುವ ಧೋನಿ, ಸಿಎಸ್‌ಕೆಯ ತವರು ನೆಲದಲ್ಲಿ ತಮ್ಮ ಕೊನೆಯ ಪಂದ್ಯವನ್ನು ಆಡಿ ಐಪಿಎಲ್‌ಗೆ ವಿದಾಯ ಹೇಳುವ ಸಾಧ್ಯತೆಗಳಿವೆ.

# ಈ ಸೀಸನ್ ಬಳಿಕ ಈ ಐದು ತಂಡಗಳ ನಾಯಕತ್ವದಲ್ಲಿ ಬದಲಾವಣೆ



2026 ರ ಐಪಿಎಲ್‌ನಲ್ಲಿ ಕೆಲವು ಬಲಿಷ್ಠ ತಂಡಗಳು ನಿರಸ ಪ್ರದರ್ಶನ ನೀಡಿವೆ. ಇದಕ್ಕೆ ಕಾರಣ ತಂಡದಲ್ಲಿರುವ ಆಟಗಾರರ ಕಳಪೆ ಪ್ರದರ್ಶನ ಒಂದೆಡೆಯಾದರೆ, ತಂಡದ ನಾಯಕರ ಕಳಪೆ ನಾಯಕತ್ವವೂ ಪ್ರಮುಖ ಕಾರಣವಾಗಿದೆ. ಹೀಗಾಗಿ ಲೀಗ್ ಹಂತದಲ್ಲೇ ಪ್ರಯಾಣ ಮುಗಿಸುವ ಸನಿಹದಲ್ಲಿರುವ ಐದು ತಂಡಗಳು ಮುಂದಿನ ಆವೃತ್ತಿಯಲ್ಲಿ ಹೊಸ ನಾಯಕರ ನಾಯಕತ್ವದಲ್ಲಿ ಕಣಕ್ಕಿಳಿಯುವ ಸಾಧ್ಯತೆ ಇದೆ.

**ರಿಷಭ್ ಪಂತ್:** ಲಕ್ನೋ ತಂಡವು 2025 ರ ಐಪಿಎಲ್‌ನಲ್ಲಿ ಏಳನೇ ಸ್ಥಾನ ಪಡೆದುಕೊಂಡಿತ್ತು. ಆಡಿದ್ದ 14 ಪಂದ್ಯಗಳಲ್ಲಿ ಎಂಟರಲ್ಲಿ ಸೋತಿತ್ತು. ಇದೀಗ 2026 ರಲ್ಲಿಯೂ ಆಡಿರುವ 11 ಪಂದ್ಯಗಳಲ್ಲಿ ಎಂಟರಲ್ಲಿ ಸೋತು ಕೊನೆಯ ಸ್ಥಾನದಲ್ಲಿದೆ. ಈ ತಂಡವು ಪ್ಲೇಆಫ್ ರೇಸ್‌ನಿಂದ ಹೊರಗಿದೆ. ಹೀಗಾಗಿ ಮುಂದಿನ ಸೀಸನ್‌ನಲ್ಲಿ ಲಕ್ನೋ ತಂಡಕ್ಕೆ ಹೊಸ ನಾಯಕ ಸಿಗಬಹುದು.

**ಅಕ್ಷರ್ ಪಟೇಲ್:** ಅಕ್ಷರ್ ಪಟೇಲ್ ನಾಯಕತ್ವದಲ್ಲಿ, ಡೆಲ್ಲಿ ಕ್ಯಾಪಿಟಲ್ಸ್ ತಂಡವು 2025 ರಲ್ಲಿಯೂ ಪ್ಲೇಆಫ್ ತಲುಪಲು ವಿಫಲವಾಗಿತ್ತು. ಇದೀಗ, ತಂಡವು 2026 ರಲ್ಲಿಯೂ ಪ್ಲೇಆಫ್ ತಲುಪುವ ಸಾಧ್ಯತೆಯಿಲ್ಲ. ನಾಯಕನಾದ ನಂತರ ಅಕ್ಷರ ಪಟೇಲ್ ಅವರ ಪ್ರದರ್ಶನವೂ ಕುಸಿದಿದೆ. ಅದಕ್ಕಾಗಿಯೇ ದೆಹಲಿ ತಂಡವು 2027 ರ ಆವೃತ್ತಿಗೆ ಹೊಸ ನಾಯಕನನ್ನು ನೇಮಿಸಬಹುದು.

**ಹಾರ್ದಿಕ್ ಪಾಂಡ್ಯ:** ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್‌ನ ಪ್ರದರ್ಶನವು ಈ ಸೀಸನ್‌ನಲ್ಲಿ ಉತ್ತಮವಾಗಿಲ್ಲ. ಬಲಿಷ್ಠ ಅಂತರರಾಷ್ಟ್ರೀಯ ಆಟಗಾರರ ಸಂಯೋಜನೆ, ತಂಡದೊಳಗಿನ ಅಂತಃಕಲಹ ಮತ್ತು ಫಾಲೋ-ಅನ್‌ಫಾಲೋ ವಿವಾದ ಇವೆಲ್ಲವೂ ಫ್ರಾಂಚೈಸಿಯನ್ನು ಪರಿಶೀಲನೆಗೆ ಒಳಪಡಿಸಿವೆ. ಇದೆಲ್ಲದರ ನಡುವೆ ಹಾರ್ದಿಕ್ ಮುಂಬೈ ತಂಡವನ್ನು ತೊರೆಯಬಹುದು ಎಂಬ ವದಂತಿಗಳು ಹರಡಿವೆ. ಪರಿಣಾಮವಾಗಿ, ಮುಂಬೈ ಇಂಡಿಯನ್ಸ್ 2027 ರಲ್ಲಿ ಹಾರ್ದಿಕ್ ಹೊರತುಪಡಿಸಿ ಬೇರೆಯವರನ್ನು ನಾಯಕನನ್ನಾಗಿ ನೇಮಿಸುವ ಸಾಧ್ಯತೆಯಿದೆ.

**ರಹಾನೆ:** ಕಳೆದ ಐಪಿಎಲ್‌ನಲ್ಲಿ ಏಳು ಪಂದ್ಯಗಳಲ್ಲಿ ಸೋತಿದ್ದ ಕೆಕೆಆರ್, ಪ್ರಸ್ತುತ ಸೀಸನ್‌ನಲ್ಲೂ ಕಳಪೆ ಆರಂಭವನ್ನು ಪಡೆದುಕೊಂಡಿತು. ನಂತರ ತಂಡವು ಸತತ ನಾಲ್ಕು ಪಂದ್ಯಗಳನ್ನು ಗೆದ್ದು ಪ್ಲೇಆಫ್‌ಗೆ ಪೈಪೋಟಿಯಲ್ಲಿದೆ. ಆದಾಗ್ಯೂ ಕೆಕೆಆರ್ ತನ್ನ ಎಲ್ಲಾ ಪಂದ್ಯಗಳನ್ನು ಗೆದ್ದರೂ ಪ್ಲೇಆಫ್‌ಗೇರುವ ಅವಕಾಶಗಳು ಕಡಿಮೆ. ಪರಿಣಾಮವಾಗಿ, ಕೆಕೆಆರ್ 2027 ರ ಸೀಸನ್‌ಗೂ ಮೊದಲು ಹೊಸ ನಾಯಕನನ್ನು ನೇಮಿಸಬಹುದು.

**ರುತುರಾಜ್ ಗಾಯಕ್ವಾಡ್:** 2025 ರ ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ನ ಪ್ರದರ್ಶನ ಕಳಪೆಯಾಗಿತ್ತು, 14 ಪಂದ್ಯಗಳಲ್ಲಿ 10 ಪಂದ್ಯಗಳಲ್ಲಿ ಸೋತು ಕೊನೆಯ ಸ್ಥಾನ ಪಡೆದಿತ್ತು. ಈ ಆವೃತ್ತಿಯಲ್ಲಿಯೂ ತಂಡದ ಪ್ರದರ್ಶನ ಕಳಪೆಯಾಗಿದ್ದು ಪ್ಲೇಆಫ್ ತಲುಪಲು ಹೆಣಗಾಡುತ್ತಿದೆ. ನಾಯಕತ್ವದ ಒತ್ತಡದಲ್ಲಿ ರುತುರಾಜ್ ಅವರ ಬ್ಯಾಟಿಂಗ್ ಪ್ರದರ್ಶನವೂ ಕುಸಿದಿದೆ. ಸಂಜು ಸ್ಯಾಮ್ಸನ್ ಅವರಂತಹ ಅನುಭವಿ ಆಟಗಾರ ತಂಡದಲ್ಲಿರುವ ಕಾರಣ ಅವರಿಗೆ ನಾಯಕತ್ವ ಸಿಗಬಹುದು.

# ಐಪಿಎಲ್ ಆಟಗಾರರಿಗೆ ಬಿಸಿಸಿಐ ವಾರ್ನಿಂಗ್ ಜಾರಿಯಾಯ್ತು ಕಟು ನಿಯಮ!



ಐಪಿಎಲ್ 2026ರ ಟೂರ್ನಿಯಲ್ಲಿ ಆಟಗಾರರು ಮತ್ತು ಫ್ರಾಂಚೈಸಿಗಳ ನಡವಳಿಕೆಯಲ್ಲಿ ಶಿಸ್ತು ಉಲ್ಲಂಘನೆಯಾಗಿರುವ ಹಿನ್ನೆಲೆಯಲ್ಲಿ, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಕಠಿಣ ನಿಯಮಗಳನ್ನು ಜಾರಿಗೆ ತಂದಿದೆ. ''ಈ ಬಾರಿಯ ಐಪಿಎಲ್‌ನಲ್ಲಿ ಸಾಕಷ್ಟು ಅಶಿಸ್ತು ಕಂಡುಬಂದಿದ್ದು, ಮಂಡಳಿಗೆ ಮುಜುಗರ ತರುವಂತಹ ಹಲವು ಘಟನೆಗಳು ನಡೆದಿವೆ. ಹೀಗಾಗಿ ಕಟ್ಟುನಿಟ್ಟಿನ ಮಾರ್ಗಸೂಚಿಗಳನ್ನು ಹೊರಡಿಸಲು ನಾವು ನಿರ್ಬಂಧಿತರಾಗಿದ್ದೇವೆ'' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಆಟಗಾರರ ಹೋಟೆಲ್ ಕೊಠಡಿಗಳು, ತಂಡದ ಬಸ್‌ಗಳು ಮತ್ತು ಡಗೌಟ್‌ಗಳಂತಹ ಸುರಕ್ಷಿತ ವಲಯಗಳಿಗೆ ಅನಧಿಕೃತ ವ್ಯಕ್ತಿಗಳು ಪ್ರವೇಶಿಸುತ್ತಿರುವುದು ಬಿಸಿಸಿಐ ಗಮನಕ್ಕೆ ಬಂದಿದೆ.

ಅಪರಿಚಿತರು ಮತ್ತು ಸಾಮಾಜಿಕ ಮಾಧ್ಯಮ ಪ್ರಭಾವಿಗಳು ಆಟಗಾರರನ್ನು ಸುಲಭವಾಗಿ ಭೇಟಿಯಾಗುತ್ತಿರುವುದರಿಂದ ಭ್ರಷ್ಟಾಚಾರ ನಿರೋಧಕ ದಳ ಭದ್ರತಾ ಲೋಪದ ಎಚ್ಚರಿಕೆ ನೀಡಿದೆ. ಲೈವ್ ಪಂದ್ಯಗಳ ಸಮಯದಲ್ಲಿ ಕೆಲವು ಫ್ರಾಂಚೈಸಿ ಮಾಲೀಕರು ಡಗೌಟ್ ಪ್ರವೇಶಿಸಿ ಆಟಗಾರರನ್ನು ಅಪ್ಪಿಕೊಳ್ಳುವುದು ಮತ್ತು ಅವರೊಂದಿಗೆ ಸಂವಹನ ನಡೆಸಿ ನಿಯಮ ಉಲ್ಲಂಘಿಸುತ್ತಿರುವುದು ಕಂಡುಬಂದಿದೆ.

ಆಟಗಾರರು ತಮ್ಮ ಹೋಟೆಲ್ ಕೊಠಡಿಗಳು ಮತ್ತು ತರಬೇತಿ ಅವಧಿಗಳ ರಹಸ್ಯ ದೃಶ್ಯಗಳನ್ನು ರೀಲ್ಸ್ ಮಾಡಲು ಸಾಮಾಜಿಕ ಮಾಧ್ಯಮ ಕ್ರಿಯೇಟರ್‌ಗಳಿಗೆ ಅವಕಾಶ ನೀಡುತ್ತಿದ್ದು, ಅವು ಸಾರ್ವಜನಿಕವಾಗಿ ಸೋರಿಕೆಯಾಗುತ್ತಿವೆ.

**ಡ್ರೆಸ್ಸಿಂಗ್ ರೂಮ್‌ನಲ್ಲಿ ನಿಯಮ ಬಾಹಿರ ವರ್ತನೆ:** ರಾಜಸ್ಥಾನ್ ರಾಯಲ್ಸ್ ತಂಡದ ರಿಯಾನ್ ಪರಾಗ್ ಡ್ರೆಸ್ಸಿಂಗ್ ರೂಮ್‌ನಲ್ಲಿ ವೇಪಿಂಗ್ ಮಾಡುತ್ತಾ ಸಿಕ್ಕಿಬಿದ್ದು ದಂಡನೆಗೆ ಒಳಗಾಗಿದ್ದರು. ಅಲ್ಲದೆ ಮತ್ತೊಂದು ಘಟನೆಯಲ್ಲಿ ಮ್ಯಾನೇಜರ್ ಒಬ್ಬರು ಡಗೌಟ್ ಬಳಿ ಮೊಬೈಲ್ ಬಳಸಿ ದಂಡ ತೆತ್ತಿದ್ದರು.

ಟೀಮ್ ಮ್ಯಾನೇಜರ್ ಅವರ ಲಿಖಿತ ಅನುಮತಿಯಿಲ್ಲದೆ ಆಟಗಾರರ ಕೊಠಡಿಗಳಿಗೆ ಯಾರೂ ಪ್ರವೇಶಿಸುವಂತಿಲ್ಲ. ಸ್ನೇಹಿತರು, ಸಂಬಂಧಿಕರು ಅಥವಾ ಅತಿಥಿಗಳನ್ನು ಹೋಟೆಲ್‌ನ ಸಾರ್ವಜನಿಕ ಸ್ಥಳಗಳಲ್ಲಿ ಮಾತ್ರ ಭೇಟಿಯಾಗಬೇಕು.

**ಮಾಹಿತಿ ನೀಡುವುದು ಕಡ್ಡಾಯ:** ಹೋಟೆಲ್‌ನಿಂದ ಹೊರಹೋಗುವ ಮುನ್ನ ಭದ್ರತಾ ಅಧಿಕಾರಿಗಳಿಗೆ ಕಡ್ಡಾಯವಾಗಿ ಮಾಹಿತಿ ನೀಡಬೇಕು.

ಪಂದ್ಯ ನಡೆಯುವಾಗ ಫ್ರಾಂಚೈಸಿ ಮಾಲೀಕರು ಡಗೌಟ್ ಅಥವಾ ಡ್ರೆಸ್ಸಿಂಗ್ ರೂಮ್ ಪ್ರವೇಶಿಸುವಂತಿಲ್ಲ. ಆಟಗಾರರ ಹೋಟೆಲ್ ಕೊಠಡಿಗಳು, ತಂಡದ ಬಸ್‌ಗಳು ಮತ್ತು ಡಗೌಟ್‌ಗಳಂತಹ ಸುರಕ್ಷಿತ ವಲಯಗಳಿಗೆ ಅನಧಿಕೃತ ವ್ಯಕ್ತಿಗಳ ಪ್ರವೇಶವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಮೈದಾನದಲ್ಲಿರುವ ಪ್ರತಿಯೊಬ್ಬರೂ ತಮ್ಮ ಮಾನ್ಯತೆ ಪಡೆದ ಕಾರ್ಡ್‌ಗಳನ್ನು ಕಡ್ಡಾಯವಾಗಿ ಧರಿಸಿರಬೇಕು.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id**: udayavahininews@yahoo.com** , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**